# ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಅಧಿನಿಯಮ, 1981

**15.10.2010 ರ ಭಾರತ ವಿಶೇಷ ರಾಜಪತ್ರದ IX ನೇ ಭಾಗದ 1 ನೇ ವಿಭಾಗದ 43 ನೇ ಸಂಪುಟದ 1 ನೇ ಸಂಚಿಕೆಯಲ್ಲಿ 2 ರಿಂದ 40 ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ.**

## ವಿಷಯಾನುಕ್ರಮಣಿಕೆ

**ಪ್ರಕರಣಗಳು:**


### ಅಧ್ಯಾಯ – I

### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ – II

### ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಸ್ಥಾಪನೆ ಮತ್ತು ಅದರ ಬಂಡವಾಳ

3. ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಸ್ಥಾಪನೆ ಮತ್ತು ನಿಗಮನ
4. ಬಂಡವಾಳ

### ಅಧ್ಯಾಯ – III

### ರಾಷ್ಟ್ರೀಯ ಬ್ಯಾಂಕಿನ ವ್ಯವಸ್ಥಾಪನೆ

5. ವ್ಯವಸ್ಥಾಪನೆ
6. ನಿರ್ದೇಶಕರ ಮಂಡಲಿ
7. ಅಧ್ಯಕ್ಷನ ಮತ್ತು ಇತರ ನಿರ್ದೇಶಕರ ಪದಾವಧಿ, ನಿವೃತ್ತಿ ಮತ್ತು ಫೀಜುಗಳ ಸಂದಾಯ
8. ವ್ಯವಸ್ಥಾಪಕ ನಿರ್ದೇಶಕನ ಮತ್ತು ಪೂರ್ಣಕಾಲಿಕ ನಿರ್ದೇಶಕರ ಪದಾವಧಿ, ಸೇವಾ ಷರತ್ತುಗಳು, ಇತ್ಯಾದಿ
9. ಅನರ್ಹತೆಗಳು
10. ನಿರ್ದೇಶಕರು ಪದವನ್ನು ತೆರವು ಮಾಡುವುದು ಮತ್ತು ಅದಕ್ಕೆ ರಾಜೀನಾಮೆ ನೀಡುವುದು
11. ವ್ಯವಸ್ಥಾಪಕ ನಿರ್ದೇಶಕನ ಪದವು ಆಕಸ್ಮಿಕವಾಗಿ ಖಾಲಿಯಾಗುವುದು
12. ಮಂಡಲಿಯ ಸಭೆಗಳು
13. ರಾಷ್ಟ್ರೀಯ ಬ್ಯಾಂಕಿನ ಸಮಿತಿಗಳು
14. ಸಲಹಾ ಪರಿಷತ್ತು
15. ಕೆಲವು ಸಂದರ್ಭಗಳಲ್ಲಿ ಮಂಡಲಿಯ ಅಥವಾ ಅದರ ಸಮಿತಿಯ ಸದಸ್ಯನು ಸಭೆಗಳಲ್ಲಿ ಭಾಗವಹಿಸದಿರುವುದು

### ಅಧ್ಯಾಯ – IV

### ರಾಷ್ಟ್ರೀಯ ಬ್ಯಾಂಕಿಗೆ ವ್ಯವಹಾರದ ವರ್ಗಾವಣೆ

16. ಕೃಷಿ ಪುನರ್‌ವಿತ್ತೀಯ ಮತ್ತು ಅಭಿವೃದ್ಧಿ ನಿಗಮದ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ
17. ನಿಗಮದ ವಿಸರ್ಜನೆ ಮತ್ತು 1963ರ ಅಧಿನಿಯಮ 10ರ ನಿರಸನ
18. ರಿಸರ್ವ್ ಬ್ಯಾಂಕಿನಿಂದ ವ್ಯವಹಾರಗಳ ವರ್ಗಾವಣೆ

## ಅಧ್ಯಾಯ – V

### ರಾಷ್ಟ್ರೀಯ ಬ್ಯಾಂಕ್ ಸಾಲಗಳನ್ನು ಎತ್ತುವುದು

19. ರಾಷ್ಟ್ರೀಯ ಬ್ಯಾಂಕ್ ಸಾಲಗಳನ್ನು ಎತ್ತುವುದು
20. ವಿದೇಶಿ ಕರೆನ್ಸಿಯಲ್ಲಿ ಸಾಲಗಳನ್ನು ಎತ್ತುವುದು

## ಅಧ್ಯಾಯ – VI

### ರಾಷ್ಟ್ರೀಯ ಬ್ಯಾಂಕಿನ ಸಾಲ ನೀಡಿಕೆ ಪ್ರಕಾರ್ಯಗಳು

21. ಉತ್ಪಾದನೆ ಮತ್ತು ಕ್ರಯ ವಿಕ್ರಯ ವ್ಯವಹಾರಕ್ಕೆ ಸಾಲ ನೀಡಿಕೆ
22. ಉತ್ಪಾದನಾ ಸಾಲ ನೀಡಿಕೆಗಾಗಿ ಪರಿವರ್ತನ ಸಾಲ
23. ಕುಶಲಕರ್ಮಿಗಳಿಗೆ, ಸಣ್ಣ ಪ್ರಮಾಣದ ಕೈಗಾರಿಕೆಗಳು ಮೊದಲಾದವುಗಳಿಗೆ ಸಾಲಗಳನ್ನು ಪುನರ್ ನಿಗದಿಪಡಿಸುವುದು
24. ಮಧ್ಯಮಾವದಿ ಹೂಡಿಕೆಗಾಗಿ ಸಾಲ ನೀಡುವುದು
25. ಇತರ ಹೂಡಿಕೆಗಾಗಿ ಸಾಲ ನೀಡುವುದು
26. ಷೇರುಗಳ ಖರೀದಿ ಮತ್ತು ಮಾರಾಟ
27. ಷೇರು ಬಂಡವಾಳ ವಂತಿಗೆಗಾಗಿ ರಾಜ್ಯ ಸರ್ಕಾರಗಳಿಗೆ ಸಾಲಗಳು
27ಎ. ರಾಜ್ಯ ಸರ್ಕಾರ, ಉದ್ಯಮಗಳು, ಇತ್ಯಾದಿಗಳಿಗೆ ಸಾಲಗಳು
28. ಸಾಲಕ್ಕಾಗಿ ಭದ್ರತೆ
29. ನ್ಯಾಸದಲ್ಲಿ ಧಾರಣ ಮಾಡಬೇಕಾದ ಮೊಬಲಗು ಮತ್ತು ಭದ್ರತಾ ಪತ್ರಗಳು
30. ನೇರ ಸಾಲಗಳು
30ಎ. ವಿನಿಮಯ ಪತ್ರಗಳ ಮೇಲೆ ಮರುಸೋಡಿ
31. ಕಮೀಷನ್
32. ಖಾತರಿಗಳನ್ನು ನೀಡುವುದು
33. ಸಾಲ ಸೌಲಭ್ಯಕ್ಕಾಗಿ ಷರತ್ತುಗಳನ್ನು ವಿಧಿಸಲು ಅಧಿಕಾರ
34. ಒಪ್ಪಿಕೊಂಡ ಅವಧಿಗೆ ಮೊದಲೇ ಮರುಸಂದಾಯ ಮಾಡುವಂತೆ ಕೇಳಲು ಅಧಿಕಾರ
35. ರಾಷ್ಟ್ರೀಯ ಬ್ಯಾಂಕ್ ದಾಖಲೆಗಳನ್ನು ನೋಡುವ ಅವಕಾಶ ಹೊಂದಿರುವುದು
36. ಸಾಲ ಅಥವಾ ಮುಂಗಡದ ಸಿಂಧುತ್ವವನ್ನು ಪ್ರಶ್ನಿಸದಿರುವುದು
37. ರಾಷ್ಟ್ರೀಯ ಬ್ಯಾಂಕ್ ತನ್ನ ಬಾಂಡುಗಳ ಅಥವಾ ಡಿಬೆಂಚರುಗಳ ಮೇಲೆ ಸಾಲ ಅಥವಾ ಮುಂಗಡಗಳನ್ನು ಮಂಜೂರು ಮಾಡದಿರುವುದು
37ಎ. ನಿಷೇಧಿತ ವ್ಯವಹಾರ

## ಅಧ್ಯಾಯ – VII

### ರಾಷ್ಟ್ರೀಯ ಬ್ಯಾಂಕಿನ ಇತರ ಪ್ರಕಾರ್ಯಗಳು

38. ರಾಷ್ಟ್ರೀಯ ಬ್ಯಾಂಕಿನ ಇತರ ಪ್ರಕಾರ್ಯಗಳು
38ಎ. ಸಹಾಯಕ ಸಂಸ್ಥೆಗಳನ್ನು ಸಂವರ್ಧಿಸುವುದು
38ಬಿ. ಋಣದ ಭದ್ರತೀಕರಣ

38ಸಿ. ಕಡ್ಡಾಯ ನೋಂದಣಿಯಿಂದ ವಿನಾಯಿತಿ

39. ಪ್ರಾಸಂಗಿಕ ಅಧಿಕಾರಗಳು

40. ಠೇವಣಿಗಳು ಮತ್ತು ಹೂಡಿಕೆಗಳು

41. ಸಾಲದ ಬಗ್ಗೆ ಮಾಹಿತಿ

## ಅಧ್ಯಾಯ – VIII

## ನಿಧಿಗಳು, ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ

42. ರಾಷ್ಟ್ರೀಯ ಗ್ರಾಮೀಣ ಸಾಲ ನೀಡಿಕೆ (ದೀರ್ಘಾವಧಿ ಕಾರ್ಯಾಚರಣೆಗಳು) ನಿಧಿ

43. ರಾಷ್ಟ್ರೀಯ ಗ್ರಾಮೀಣ ಸಾಲ ನೀಡಿಕೆ (ಸ್ಥಿರೀಕರಣ) ನಿಧಿ

44. ಸಂಶೋಧನಾ ಮತ್ತು ಅಭಿವೃದ್ಧಿ ನಿಧಿ

45. ಮೀಸಲು ನಿಧಿ ಮತ್ತು ಇತರ ನಿಧಿಗಳು

46. ರಾಷ್ಟ್ರೀಯ ಬ್ಯಾಂಕಿನ ಜಮಾ ಖರ್ಚು ಪಟ್ಟಿ ಮುಂತಾದವುಗಳನ್ನು ಸಿದ್ಧಪಡಿಸುವುದು

47. ಹೆಚ್ಚುವರಿಯ ವಿಲೆ

48. ಲೆಕ್ಕ ಪರಿಶೋಧನೆ

49. ವಿವರ ಪಟ್ಟಿಕೆಗಳು

## ಅಧ್ಯಾಯ – IX

## ಸಿಬ್ಬಂದಿ ವರ್ಗ

50. ರಾಷ್ಟ್ರೀಯ ಬ್ಯಾಂಕಿನ ಸಿಬ್ಬಂದಿ ವರ್ಗ

## ಅಧ್ಯಾಯ – X

## ಸಂಕೀರ್ಣ

51. ನಿಷ್ಠೆ ಮತ್ತು ಗೋಪ್ಯತೆಗಳ ಬಗೆಗೆ ಬಾಧ್ಯತೆ

52. ನೇಮಕದಲ್ಲಿರುವ ದೋಷಗಳು ಕಾರ್ಯ ಇತ್ಯಾದಿಗಳನ್ನು ಅಸಿಂಧುಗೊಳಿಸದಿರುವುದು

52ಎ. ರಾಷ್ಟ್ರೀಯ ಬ್ಯಾಂಕಿನೊಂದಿಗಿನ ಒಪ್ಪಂದವು ನಿರ್ದೇಶಕರುಗಳು ನೇಮಕವಾದಾಗ ಚಾಲ್ತಿಯಲ್ಲಿರುವುದು

53. ಅಧಿನಿಯಮದ ಮೇರೆಗೆ ಕೈಗೊಂಡ ಕ್ರಮದ ರಕ್ಷಣೆ

54. ನಿರ್ದೇಶಕರಿಗೆ ನಷ್ಟ ಭರ್ತಿ

55. * * *

56. ದಂಡನೆಗಳು

57. ಕಂಪನಿಗಳಿಂದ ಅಪರಾಧಗಳು

58. 1891ರ ಬ್ಯಾಂಕರುಗಳ ಪುಸ್ತಕಗಳ ಸಾಕ್ಷ್ಯ ಅಧಿನಿಯಮವು ರಾಷ್ಟ್ರೀಯ ಬ್ಯಾಂಕಿಗೆ ಸಂಬಂಧಿಸಿದಂತೆ ಅನ್ವಯವಾಗುವುದು

59. ರಾಷ್ಟ್ರೀಯ ಬ್ಯಾಂಕಿನ ಸಮಾಪನ

60. ವಿನಿಯಮನಗಳನ್ನು ರಚಿಸಲು ಮಂಡಲಿಯ ಅಧಿಕಾರ

61. * * *

62. ತೊಂದರೆಯನ್ನು ನಿವಾರಿಸುವ ಅಧಿಕಾರ

**ಅನುಸೂಚಿಗಳು.**

# ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಅಧಿನಿಯಮ, 1981

## (1981ರ ಅಧಿನಿಯಮ ಸಂಖ್ಯೆ 61)

[30ನೇ ಡಿಸೆಂಬರ್ 1981]

ಸಮಗ್ರ ಗ್ರಾಮೀಣ ಅಭಿವೃದ್ಧಿಯ ಸಂವರ್ಧನೆ ಮತ್ತು ಗ್ರಾಮೀಣ ಪ್ರದೇಶಗಳ ಅಭ್ಯುದಯವನ್ನು ಸುನಿಶ್ಚಿತಪಡಿಸುವ ದೃಷ್ಟಿಯಿಂದ, ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ, ಸಣ್ಣ ಪ್ರಮಾಣದ ಕೈಗಾರಿಕೆಗಳು, ಗುಡಿ ಮತ್ತು ಗ್ರಾಮ ಕೈಗಾರಿಕೆಗಳು, ಕರಕುಶಲ ಕಲೆಗಳು ಮತ್ತು ಇತರ ಗ್ರಾಮೀಣ ಕುಶಲ ಕಲೆಗಳು ಮತ್ತು ಸಂಬಂಧಪಟ್ಟ ಇತರ ಆರ್ಥಿಕ ಚಟುವಟಿಕೆಗಳ ಸಂವರ್ಧನೆ ಮತ್ತು ಅಭಿವೃದ್ಧಿಗಾಗಿ ಸಾಲ ಮತ್ತು ಇತರ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಮತ್ತು ವಿನಿಯಮಿಸುವುದಕ್ಕಾಗಿ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಎಂದು ಕರೆಯಲಾಗುವ ಅಭಿವೃದ್ಧಿ ಬ್ಯಾಂಕ್‌ನ್ನು ಸ್ಥಾಪಿಸುವ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೆರಡನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ - I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಅಧಿನಿಯಮ, 1981 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಯಾವುದೇ ಉಪಬಂಧದಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮಾಡಿದ ಯಾವುದೇ ಉಲ್ಲೇಖವನ್ನು ಆ ಉಪಬಂಧವು ಜಾರಿಗೆ ಬಂದಿರುವುದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

* ಪ್ರಕರಣ 3, 16, 18 ಹೊರತುಪಡಿಸಿ, ಮೇ 1, 1982 ರಂದು ಜಾರಿಗೆ ಬಂದಿದೆ. (ಎಸ್‌ಓ 278 (ಇ), ದಿನಾಂಕ 21. 04. 1982)

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಕೃಷಿ" ಎಂಬುದರಲ್ಲಿ ತೋಟಗಾರಿಕೆ, ಪಶು ಸಂಗೋಪನೆ, ಅರಣ್ಯ ವಿಜ್ಞಾನ, ಹೈನುಗಾರಿಕೆ, ಕೋಳಿ ಸಾಕಣೆ, ಮತ್ಸ್ಯಪಾಲನೆ ಮತ್ತು ಕೃಷಿಯೊಂದಿಗೆ ಜಂಟಿಯಾಗಿ ಕೈಗೊಂಡಿರುವ ಅಥವಾ ಕೈಗೊಂಡಿಲ್ಲದ ಇತರ ಸಂಬಂಧಪಟ್ಟ ಚಟುವಟಿಕೆಗಳು ಒಳಗೊಳ್ಳುತ್ತವೆ ಮತ್ತು "ಕೃಷಿ ಕಾರ್ಯಾಚರಣೆಗಳು" ಪದಾವಳಿಯನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

**ವಿವರಣೆ:-** ಈ ಖಂಡದ ಉದ್ದೇಶಗಳಿಗಾಗಿ, 'ಮತ್ಸ್ಯಪಾಲನೆ' ಎಂಬುದರಲ್ಲಿ ಒಳನಾಡು ಮೀನುಗಾರಿಕೆ ಮತ್ತು ಕಡಲ ಮೀನುಗಾರಿಕೆ ಇವೆರಡರ ಅಭಿವೃದ್ಧಿ, ಮೀನು ಹಿಡಿಯುವುದು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ಎಲ್ಲಾ ಚಟುವಟಿಕೆಗಳೂ ಒಳಗೊಳ್ಳುತ್ತವೆ;

(ಬಿ) "ಕೃಷಿ ಪುನರ್ ವಿತ್ತೀಯ ಮತ್ತು ಅಭಿವೃದ್ಧಿ ನಿಗಮ" ಎಂದರೆ ಕೃಷಿ ಪುನರ್ ವಿತ್ತೀಯ ಮತ್ತು ಅಭಿವೃದ್ಧಿ ನಿಗಮ ಅಧಿನಿಯಮ, 1963 (1963ರ 10)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಮತ್ತು ಆ ಅಧಿನಿಯಮದ 3ಎ ಪ್ರಕರಣದ ಮೇರೆಗೆ ಕೃಷಿ ಪುನರ್ ವಿತ್ತೀಯ ಮತ್ತು ಅಭಿವೃದ್ಧಿ ನಿಗಮ ಎಂಬುದಾಗಿ ಪುನರ್ ನಾಮಕರಣ ಮಾಡಲಾದ ನಿಗಮ ಎಂದು ಅರ್ಥ;

(ಸಿ) "ಮಂಡಲಿ" ಎಂದರೆ ರಾಷ್ಟ್ರೀಯ ಬ್ಯಾಂಕಿನ ನಿರ್ದೇಶಕರ ಮಂಡಲಿ ಎಂದು ಅರ್ಥ;

(ಡಿ) "ಕೇಂದ್ರ ಸಹಕಾರ ಬ್ಯಾಂಕ್" ಎಂದರೆ ಒಂದು ರಾಜ್ಯದ ಜಿಲ್ಲೆಯಲ್ಲಿನ ಯಾವ ಪ್ರಧಾನ ಸಹಕಾರ ಸಂಘವು ಆ ಜಿಲ್ಲೆಯಲ್ಲಿನ ಇತರ ಸಹಕಾರ ಸಂಘಗಳಿಗೆ ಹಣಕಾಸು ಒದಗಿಸುವ ಮೂಲ ಉದ್ದೇಶ ಹೊಂದಿರುವುದೋ ಆ ಸಂಘ ಎಂದು ಅರ್ಥ:

ಪರಂತು, ಜಿಲ್ಲೆಯಲ್ಲಿರುವ ಅಂಥ ಪ್ರಧಾನ ಸಂಘದ ಜೊತೆಗೆ ಅಥವಾ ಜಿಲ್ಲೆಯಲ್ಲಿ ಅಂಥ ಪ್ರಧಾನ ಸಂಘವಿಲ್ಲದಿದ್ದಲ್ಲಿ, ಆ ಜಿಲ್ಲೆಯಲ್ಲಿನ ಇತರ ಸಹಕಾರ ಸಂಘಗಳಿಗೆ ಹಣಕಾಸು ಒದಗಿಸುವ ವ್ಯವಹಾರವನ್ನು ನಡೆಸುತ್ತಿರುವ ಯಾವುದೇ ಒಂದು ಸಹಕಾರ ಸಂಘವನ್ನು ಅಥವಾ ಹೆಚ್ಚು ಸಹಕಾರ ಸಂಘಗಳನ್ನು ಈ ಪರಿಭಾಷೆಯ ಅರ್ಥವ್ಯಾಪ್ತಿಯೊಳಗೆ ಕೇಂದ್ರ ಸಹಕಾರ ಬ್ಯಾಂಕ್ ಅಥವಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಸಹ ಆಗಿರಬೇಕೆಂದು ಅಥವಾ ಕೇಂದ್ರ ಸಹಕಾರ ಬ್ಯಾಂಕ್ ಅಥವಾ ಕೇಂದ್ರ ಸಹಕಾರ ಬ್ಯಾಂಕ್‌ಗಳೆಂದು ರಾಜ್ಯ ಸರ್ಕಾರವು ಘೋಷಿಸಬಹುದು;

(ಇ) "ಅಧ್ಯಕ್ಷ" ಎಂದರೆ 6ನೇ ಪ್ರಕರಣದ ಮೇರೆಗೆ ನೇಮಕಗೊಂಡ ಅಧ್ಯಕ್ಷ ಎಂದು ಅರ್ಥ;

(ಎಫ್) "ಸಹಕಾರ ಸಂಘ" ಎಂದರೆ ಸಹಕಾರ ಸಂಘಗಳ ಅಧಿನಿಯಮ, 1912ರ (1912ರ 2) ಅಥವಾ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಯಾವುದೇ ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ನೋಂದಾಯಿಸಿದ ಅಥವಾ ನೋಂದಾಯಿಸಲಾಗಿದೆ ಎಂದು ಭಾವಿಸಲಾದ ಸಂಘ ಎಂದು ಅರ್ಥ;

(ಜಿ) "ಬೆಳೆಗಳು" ಎಂಬುದರಲ್ಲಿ ಕೃಷಿ ಕಾರ್ಯಾಚರಣೆಗಳ ಉತ್ಪನ್ನಗಳೂ ಒಳಗೊಳ್ಳುತ್ತವೆ;

(ಹೆಚ್) "ನಿರ್ದೇಶಕ" ಎಂದರೆ 6ನೇ ಪ್ರಕರಣದ ಮೇರೆಗೆ ನೇಮಕಗೊಂಡ ನಿರ್ದೇಶಕ ಎಂದು ಅರ್ಥ;

(ಐ) "ಅತಿ ಸಣ್ಣ ಮತ್ತು ವಿಕೇಂದ್ರೀಕೃತ ವಲಯದಲ್ಲಿನ ಕೈಗಾರಿಕೆ" ಎಂದರೆ ಅತಿ ಸಣ್ಣ ಮತ್ತು ವಿಕೇಂದ್ರೀಕೃತ ವಲಯದಲ್ಲಿನ ಕೈಗಾರಿಕಾ ಸಂಸ್ಥೆಗಳು ಎಂದು ಅರ್ಥ ಮತ್ತು "ಅತಿ ಸಣ್ಣ ಮತ್ತು ವಿಕೇಂದ್ರೀಕೃತ ವಲಯದಲ್ಲಿನ ಕೈಗಾರಿಕಾ ಸಂಸ್ಥೆ" ಎಂದರೆ ಯಾವ ಕೈಗಾರಿಕಾ ಸಂಸ್ಥೆಯಲ್ಲಿ ಯಂತ್ರೋಪಕರಣಗಳು ಮತ್ತು ಸ್ಥಾವರಗಳ ಮೇಲೆ ತೊಡಗಿಸಲಾದ ಹಣವು ಎರಡು ಲಕ್ಷ ರೂಪಾಯಿಗಳನ್ನು ಅಥವಾ ಕೈಗಾರಿಕಾ ಅಭಿವೃದ್ಧಿಯ ಪ್ರವೃತ್ತಿಗಳನ್ನು ಮತ್ತು ಇತರ ಸುಸಂಗತ ಸಂಗತಿಗಳನ್ನು ಗಮನಿಸಿ ಕೇಂದ್ರ ಸರ್ಕಾರವು, ಈ ಸಂಬಂಧವಾಗಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಹೆಚ್ಚಿನ ಮೊಬಲಗನ್ನು ಮೀರುವುದಿಲ್ಲವೋ ಆ ಕೈಗಾರಿಕಾ ಸಂಸ್ಥೆ ಎಂದು ಅರ್ಥ;

(ಜೆ) "ವ್ಯವಸ್ಥಾಪಕ ನಿರ್ದೇಶಕ" ಎಂದರೆ 6ನೇ ಪ್ರಕರಣದ ಮೇರೆಗೆ ನೇಮಕಗೊಂಡ ವ್ಯವಸ್ಥಾಪಕ ನಿರ್ದೇಶಕ ಎಂದು ಅರ್ಥ;

(ಕೆ) "ಬೆಳೆಗಳ ಕ್ರಯ-ವಿಕ್ರಯ" ಎಂಬುದರಲ್ಲಿ ಕ್ರಯ-ವಿಕ್ರಯಕ್ಕೆ ಮುಂಚೆ ಯಾರೇ ಕೃಷಿ ಉತ್ಪಾದಕರು ಅಥವಾ ಅಂತಹ ಉತ್ಪಾದಕರ ಯಾವುದೇ ಸಂಸ್ಥೆಯು ಮಾಡುವ ಬೆಳೆಗಳ ಸಂಸ್ಕರಣೆಯೂ ಒಳಗೊಳ್ಳುತ್ತದೆ;

(ಎಲ್) "ರಾಷ್ಟ್ರೀಯ ಬ್ಯಾಂಕ್" ಎಂದರೆ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಎಂದು ಅರ್ಥ;

(ಎಂ) "ಅಧಿಸೂಚನೆ" ಎಂದರೆ ರಾಜಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ ಎಂದು ಅರ್ಥ;

(ಎನ್) "ಪ್ರಾಥಮಿಕ ಗ್ರಾಮೀಣ ಸಾಲ ನೀಡಿಕೆ ಸಂಘ" ಎಂದರೆ ಅದನ್ನು ಯಾವುದೇ ಹೆಸರಿನಿಂದ ಕರೆದಿರಲಿ,-

(1) ಕೃಷಿ ಅಥವಾ ಕೃಷಿ ಕಾರ್ಯಾಚರಣೆಗಳಿಗಾಗಿ ಅಥವಾ ಬೆಳೆಗಳ ಕ್ರಯ-ವಿಕ್ರಯಕ್ಕಾಗಿ ಅಥವಾ ಗ್ರಾಮೀಣ ಅಭಿವೃದ್ಧಿಗಾಗಿ ತನ್ನ ಸದಸ್ಯರಿಗೆ ಹಣಕಾಸು ಅನುಕೂಲತೆಯನ್ನು ಒದಗಿಸುವ ಉದ್ದೇಶವನ್ನು ಅಥವಾ ವ್ಯವಹಾರವನ್ನು ಹೊಂದಿರುವ; ಮತ್ತು

(2) ಯಾವ ಸಹಕಾರ ಸಂಘದ ಉಪವಿಧಿಗಳು ತನ್ನ ಸದಸ್ಯನಾಗಲು ಯಾವುದೇ ಇತರ ಸಹಕಾರ ಸಂಘಕ್ಕೆ ಅನುಮತಿ ನೀಡುವುದಿಲ್ಲವೋ

– ಆ ಸಹಕಾರ ಸಂಘ ಎಂದು ಅರ್ಥ:

ಪರಂತು, ಯಾವ ಸಹಕಾರ ಸಂಘವು ರಾಜ್ಯ ಸಹಕಾರ ಬ್ಯಾಂಕ್ ಅಥವಾ ಕೇಂದ್ರ ಸಹಕಾರ ಬ್ಯಾಂಕ್ ಆಗಿರುವುದೋ ಆ ಸಹಕಾರ ಸಂಘವು ಸಹಕಾರ ಸಂಘದ ಷೇರು ಬಂಡವಾಳಕ್ಕೆ ವಂತಿಗೆ ನೀಡುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಒದಗಿಸಿದ ನಿಧಿಗಳಿಂದ ಅಂಥ ಬ್ಯಾಂಕ್ ಹಾಗೆ ವಂತಿಗೆ ನೀಡಿದೆ ಎಂಬ ಕಾರಣದಿಂದ ಆ ಸಹಕಾರ ಸಂಘವು ಸದಸ್ಯನಾಗಿ ಪ್ರವೇಶ ಪಡೆಯುವುದಕ್ಕೆ ಈ ಉಪಖಂಡವು ಅನ್ವಯವಾಗತಕ್ಕದ್ದಲ್ಲ;

(ಒ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮನಗಳಿಂದ ನಿಯಮಿಸಲಾದುದು ಎಂದು ಅರ್ಥ;

(ಪಿ) "ಪ್ರಾದೇಶಿಕ ಗ್ರಾಮೀಣ ಬ್ಯಾಂಕ್" ಎಂದರೆ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ ಅಧಿನಿಯಮ, 1976 (1976ರ 21) ರ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಎಂದು ಅರ್ಥ;

(ಕ್ಯೂ) "ಗ್ರಾಮೀಣಾಭಿವೃದ್ಧಿ" ಎಂದರೆ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಸಹಾಯಕವಾಗುವ ಯಾವುವೇ ಚಟುವಟಿಕೆಗಳ ಮೂಲಕ ಮಾಡಲಾಗುವಂಥ ಅಭಿವೃದ್ಧಿ ಎಂದು ಅರ್ಥ;

**ವಿವರಣೆ**:– ಈ ಖಂಡದ ಉದ್ದೇಶಗಳಿಗಾಗಿ,–

(ಎ) ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಸಹಾಯಕವಾಗುವ ಚಟುವಟಿಕೆಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಸರಕುಗಳ ಉತ್ಪಾದನೆಗೆ ಅಥವಾ ಸೇವಾ ವ್ಯವಸ್ಥೆಗೆ ಸಂಬಂಧಿಸಿದ ಚಟುವಟಿಕೆಗಳು ಮತ್ತು ಗುಡಿ ಹಾಗೂ ಗ್ರಾಮೀಣ ಕೈಗಾರಿಕೆಗಳು, ಅತಿ ಸಣ್ಣ ಮತ್ತು ವಿಕೇಂದ್ರೀಕೃತ ವಲಯದಲ್ಲಿನ ಕೈಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಕರಕುಶಲ ಕಲೆಗಳು ಹಾಗೂ ಇತರ ಗ್ರಾಮೀಣ ಕುಶಲ ಕಲೆಗಳ ಸಂವರ್ಧನೆಗಾಗಿನ ಚಟುವಟಿಕೆಗಳು – ಇವುಗಳನ್ನು ಒಳಗೊಳ್ಳುತ್ತದೆ;

(ಬಿ) "ಗ್ರಾಮೀಣ ಪ್ರದೇಶ" ಎಂದರೆ ಯಾವುದೇ ಗ್ರಾಮದಲ್ಲಿ ಒಳಗೊಂಡಿರುವ ಪ್ರದೇಶ ಎಂದು ಅರ್ಥ ಮತ್ತು ಇದು, ಯಾವ ಪಟ್ಟಣದ ಜನಸಂಖ್ಯೆಯು ಹತ್ತು ಸಾವಿರವನ್ನು ಅಥವಾ ಕಾಲಕಾಲಕ್ಕೆ ರಿಸರ್ವ್ ಬ್ಯಾಂಕ್ ನಿರ್ದಿಷ್ಟಪಡಿಸಬಹುದಾದಂಥ ಇತರ ಅಂಕಿಯನ್ನು ಮೀರುವುದಿಲ್ಲವೋ ಆ ಯಾವುದೇ ಪಟ್ಟಣದಲ್ಲಿ ಒಳಗೊಂಡಿರುವ ಪ್ರದೇಶವನ್ನು ಒಳಗೊಳ್ಳುತ್ತದೆ;

(ಆರ್) "ರಿಸರ್ವ್ ಬ್ಯಾಂಕ್" ಎಂದರೆ ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ (1934ರ 2) 3ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಭಾರತ ರಿಸರ್ವ್ ಬ್ಯಾಂಕ್ ಎಂದು ಅರ್ಥ;

(ಎಸ್) "ಅನುಸೂಚಿತ ಬ್ಯಾಂಕ್" ಎಂದರೆ ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ (1934ರ 2) ಎರಡನೇ ಅನುಸೂಚಿಯಲ್ಲಿ ತತ್ಕಾಲದಲ್ಲಿ ಸೇರಿಸಿರುವ ಬ್ಯಾಂಕ್ ಎಂದು ಅರ್ಥ;

(ಟಿ) "ಸಣ್ಣ ಪ್ರಮಾಣದ ಕೈಗಾರಿಕೆ" ಎಂದರೆ ಸಣ್ಣ ಪ್ರಮಾಣದ ವಲಯದಲ್ಲಿರುವ ಕೈಗಾರಿಕಾ ಸಂಸ್ಥೆಗಳು ಮತ್ತು "ಸಣ್ಣ ಪ್ರಮಾಣ ವಲಯದಲ್ಲಿನ ಕೈಗಾರಿಕಾ ಸಂಸ್ಥೆ" ಎಂದರೆ,–

(i) ಯಾವ ಕೈಗಾರಿಕಾ ಸಂಸ್ಥೆಯಲ್ಲಿ ಯಂತ್ರೋಪಕರಣಗಳ ಮತ್ತು ಸ್ಥಾವರಗಳ ಮೇಲಣ ಹೂಡಿಕೆಯು ಇಪ್ಪತ್ತು ಲಕ್ಷ ರೂಪಾಯಿಗಳನ್ನು ಅಥವಾ ಕೈಗಾರಿಕಾ ಅಭಿವೃದ್ಧಿಯ ಪ್ರವೃತ್ತಿಗಳನ್ನು ಮತ್ತು ಇತರ ಸುಸಂಗತ ಸಂಗತಿಗಳನ್ನು ಗಮನದಲ್ಲಿರಿಸಿ ಕೇಂದ್ರ ಸರ್ಕಾರವು ಈ ಸಂಬಂಧವಾಗಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಹೆಚ್ಚಿನ ಮೊಬಲಗನ್ನು ಮೀರುವುದಿಲ್ಲವೋ; ಮತ್ತು

(ii) ಯಾವ ಕೈಗಾರಿಕಾ ಸಂಸ್ಥೆಯು ಅತಿ ಸಣ್ಣ ಮತ್ತು ವಿಕೇಂದ್ರೀಕೃತ ವಲಯದಲ್ಲಿನ ಸಂಸ್ಥೆಯಾಗಿಲ್ಲವೋ

– ಆ ಯಾವುದೇ ಕೈಗಾರಿಕಾ ಸಂಸ್ಥೆ ಎಂದು ಅರ್ಥ;

(ಯು) "ರಾಜ್ಯ ಸಹಕಾರ ಬ್ಯಾಂಕ್" ಎಂದರೆ ರಾಜ್ಯದಲ್ಲಿರುವ ಯಾವ ಪ್ರಧಾನ ಸಹಕಾರ ಸಂಘದ ಮೂಲ ಉದ್ದೇಶವು ರಾಜ್ಯದಲ್ಲಿನ ಇತರ ಸಹಕಾರ ಸಂಘಗಳಿಗೆ ಹಣಕಾಸು ಒದಗಿಸುವುದು ಆಗಿರುತ್ತದೋ ಆ ಪ್ರಧಾನ ಸಹಕಾರ ಸಂಘ ಎಂದು ಅರ್ಥ:

ಪರಂತು, ರಾಜ್ಯದಲ್ಲಿನ ಅಂಥ ಪ್ರಧಾನ ಸಂಘದ ಜೊತೆಗೆ ಅಥವಾ ರಾಜ್ಯದಲ್ಲಿ ಅಂಥ ಪ್ರಧಾನ ಸಂಘವು ಇಲ್ಲದಿದ್ದಲ್ಲಿ, ಆ ರಾಜ್ಯದಲ್ಲಿ ವ್ಯವಹಾರ ನಡೆಸುತ್ತಿರುವ ಯಾವುದೇ ಒಂದು ಸಹಕಾರ ಸಂಘವನ್ನು ಅಥವಾ ಹೆಚ್ಚು ಸಹಕಾರ ಸಂಘಗಳನ್ನು ಈ ಪರಿಭಾಷೆಯ ಅರ್ಥವ್ಯಾಪ್ತಿಯೊಳಗೆ ರಾಜ್ಯ ಸಹಕಾರ ಬ್ಯಾಂಕ್ ಅಥವಾ ರಾಜ್ಯ ಸಹಕಾರ ಬ್ಯಾಂಕ್‌ಗಳು ಸಹ ಆಗಿರಬೇಕೆಂದು ಅಥವಾ ರಾಜ್ಯ ಸಹಕಾರ ಬ್ಯಾಂಕ್ ಅಥವಾ ರಾಜ್ಯ ಸಹಕಾರ ಬ್ಯಾಂಕ್‌ಗಳೆಂದು ರಾಜ್ಯ ಸರ್ಕಾರವು ಘೋಷಿಸಬಹುದು;

(ವಿ) "ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್" ಎಂದರೆ ರಾಜ್ಯದಲ್ಲಿ ಯಾವುದೇ ಹೆಸರಿನಿಂದ ಕರೆಯಲಾಗುವ ಪ್ರಧಾನ ಭೂ ಅಭಿವೃದ್ಧಿ ಬ್ಯಾಂಕ್ ಆಗಿರುವ ಮತ್ತು ಕೃಷಿ ಅಭಿವೃದ್ಧಿಗಾಗಿ ದೀರ್ಘಾವಧಿ ಹಣಕಾಸು ಒದಗಿಸುವ ಮೂಲ ಉದ್ದೇಶವುಳ್ಳ ಸಹಕಾರ ಸಂಘ ಎಂದು ಅರ್ಥ:

ಪರಂತು, ರಾಜ್ಯದಲ್ಲಿರುವ ಪ್ರಧಾನ ಭೂ ಅಭಿವೃದ್ಧಿ ಬ್ಯಾಂಕಿನ ಜೊತೆಗೆ ಅಥವಾ ರಾಜ್ಯದಲ್ಲಿ ಅಂಥ ಬ್ಯಾಂಕ್ ಇಲ್ಲದಿರುವಲ್ಲಿ, ಆ ರಾಜ್ಯದಲ್ಲಿ ವ್ಯವಹಾರವನ್ನು ನಡೆಸುತ್ತಿರುವ ಮತ್ತು ಅಂಥ ಸಹಕಾರ ಸಂಘದ ಉಪವಿಧಿಗಳ ಮೂಲಕ ಕೃಷಿ ಅಭಿವೃದ್ಧಿಗಾಗಿ ದೀರ್ಘಾವಧಿ ಸಾಲವನ್ನೊದಗಿಸಲು ಅಧಿಕೃತವಾದ ಯಾವುದೇ ಸಹಕಾರ ಸಂಘವನ್ನು ಈ ಪರಿಭಾಷೆಯ ಅರ್ಥವ್ಯಾಪ್ತಿಯೊಳಗೆ ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್ ಸಹ ಆಗಿರಬೇಕೆಂದು ಅಥವಾ ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್ ಎಂದು ರಾಜ್ಯ ಸರ್ಕಾರವು ಘೋಷಿಸಬಹುದು;

(ಡಬ್ಲ್ಯೂ) ಇಲ್ಲಿ ಬಳಸಿರುವ ಮತ್ತು ಪರಿಭಾಷಿಸದಿರುವ ಆದರೆ, ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934 ರ 2) ರಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಇಲ್ಲಿಯೂ ಹೊಂದಿರತಕ್ಕದ್ದು;

(ಎಕ್ಸ್) ಇಲ್ಲಿ ಬಳಸಿರುವ ಮತ್ತು ಈ ಅಧಿನಿಯಮದಲ್ಲಾಗಲಿ ಅಥವಾ ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934 ರ 2) ರಲ್ಲಿ ಆಗಲಿ ಪರಿಭಾಷಿಸದಿರುವ ಆದರೆ, ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949 ರಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949 ರಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಇಲ್ಲಿಯೂ ಹೊಂದಿರತಕ್ಕದ್ದು.

## ಅಧ್ಯಾಯ – II

## ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಸ್ಥಾಪನೆ ಮತ್ತು ಅದರ ಬಂಡವಾಳ

**3. ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಸ್ಥಾಪನೆ ಮತ್ತು ನಿಗಮನ.–** (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಿಂದ ಜಾರಿಗೆ ಬರುವಂತೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಎಂದು ಕರೆಯಲಾಗುವ ಒಂದು ಬ್ಯಾಂಕನ್ನು ಸ್ಥಾಪಿಸತಕ್ಕದ್ದು.

* ದಿನಾಂಕ 12.07.1982 ರಿಂದ ಜಾರಿಗೆ ಬಂದಿದೆ.

(2) ಬ್ಯಾಂಕ್ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಸ್ವತ್ತನ್ನು ಆರ್ಜಿಸಲು, ಧಾರಣ ಮಾಡಲು ಮತ್ತು ವಿಲೆ ಮಾಡಲು ಹಾಗೂ ಕರಾರು

ಮಾಡಿಕೊಳ್ಳಲು ಅಧಿಕಾರ ಹೊಂದಿರುವ ಮೇಲ್ಕಂಡ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು ಸದರಿ ಹೆಸರಿನಲ್ಲಿ ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

(3) ರಾಷ್ಟ್ರೀಯ ಬ್ಯಾಂಕಿನ ಮುಖ್ಯ ಕಚೇರಿಯು ಮುಂಬಯಿಯಲ್ಲಿ ಅಥವಾ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಸ್ಥಳದಲ್ಲಿರತಕ್ಕದ್ದು.

(4) ರಾಷ್ಟ್ರೀಯ ಬ್ಯಾಂಕ್ ಭಾರತದ ಯಾವುದೇ ಸ್ಥಳದಲ್ಲಿ ಮತ್ತು ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು ಮತ್ತು ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ ಭಾರತದ ಹೊರಗೆ ಯಾವುದೇ ಸ್ಥಳದಲ್ಲಿ ಕಚೇರಿಗಳನ್ನು, ಶಾಖೆಗಳನ್ನು ಅಥವಾ ಏಜೆನ್ಸಿಗಳನ್ನು ಸ್ಥಾಪಿಸಬಹುದು.

**4. ಬಂಡವಾಳ.-** (1) ರಾಷ್ಟ್ರೀಯ ಬ್ಯಾಂಕಿನ ಬಂಡವಾಳವು ಒಂದು ನೂರು ಕೋಟಿ ರೂಪಾಯಿಗಳಾಗಿರತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು, ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ ಮತ್ತು ಅಧಿಸೂಚನೆ ಹೊರಡಿಸಿ ಸದರಿ ಬಂಡವಾಳವನ್ನು ಐದು ಸಾವಿರ ಕೋಟಿ ರೂಪಾಯಿಗಳವರೆಗೆ ಹೆಚ್ಚಿಸಬಹುದು.

(2) ಕೇಂದ್ರ ಸರ್ಕಾರವು ರಿಸರ್ವ್ ಬ್ಯಾಂಕಿನೊಂದಿಗೆ ಸಮಲೋಚಿಸಿ ಕಾಲಕಾಲಕ್ಕೆ ಅಧಿಸೂಚಿಸಬಹುದಾದಷ್ಟರ ಮಟ್ಟಿಗೆ ಮತ್ತು ಅಂಥ ಪ್ರಮಾಣದಲ್ಲಿ ರಾಷ್ಟ್ರೀಯ ಬ್ಯಾಂಕಿನ ಬಂಡವಾಳಕ್ಕೆ ಕೇಂದ್ರ ಸರ್ಕಾರವು ಮತ್ತು ರಿಜರ್ವ್ ಬ್ಯಾಂಕ್ ವಂತಿಗೆ ನೀಡತಕ್ಕದ್ದು:

ಪರಂತು, ರಾಷ್ಟ್ರೀಯ ಬ್ಯಾಂಕ್, ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂಥ ರೀತಿಯಲ್ಲಿ ಅಂಥ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ಬಂಡವಾಳವನ್ನು ನೀಡಬಹುದು:

ಮತ್ತೂ ಪರಂತು, ಕೇಂದ್ರ ಸರ್ಕಾರದ ಮತ್ತು ರಿಜರ್ವ್ ಬ್ಯಾಂಕಿನ ಸಂಯೋಜಿತ ಷೇರು ಧಾರಣವು ಯಾವುದೇ ಕಾಲದಲ್ಲಿ ಕೊಡಲು ಒಪ್ಪಿಕೊಂಡ ಒಟ್ಟು ಬಂಡವಾಳದ ಶೇಕಡಾ ಐವತ್ತೊಂದಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

## ಅಧ್ಯಾಯ - III

## ರಾಷ್ಟ್ರೀಯ ಬ್ಯಾಂಕಿನ ವ್ಯವಸ್ಥಾಪನೆ

**5. ವ್ಯವಸ್ಥಾಪನೆ.-** (1) ರಾಷ್ಟ್ರೀಯ ಬ್ಯಾಂಕಿನ ಕೆಲಸ ಕಾರ್ಯಗಳ ಮತ್ತು ವ್ಯವಹಾರಗಳ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ ಮತ್ತು ವ್ಯವಸ್ಥಾಪನೆಯು ನಿರ್ದೇಶಕರ ಮಂಡಲಿಯಲ್ಲಿ ನಿಹಿತವಾಗಿರತಕ್ಕದ್ದು ಮತ್ತು ಅದು ರಾಷ್ಟ್ರೀಯ ಬ್ಯಾಂಕ್ ಚಲಾಯಿಸಬಹುದಾದ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಮಾಡಬಹುದಾದ ಎಲ್ಲಾ ಕಾರ್ಯಗಳನ್ನು ಮಾಡತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಮಂಡಲಿಯು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಸಾರ್ವಜನಿಕ ಹಿತಾಸಕ್ತಿಗೆ ಯುಕ್ತ ಗಮನಕೊಟ್ಟು ವ್ಯವಹಾರ ತತ್ವಗಳ ಮೇಲೆ ಕಾರ್ಯನಿರ್ವಹಿಸತಕ್ಕದ್ದು.

(3) (1)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ಮತ್ತು ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮನಗಳಲ್ಲಿ ಅನ್ಯಥಾ ಉಪಬಂಧಿಸಿದುದನ್ನು ಉಳಿದು, ವ್ಯವಸ್ಥಾಪಕ ನಿರ್ದೇಶಕನು ರಾಷ್ಟ್ರೀಯ ಬ್ಯಾಂಕಿನ ಕೆಲಸ ಕಾರ್ಯಗಳು ಮತ್ತು ವ್ಯವಹಾರಗಳ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ ಮತ್ತು ವ್ಯವಸ್ಥಾಪನೆಯ ಅಧಿಕಾರಗಳನ್ನು ಸಹ ಹೊಂದಿರತಕ್ಕದ್ದು ಮತ್ತು ರಾಷ್ಟ್ರೀಯ ಬ್ಯಾಂಕ್ ಚಲಾಯಿಸಬಹುದಾದ ಎಲ್ಲಾ ಅಧಿಕಾರಗಳನ್ನು ಸಹ ಚಲಾಯಿಸಬಹುದು ಅಥವಾ ಮಾಡಬಹುದಾದ ಎಲ್ಲಾ ಕಾರ್ಯಗಳನ್ನು ಸಹ ಮಾಡಬಹುದು:

ಪರಂತು, ವ್ಯವಸ್ಥಾಪಕ ನಿರ್ದೇಶಕನ ಪದದಲ್ಲಿ, 11ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಸ್ವರೂಪದ ಯಾವುದೇ ಆಕಸ್ಮಿಕ ಖಾಲಿ ಸ್ಥಾನ ಉಂಟಾದ ಅವಧಿಯಲ್ಲಿ, ಅಧ್ಯಕ್ಷನು, 11ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ನೇಮಕ ಮಾಡಿದ ವ್ಯಕ್ತಿಯು ವ್ಯವಸ್ಥಾಪಕ ನಿರ್ದೇಶಕನಾಗಿ ತನ್ನ ಪದವನ್ನು ವಹಿಸಿಕೊಳ್ಳುವವರೆಗೆ

ವ್ಯವಸ್ಥಾಪಕ ನಿರ್ದೇಶಕನ ಅಧಿಕಾರಗಳನ್ನೂ ಚಲಾಯಿಸಬಹುದು ಮತ್ತು ಪ್ರಕಾರ್ಯಗಳನ್ನೂ ನಿರ್ವಹಿಸಬಹುದು.

(4) 6ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಯಾರೇ ಪೂರ್ಣಕಾಲಿಕ ನಿರ್ದೇಶಕನು, (3)ನೇ ಉಪಪ್ರಕರಣದ ಮೇರೆಗೆ ವ್ಯವಸ್ಥಾಪಕ ನಿರ್ದೇಶಕನು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅವನಿಗೆ ಸಹಾಯ ಮಾಡತಕ್ಕದ್ದು ಮತ್ತು ಮಂಡಲಿಯು ತನಗೆ ವಹಿಸಿಕೊಡಬಹುದಾದ ಅಥವಾ ಪ್ರತ್ಯಾಯೋಜಿಸಬಹುದಾದಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(5) ವ್ಯವಸ್ಥಾಪಕ ನಿರ್ದೇಶಕನು (3)ನೇ ಉಪಪ್ರಕರಣದ ಮೇರೆಗೆ ತನ್ನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅಧ್ಯಕ್ಷನು ನೀಡಬಹುದಾದಂಥ ನಿರ್ದೇಶನಗಳನ್ನು ಅವನು ಅನುಸರಿಸತಕ್ಕದ್ದು.

(6) ರಾಷ್ಟ್ರೀಯ ಬ್ಯಾಂಕ್ ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ಸಾರ್ವಜನಿಕ ಹಿತಾಸಕ್ತಿಯನ್ನೊಳಗೊಂಡ ಕಾರ್ಯನೀತಿಯ ವಿಷಯಗಳಲ್ಲಿ ಕೇಂದ್ರ ಸರ್ಕಾರವು ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ ಲಿಖಿತದಲ್ಲಿ ನೀಡಬಹುದಾದಂಥ ಅಥವಾ ರಿಸರ್ವ್ ಬ್ಯಾಂಕ್ ಲಿಖಿತದಲ್ಲಿ ನೀಡಬಹುದಾದಂಥ ನಿರ್ದೇಶನಗಳಿಂದ ಅದು ಮಾರ್ಗದರ್ಶನ ಪಡೆಯತಕ್ಕದ್ದು.

**6. ನಿರ್ದೇಶಕರ ಮಂಡಲಿ.–** (1) ರಾಷ್ಟ್ರೀಯ ಬ್ಯಾಂಕಿನ ನಿರ್ದೇಶಕರ ಮಂಡಲಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಅಧ್ಯಕ್ಷ;

(ಬಿ) ಗ್ರಾಮೀಣ ಅರ್ಥಶಾಸ್ತ್ರದಲ್ಲಿ, ಗ್ರಾಮೀಣಾಭಿವೃದ್ಧಿಯಲ್ಲಿ, ಗ್ರಾಮ ಮತ್ತು ಗುಡಿ ಕೈಗಾರಿಕೆಗಳಲ್ಲಿ, ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ಪರಿಣಿತರಾಗಿರುವ ಅಥವಾ ಸಹಕಾರಿ ಬ್ಯಾಂಕ್‌ಗಳ, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ ಅಥವಾ ವಾಣಿಜ್ಯ ಬ್ಯಾಂಕ್‌ಗಳ ಕಾರ್ಯ ನಿರ್ವಹಣೆಯಲ್ಲಿ ಅಥವಾ ರಾಷ್ಟ್ರೀಯ ಬ್ಯಾಂಕಿಗೆ ಉಪಯುಕ್ತವೆಂದು ಕೇಂದ್ರ ಸರ್ಕಾರವು ಪರಿಗಣಿಸುವ ಯಾವ ಇತರ ವಿಷಯದಲ್ಲಿ ವಿಶೇಷಜ್ಞಾನ ಅಥವಾ ವೃತ್ತಿ ಅನುಭವವು ರಾಷ್ಟ್ರೀಯ ಬ್ಯಾಂಕಿಗೆ ಉಪಯುಕ್ತವೆಂದು ಕೇಂದ್ರ ಸರ್ಕಾರವು ಪರಿಗಣಿಸುವುದೋ ಆ ಯಾವುದೇ ಇತರ ವಿಷಯದಲ್ಲಿ ಅನುಭವ ಹೊಂದಿರುವ ವ್ಯಕ್ತಿಗಳ ಪೈಕಿ ಮೂವರು ನಿರ್ದೇಶಕರು;

(ಸಿ) ರಿಸರ್ವ್ ಬ್ಯಾಂಕಿನ ನಿರ್ದೇಶಕರ ಪೈಕಿ ಮೂವರು ನಿರ್ದೇಶಕರು;

(ಡಿ) ಕೇಂದ್ರ ಸರ್ಕಾರದ ಅಧಿಕಾರಿಗಳ ಪೈಕಿ ಮೂವರು ನಿರ್ದೇಶಕರು;

(ಇ) ರಾಜ್ಯ ಸರ್ಕಾರಗಳ ಅಧಿಕಾರಿಗಳ ಪೈಕಿ ನಾಲ್ವರು ನಿರ್ದೇಶಕರು;

(ಎಫ್) ಯಾವ ಸಭೆಯಲ್ಲಿ ಯಾವ ದಿನಾಂಕದಂದು ಈ ಕೆಳಕಂಡ ಆಧಾರದ ಮೇಲೆ ಚುನಾವಣೆ ನಡೆಯುವುದೋ ಆ ದಿನಾಂಕಕ್ಕೆ ತೊಂಬತ್ತು ದಿನಗಳಿಗೆ ಮುಂಚೆ ರಾಷ್ಟ್ರೀಯ ಬ್ಯಾಂಕಿನ ಷೇರುದಾರರ ರಿಜಿಸ್ಟರಿನಲ್ಲಿ ಯಾರ ಹೆಸರುಗಳು ನಮೂದಾಗಿರುವವೋ ಆ ಷೇರುದಾರರು, ರಿಸರ್ವ್ ಬ್ಯಾಂಕ್, ಕೇಂದ್ರ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಇತರ ಸಂಸ್ಥೆಗಳನ್ನು ಹೊರತುಪಡಿಸಿ, ಕೆಳಕಂಡಂತೆ ನಿಯಮಿಸಲಾದ ರೀತಿಯಲ್ಲಿ ಚುನಾಯಿಸಿದಷ್ಟು ಸಂಖ್ಯೆಯ ನಿರ್ದೇಶಕರುಗಳು, ಎಂದರೆ:–

| | |
|---|---|
| (i) ಅಂಥ ಷೇರುದಾರರಿಗೆ ನೀಡಲಾದ ಈಕ್ವಿಟಿ ಷೇರು ಬಂಡವಾಳದ ಒಟ್ಟು ಮೊತ್ತವು ಹೊರಡಿಸಲಾದ ಒಟ್ಟು ಈಕ್ವಿಟಿ ಬಂಡವಾಳದ ಶೇಕಡಾ ಹತ್ತು ಅಥವಾ ಅದಕ್ಕಿಂತ ಕಡಿಮೆ ಇರುವಲ್ಲಿ, | ........ ಇಬ್ಬರು ನಿರ್ದೇಶಕರು. |

| | |
|---|---|
| (ii) ಅಂಥ ಷೇರುದಾರರಿಗೆ ನೀಡಲಾದ ಈಕ್ವಿಟಿ ಷೇರು ಬಂಡವಾಳದ ಒಟ್ಟು ಮೊತ್ತವು ಹೊರಡಿಸಲಾದ ಒಟ್ಟು ಈಕ್ವಿಟಿ ಬಂಡವಾಳದ ಶೇಕಡಾ ಹತ್ತಕ್ಕಿಂತ ಹೆಚ್ಚು, ಆದರೆ ಶೇಕಡಾ ಇಪ್ಪತ್ತೈದಕ್ಕಿಂತ ಕಡಿಮೆ ಇರುವಲ್ಲಿ, | ....... ಮೂವರು ನಿರ್ದೇಶಕರು; ಮತ್ತು |
| (iii) ಅಂಥ ಷೇರುದಾರರಿಗೆ ನೀಡಲಾದ ಒಟ್ಟು ಈಕ್ವಿಟಿ ಷೇರು ಬಂಡವಾಳವು ಹೊರಡಿಸಲಾದ ಒಟ್ಟು ಈಕ್ವಿಟಿ ಬಂಡವಾಳದ ಶೇಕಡಾ ಇಪ್ಪತ್ತೈದು ಅಥವಾ ಅದಕ್ಕಿಂತ ಹೆಚ್ಚು ಇರುವಲ್ಲಿ, | ........... ನಾಲ್ವರು ನಿರ್ದೇಶಕರು: |

ಪರಂತು, ಈ ಖಂಡದ ಮೇರೆಗೆ ಚುನಾಯಿತರಾದ ನಿರ್ದೇಶಕರು ಅಧಿಕಾರ ವಹಿಸಿಕೊಳ್ಳುವವರೆಗೆ, ಕೇಂದ್ರ ಸರ್ಕಾರವು, ಕೃಷಿ ವಿಜ್ಞಾನ, ತಂತ್ರಜ್ಞಾನ, ಅರ್ಥಶಾಸ್ತ್ರ, ಬ್ಯಾಂಕಿಂಗ್, ಸಹಕಾರ ಸಂಘಗಳು, ಕಾನೂನು, ಗ್ರಾಮೀಣ ಹಣಕಾಸು, ಬಂಡವಾಳ ಹೂಡಿಕೆ, ಲೆಕ್ಕಶಾಸ್ತ್ರ, ಮಾರುಕಟ್ಟೆ ವ್ಯವಹಾರ ಇವುಗಳಲ್ಲಿ ವಿಶೇಷ ಜ್ಞಾನ ಮತ್ತು ವೃತ್ತಿ ಅನುಭವ ಹೊಂದಿರುವ, ಅಥವಾ ಯಾವ ಇತರ ವಿಷಯದಲ್ಲಿ ವಿಶೇಷ ಜ್ಞಾನ ಅಥವಾ ವೃತ್ತಿ ಅನುಭವವು ರಾಷ್ಟ್ರೀಯ ಬ್ಯಾಂಕಿಗೆ ತನ್ನ ಪ್ರಕಾರ್ಯಗಳನ್ನು ನೆರವೇರಿಸಲು ಉಪಯುಕ್ತವೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುವುದೋ ಆ ಯಾವುದೇ ಇತರ ವಿಷಯದಲ್ಲಿ ವಿಶೇಷ ಜ್ಞಾನ ಮತ್ತು ವೃತ್ತಿ ಅನುಭವ ಹೊಂದಿರುವ ವ್ಯಕ್ತಿಗಳ ಪೈಕಿ ನಾಲ್ವರನ್ನು ಮೀರದಷ್ಟು ಸಂಖ್ಯೆಯ ನಿರ್ದೇಶಕರನ್ನು ಯಾವುದೇ ಕಾಲದಲ್ಲಿ ನಾಮನಿರ್ದೇಶನ ಮಾಡಬಹುದು.

(ಜಿ) ವ್ಯವಸ್ಥಾಪಕ ನಿರ್ದೇಶಕ.

(2) (ಎಫ್) ಖಂಡದಲ್ಲಿ ಉಲ್ಲೇಖಿಸಿದ ನಿರ್ದೇಶಕರನ್ನು ಹೊರತುಪಡಿಸಿ, ಅಧ್ಯಕ್ಷನನ್ನು ಮತ್ತು ಇತರ ನಿರ್ದೇಶಕರುಗಳನ್ನು, ಕೇಂದ್ರ ಸರ್ಕಾರವು ರಿಸರ್ವ್ ಬ್ಯಾಂಕ್‌ನೊಂದಿಗೆ ಸಮಾಲೋಚಿಸಿ ನೇಮಿಸತಕ್ಕದ್ದು:

ಪರಂತು, (1)ನೇ ಉಪಪ್ರಕರಣದ (ಇ) ಖಂಡದ ಮೇರೆಗೆ ನೇಮಕಗೊಂಡ ನಿರ್ದೇಶಕರುಗಳ ಸಂದರ್ಭದಲ್ಲಿ ಅಂಥ ಯಾವುದೇ ಸಮಾಲೋಚನೆ ಅವಶ್ಯವಾಗಿರತಕ್ಕದ್ದಲ್ಲ.

(3) ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿದ ತರುವಾಯ, ಕೇಂದ್ರ ಸರ್ಕಾರಕ್ಕೆ ತಾನು ಸಮುಚಿತವೆಂದು ಭಾವಿಸಬಹುದಾದಂಥ ಪದನಾಮಗಳುಳ್ಳ ಒಬ್ಬ ಅಥವಾ ಹೆಚ್ಚು ಪೂರ್ಣಕಾಲಿಕ ನಿರ್ದೇಶಕರನ್ನು ನೇಮಕ ಮಾಡಿಕೊಳ್ಳುವುದು ಅವಶ್ಯವೆಂದು ಮನದಟ್ಟಾದರೆ ಅದು ಹಾಗೆ ಮಾಡಬಹುದು ಮತ್ತು ಹಾಗೆ ನೇಮಕಗೊಂಡ ಯಾರೇ ಪೂರ್ಣಕಾಲಿಕ ನಿರ್ದೇಶಕನು ಮಂಡಲಿಯ ಸದಸ್ಯನೂ ಸಹ ಆಗಿರತಕ್ಕದ್ದು.

* * *

**7. ಅಧ್ಯಕ್ಷನ ಮತ್ತು ಇತರ ನಿರ್ದೇಶಕರ ಪದಾವಧಿ, ನಿವೃತ್ತಿ ಮತ್ತು ಫೀಜುಗಳ ಸಂದಾಯ.**- (1) ಅಧ್ಯಕ್ಷನು ಐದು ವರ್ಷಗಳಿಗೆ ಮೀರದಂಥ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಅವನು, ಕೇಂದ್ರ ಸರ್ಕಾರವು ನೇಮಕದ ಕಾಲದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಂಬಳ ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು ಮತ್ತು ಮರು ನೇಮಕ ಹೊಂದಲು ಅರ್ಹನಾಗಿರತಕ್ಕದ್ದು.

* * *

(1ಎ) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು, ಆ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ, ಅವನಿಗೆ ಮೂರು ತಿಂಗಳಿಗೆ ಕಡಿಮೆಯಿಲ್ಲದ ಲಿಖಿತ ನೋಟೀಸನ್ನು ಅಥವಾ ಅಂಥ ನೋಟೀಸಿಗೆ ಬದಲಾಗಿ ಮೂರು

ತಿಂಗಳ ಸಂಬಳ ಮತ್ತು ಭತ್ಯೆಗಳನ್ನು ಕೊಟ್ಟು ಅಧ್ಯಕ್ಷನ ಪದಾವಧಿಯನ್ನು ಕೊನೆಗೊಳಿಸುವ ಹಕ್ಕನ್ನು ಹೊಂದಿರತಕ್ಕದ್ದು.

(1ಬಿ) ಅಧ್ಯಕ್ಷನ ಪದವು ಖಾಲಿಯಾದ ಸಂದರ್ಭದಲ್ಲಿ, ಹಾಗೆ ಹುದ್ದೆ ಖಾಲಿಯಿರುವ ಅವಧಿಯಲ್ಲಿ ವ್ಯವಸ್ಥಾಪಕ ನಿರ್ದೇಶಕನು ಅಧ್ಯಕ್ಷನ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(2) (5)ನೇ ಉಪಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳಿಗೊಳಪಟ್ಟು, 6ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಅಥವಾ (ಸಿ) ಖಂಡದ ಮೇರೆಗೆ ನೇಮಕಗೊಂಡ ನಿರ್ದೇಶಕನು, ಈ ಬಗ್ಗೆ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಮೂರು ವರ್ಷಗಳನ್ನು ಮೀರದ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಮರುನೇಮಕ ಹೊಂದಲು ಅರ್ಹನಾಗಿರತಕ್ಕದ್ದು:

ಪರಂತು, ಅಂಥ ಯಾರೇ ನಿರ್ದೇಶಕನು, ನಿರಂತರವಾಗಿ ಆರು ವರ್ಷಗಳನ್ನು ಮೀರಿದ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದಲ್ಲ.

(3) ಕೇಂದ್ರ ಸರ್ಕಾರವು, ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ, ಅಧ್ಯಕ್ಷನ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ತೆಗೆದುಹಾಕಲು ಉದ್ದೇಶಿಸಿರುವ ಸಂಬಂಧದಲ್ಲಿ ಕಾರಣ ತೋರಿಸುವಂತೆ ಅವನಿಗೆ ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ಅವನನ್ನು ತೆಗೆದುಹಾಕಬಹುದು.

(4) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಧಿಕಾರಿಯಾಗಿರದ ಅಥವಾ ರಿಜರ್ವ್ ಬ್ಯಾಂಕಿನ ಅಥವಾ ಯಾವುದೇ ಕೇಂದ್ರ ಅಧಿನಿಯಮದ ಅಥವಾ ಯಾವುದೇ ರಾಜ್ಯ ಅಧಿನಿಯಮದ ಮೂಲಕ ಅಥವಾ ಮೇರೆಗೆ ಸ್ಥಾಪಿಸಲಾದ ಮತ್ತು ಅಂಥ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ, ಯಾವುದೇ ನಿಕಾಯದ ಅಥವಾ ನಿಗಮದ ಅಧಿಕಾರಿಯಾಗಿರದ ಅಧ್ಯಕ್ಷನಿಗೆ ಮತ್ತು ಯಾರೇ ಇತರ ನಿರ್ದೇಶಕನಿಗೆ, ಮಂಡಲಿಯ ಅಥವಾ ಅದರ ಯಾವುದೇ ಸಮಿತಿಗಳ ಸಭೆಗಳಿಗೆ ಹಾಜರಾಗುವುದಕ್ಕಾಗಿ ಮತ್ತು ರಾಷ್ಟ್ರೀಯ ಬ್ಯಾಂಕಿನ ಯಾವುದೇ ಇತರ ಕೆಲಸವನ್ನು ನಿರ್ವಹಿಸುವುದಕ್ಕಾಗಿ ನಿಯಮಿಸಬಹುದಾದಂಥ ಫೀಜು ಮತ್ತು ಭತ್ಯೆಗಳನ್ನು ಸಂದಾಯ ಮಾಡತಕ್ಕದ್ದು.

(5) 6ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಿಂದ (ಎಫ್) ವರೆಗಿನ ಖಂಡಗಳ ಮೇರೆಗೆ ನೇಮಕಗೊಂಡ ನಿರ್ದೇಶಕರುಗಳು ಕೇಂದ್ರ ಸರ್ಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು.

**8. ವ್ಯವಸ್ಥಾಪಕ ನಿರ್ದೇಶಕನ ಮತ್ತು ಪೂರ್ಣಕಾಲಿಕ ನಿರ್ದೇಶಕರ ಪದಾವಧಿ, ಸೇವಾ ಷರತ್ತುಗಳು, ಇತ್ಯಾದಿ.**- (1) 6ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ವ್ಯವಸ್ಥಾಪಕ ನಿರ್ದೇಶಕನು ಮತ್ತು ಯಾರೇ ಪೂರ್ಣಕಾಲಿಕ ನಿರ್ದೇಶಕನು,-

(ಎ) ನೇಮಕದ ಕಾಲದಲ್ಲಿ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಐದು ವರ್ಷಗಳನ್ನು ಮೀರದ ಅವಧಿಗೆ ಪದಧಾರಣ ಮಾಡತಕ್ಕದ್ದು ಮತ್ತು ಮರುನೇಮಕಹೊಂದಲು ಅರ್ಹನಾಗಿರತಕ್ಕದ್ದು;

(ಬಿ) ಮಂಡಲಿಯು ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು ಮತ್ತು ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ ನಿರ್ಧರಿಸಬಹುದಾದಂಥ ಸಂಬಳ ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು ಮತ್ತು ಅಂಥ ಸೇವಾ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:

ಪರಂತು, ಮೊದಲ ಮಂಡಲಿಗೆ ನೇಮಕಗೊಂಡ ವ್ಯವಸ್ಥಾಪಕ ನಿರ್ದೇಶಕನು ಮತ್ತು ಅಂಥ ಯಾರೇ ಪೂರ್ಣಕಾಲಿಕ ನಿರ್ದೇಶಕನು ಕೇಂದ್ರ ಸರ್ಕಾರವು ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ ನಿರ್ಧರಿಸಬಹುದಾದಂಥ ಸಂಬಳ ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು ಮತ್ತು ಅಂಥ ಸೇವಾ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

(2) ಕೇಂದ್ರ ಸರ್ಕಾರವು, ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ, 6ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ನಿರ್ದೇಶಕನನ್ನು ಅಥವಾ ಯಾರೇ ಪೂರ್ಣಕಾಲಿಕ ನಿರ್ದೇಶಕನನ್ನು ಅವನ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ತೆಗೆದುಹಾಕಲು

ಉದ್ದೇಶಿಸಿರುವ ಸಂಬಂಧದಲ್ಲಿ ಕಾರಣ ತೋರಿಸುವಂತೆ ಅವನಿಗೆ ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ತೆಗೆದುಹಾಕಬಹುದು.

(3) (1)ನೇ ಉಪಪ್ರಕರಣದಲ್ಲಿ ಅಥವಾ (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, 6ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ವ್ಯವಸ್ಥಾಪಕ ನಿರ್ದೇಶಕನ ಅಥವಾ ಯಾರೇ ಪೂರ್ಣಕಾಲಿಕ ನಿರ್ದೇಶಕನ ಪದಾವಧಿಯನ್ನು (1)ನೇ ಉಪಪ್ರಕರಣದ ಮೇರೆಗೆ ನಿಗದಿಪಡಿಸಲಾದ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆಯೇ ಕೇಂದ್ರ ಸರ್ಕಾರವು ಅವನಿಗೆ ಮೂರು ತಿಂಗಳಿಗಿಂತ ಕಡಿಮೆ ಇಲ್ಲದ ಲಿಖಿತ ನೋಟೀಸನ್ನು ಕೊಡುವ ಮೂಲಕ ಅಥವಾ ಅಂಥ ನೋಟೀಸಿನ ಬದಲಾಗಿ ಮೂರು ತಿಂಗಳ ಸಂಬಳ ಮತ್ತು ಭತ್ಯೆಗಳನ್ನು ನೀಡುವ ಮೂಲಕ ಯಾವುದೇ ಕಾಲದಲ್ಲಿ ಕೊನೆಗೊಳಿಸುವ ಹಕ್ಕನ್ನು ಹೊಂದಿರತಕ್ಕದ್ದು:

ಪರಂತು, 6ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ವ್ಯವಸ್ಥಾಪಕ ನಿರ್ದೇಶಕನ ಅಥವಾ ಯಾರೇ ಪೂರ್ಣಕಾಲಿಕ ನಿರ್ದೇಶಕನ ಪದಾವಧಿಯನ್ನು ಕೊನೆಗೊಳಿಸುವುದಕ್ಕೆ ಮುಂಚೆ ಕೇಂದ್ರ ಸರ್ಕಾರವು ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸತಕ್ಕದ್ದು.

**9. ಅನರ್ಹತೆಗಳು.–** (1) ಯಾರೇ ವ್ಯಕ್ತಿಯು,–

(ಎ) ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯವು ಘೋಷಿಸಿದ್ದರೆ; ಅಥವಾ

(ಬಿ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧ:ಪತನವನ್ನೊಳಗೊಳ್ಳುವ ಯಾವುದೇ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವಲ್ಲಿ ಅಥವಾ ನಿರ್ಣೀತನಾಗಿದ್ದಲ್ಲಿ; ಅಥವಾ

(ಸಿ) ಯಾವುದೇ ಕಾಲದಲ್ಲಿ ದಿವಾಳಿಯೆಂದು ನ್ಯಾಯ ನಿರ್ಣೀತನಾಗಿರುವಲ್ಲಿ ಅಥವಾ ಆಗಿದ್ದಲ್ಲಿ ಅಥವಾ ಅವನು ತನ್ನ ಋಣಗಳ ಸಂದಾಯವನ್ನು ನಿಲ್ಲಿಸಿದ್ದಲ್ಲಿ ಅಥವಾ ತನ್ನ ಸಾಲಿಗರೊಂದಿಗೆ ರಾಜಿ ಮಾಡಿಕೊಂಡಿರುವಲ್ಲಿ

– ನಿರ್ದೇಶಕನಾಗತಕ್ಕದ್ದಲ್ಲ.

(2) ನಿರ್ದೇಶಕನಾಗಿ ಸಂಸತ್ತಿನ ಅಥವಾ ಯಾವುದೇ ರಾಜ್ಯದ ವಿಧಾನಮಂಡಲದ ಸದಸ್ಯನಾಗಿರುವ ಯಾರೇ ವ್ಯಕ್ತಿಯ ನೇಮಕವು, ಅವನ ನೇಮಕದ ದಿನಾಂಕದಿಂದ ಎರಡು ತಿಂಗಳೊಳಗೆ ಅವನು ಹಾಗೆ ಸದಸ್ಯನಾಗಿರುವುದು ನಿಂತುಹೋದ ಹೊರತು, ಎರಡು ತಿಂಗಳ ಸದರಿ ಅವಧಿಯು ಮುಕ್ತಾಯವಾದ ಮೇಲೆ ಶೂನ್ಯವಾಗತಕ್ಕದ್ದು, ಮತ್ತು ಯಾರೇ ನಿರ್ದೇಶಕನು ಸಂಸತ್ತಿನ ಅಥವಾ ಯಾವುದೇ ರಾಜ್ಯದ ವಿಧಾನ ಮಂಡಲದ ಸದಸ್ಯನಾಗಿ ಚುನಾಯಿತನಾದಲ್ಲಿ ಅಥವಾ ನಾಮನಿರ್ದೇಶನಗೊಂಡಲ್ಲಿ ಸಂದರ್ಭಾನುಸಾರ ಅಂಥ ಚುನಾವಣೆಯ ಅಥವಾ ನಾಮನಿರ್ದೇಶನದ ದಿನಾಂಕದಿಂದ ನಿರ್ದೇಶಕನಾಗಿರುವುದು ನಿಂತುಹೋಗತಕ್ಕದ್ದು.

**10. ನಿರ್ದೇಶಕರು ಪದವನ್ನು ತೆರವು ಮಾಡುವುದು ಮತ್ತು ಅದಕ್ಕೆ ರಾಜೀನಾಮೆ ನೀಡುವುದು.–** ನಿರ್ದೇಶಕನು,–

(ಎ) 9ನೇ ಪ್ರಕರಣದಲ್ಲಿ ನಮೂದಿಸಲಾಗಿರುವ ಅನರ್ಹತೆಗಳ ಪೈಕಿ ಯಾವುದೇ ಅನರ್ಹತೆಗೆ ಗುರಿಯಾದರೆ; ಅಥವಾ

(ಬಿ) ಮಂಡಲಿಯ ಅನುಮತಿಯಿಲ್ಲದೆ ಅದರ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ,

– ಅವನ ಸ್ಥಾನವು ಆ ತರುವಾಯ ತೆರವಾಗತಕ್ಕದ್ದು.

(2) ಯಾರೇ ನಿರ್ದೇಶಕನು ಕೇಂದ್ರ ಸರ್ಕಾರಕ್ಕೆ ಲಿಖಿತ ನೋಟೀಸನ್ನು ಕೊಡುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಕೇಂದ್ರ ಸರ್ಕಾರವು ಅವನ ರಾಜೀನಾಮೆಯನ್ನು ಅಂಗೀಕರಿಸಿದ ಮೇಲೆ ಅಥವಾ ಅವನ ರಾಜೀನಾಮೆಯು ಕೂಡಲೇ ಅಂಗೀಕೃತವಾಗದಿದ್ದರೆ, ಕೇಂದ್ರ ಸರ್ಕಾರವು ರಾಜೀನಾಮೆಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳು ಮುಕ್ತಾಯವಾದ ಮೇಲೆ ಅವನು ತನ್ನ ಪದವನ್ನು ತೆರವು ಮಾಡಿದ್ದಾನೆಂದು ಭಾವಿಸತಕ್ಕದ್ದು.

**11. ವ್ಯವಸ್ಥಾಪಕ ನಿರ್ದೇಶಕನ ಪದವು ಆಕಸ್ಮಿಕವಾಗಿ ಖಾಲಿಯಾಗುವುದು.**- ವ್ಯವಸ್ಥಾಪಕ ನಿರ್ದೇಶಕನು ಅಶಕ್ತತೆಯಿಂದಾಗಿ ಅಥವಾ ಅನ್ಯಥಾ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥನಾದರೆ ಅಥವಾ ಅವನ ನೇಮಕವನ್ನು ತೆರವುಗೊಳಿಸುವುದನ್ನು ಒಳಗೊಂಡಿರದ ಸಂದರ್ಭಗಳಲ್ಲಿ ರಜೆಯ ಮೇಲೆ ಅಥವಾ ಅನ್ಯಥಾ ಗೈರುಹಾಜರಾದರೆ, ಕೇಂದ್ರ ಸರ್ಕಾರವು ರಿಸರ್ವ್ ಬ್ಯಾಂಕಿನೊಂದಿಗೆ ಮತ್ತು ಮಂಡಲಿಯೊಂದಿಗೆ ಸಮಾಲೋಚಿಸಿ ಅವನ ಗೈರುಹಾಜರಿಯ ಅವಧಿಯಲ್ಲಿ ವ್ಯವಸ್ಥಾಪಕ ನಿರ್ದೇಶಕನಾಗಿ ಕಾರ್ಯನಿರ್ವಹಿಸಲು ಅವನ ಸ್ಥಾನದಲ್ಲಿ ಮತ್ತೊಬ್ಬ ವ್ಯಕ್ತಿಯನ್ನು ನೇಮಕ ಮಾಡಬಹುದು.

**12. ಮಂಡಲಿಯ ಸಭೆಗಳು.**- (1) ಮಂಡಲಿಯು, ನಿಯಮಿಸಬಹುದಾದಂಥ ವೇಳೆಗಳಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ ಕಾರ್ಯಕಲಾಪಗಳ ನಿರ್ವಹಣೆಗೆ ಸಂಬಂಧಿಸಿದ ಕಾರ್ಯವಿಧಾನದ ಅಂಥ ನಿಯಮಗಳನ್ನು ಪಾಲಿಸತಕ್ಕದ್ದು.

(2) ಮಂಡಲಿಯ ಅಧ್ಯಕ್ಷನು ಅಥವಾ ಯಾವುದೇ ಕಾರಣಕ್ಕಾಗಿ ಯಾವುದೇ ಸಭೆಗೆ ಅವನು ಹಾಜರಾಗಲು ಅಸಮರ್ಥನಾದರೆ ವ್ಯವಸ್ಥಾಪಕ ನಿರ್ದೇಶಕನು, ಮತ್ತು ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಇಬ್ಬರೂ ಗೈರುಹಾಜರಾದಲ್ಲಿ, ಈ ಸಂಬಂಧದಲ್ಲಿ ಅಧ್ಯಕ್ಷನು ನಾಮನಿರ್ದೇಶಿಸಿದ ಯಾರೇ ಇತರ ನಿರ್ದೇಶಕನು ಮತ್ತು ಹಾಗೆ ನಾಮನಿರ್ದೇಶನ ಮಾಡಿಲ್ಲದಿರುವಲ್ಲಿ ಸಭೆಯಲ್ಲಿ ಹಾಜರಿರುವ ನಿರ್ದೇಶಕರು ಚುನಾಯಿಸಿದ ಯಾರೇ ಇತರ ನಿರ್ದೇಶಕನು ಮಂಡಲಿಯ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಮಂಡಲಿಯ ಯಾವುದೇ ಸಭೆಯ ಮುಂದೆ ಬರುವ ಎಲ್ಲಾ ಪ್ರಶ್ನೆಗಳನ್ನು ಹಾಜರಿದ್ದು ಮತ ನೀಡುವ ನಿರ್ದೇಶಕರ ಬಹುಮತದಿಂದ ತೀರ್ಮಾನಿಸತಕ್ಕದ್ದು ಮತ್ತು ಮತಗಳು ಸಮಾನವಾಗಿ ಬಂದ ಸಂದರ್ಭದಲ್ಲಿ ಅಧ್ಯಕ್ಷನು ಅಥವಾ ಅವನ ಗೈರು ಹಾಜರಿಯಲ್ಲಿ ಅಧ್ಯಕ್ಷತೆ ವಹಿಸುವ ವ್ಯಕ್ತಿಯು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

**13. ರಾಷ್ಟ್ರೀಯ ಬ್ಯಾಂಕಿನ ಸಮಿತಿಗಳು.**- (1) ಮಂಡಲಿಯು, ನಿಯಮಿಸಬಹುದಾದಷ್ಟು ಸಂಖ್ಯೆಯ ನಿರ್ದೇಶಕರನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ರಚಿಸಬಹುದು.

(2) ಕಾರ್ಯಕಾರಿ ಸಮಿತಿಯು, ಮಂಡಲಿಯು ನಿಯಮಿಸಬಹುದಾದಂಥ ಅಥವಾ ತನಗೆ ಪ್ರತ್ಯಾಯೋಜಿಸಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(3) ಮಂಡಲಿಯು, ತಾನು ಸೂಕ್ತವೆಂದು ಆಲೋಚಿಸುವಂಥ ಮತ್ತು ಅದು ನಿರ್ಣಯಿಸುವಂಥ ಉದ್ದೇಶಗಳಿಗಾಗಿ ನಿರ್ದೇಶಕರನ್ನು ಮಾತ್ರವೇ ಅಥವಾ ಇತರ ವ್ಯಕ್ತಿಗಳನ್ನು ಮಾತ್ರವೇ ಅಥವಾ ಭಾಗಶ: ನಿರ್ದೇಶಕರನ್ನು ಮತ್ತು ಭಾಗಶ: ಇತರ ವ್ಯಕ್ತಿಗಳನ್ನು ಒಳಗೊಂಡ ಇತರ ಸಮಿತಿಗಳನ್ನು ರಚಿಸಬಹುದು ಮತ್ತು ಹಾಗೆ ರಚಿಸಲಾದ ಪ್ರತಿಯೊಂದು ಸಮಿತಿಯು, ಮಂಡಲಿಯು ತನಗೆ ಪ್ರತ್ಯಾಯೋಜಿಸಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(4) ಕಾರ್ಯಕಾರಿ ಸಮಿತಿಯು, ನಿಯಮಿಸಬಹುದಾದಂಥ ವೇಳೆಗಳಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ತನ್ನ ಸಭೆಗಳಲ್ಲಿನ ಕಾರ್ಯಕಲಾಪಗಳ ನಿರ್ವಹಣೆಗೆ ಸಂಬಂಧಿಸಿದ ಕಾರ್ಯವಿಧಾನದ ಅಂಥ ನಿಯಮಗಳನ್ನು ಪಾಲಿಸತಕ್ಕದ್ದು.

(5) (3)ನೇ ಉಪಪ್ರಕರಣದ ಮೇರೆಗೆ ರಚಿಸಲಾದ ಯಾವುದೇ ಸಮಿತಿಯು ಸಭೆ ಸೇರತಕ್ಕ ವೇಳೆಗಳು ಮತ್ತು ಸ್ಥಳಗಳು, ಅಂಥ ಸಮಿತಿಯು ತನ್ನ ಸಭೆಗಳಲ್ಲಿನ ಕಾರ್ಯಕಲಾಪಗಳ ನಿರ್ವಹಣೆಗೆ ಸಂಬಂಧಿಸಿದಂತೆ ಪಾಲಿಸಬೇಕಾದ ಕಾರ್ಯವಿಧಾನ ನಿಯಮಗಳು ಮತ್ತು ಸಮಿತಿಯ ಸಭೆಗಳಿಗೆ ಹಾಜರಾಗಲು ಮತ್ತು ರಾಷ್ಟ್ರೀಯ ಬ್ಯಾಂಕಿನ ಯಾವುದೇ ಇತರ ಕೆಲಸಗಳನ್ನು ನಿರ್ವಹಿಸಲು ಅಂಥ ಸಮಿತಿಯ ಸದಸ್ಯರಿಗೆ ಸಂದಾಯ ಮಾಡಬಹುದಾದ ಫೀಜುಗಳು ಮತ್ತು ಭತ್ಯೆಗಳು - ಇವು ಆ ಬ್ಯಾಂಕ್ ನಿರ್ದಿಷ್ಟಪಡಿಸಬಹುದಾದಂಥವುಗಳು ಆಗಿರತಕ್ಕದ್ದು.

**14. ಸಲಹಾ ಪರಿಷತ್ತು.**- (1) ಮಂಡಲಿಯು, ತನ್ನ ಅಭಿಪ್ರಾಯದಲ್ಲಿ, ಕೃಷಿ, ಕೃಷಿ ಸಾಲ, ಸಹಕಾರ ಮತ್ತು ಗ್ರಾಮೀಣ ಅರ್ಥವ್ಯವಸ್ಥೆ, ಸಣ್ಣ ಪ್ರಮಾಣದ ಕೈಗಾರಿಕೆಗಳು, ಗ್ರಾಮೀಣ ಮತ್ತು ಗುಡಿ ಕೈಗಾರಿಕೆಗಳು ಮತ್ತು ಕರಕುಶಲ ಕಲೆ ಮತ್ತು ಇತರ ಗ್ರಾಮೀಣ ಕುಶಲ ಕಲೆ - ಇವುಗಳಲ್ಲಿ ವಿಶೇಷ ಜ್ಞಾನ ಹೊಂದಿರುವ

ಅಥವಾ ದೇಶದ ಸಮಗ್ರ ಅಭಿವೃದ್ಧಿ ಕಾರ್ಯನೀತಿಗಳು ಮತ್ತು ಅದರಲ್ಲೂ ವಿಶೇಷವಾಗಿ ರಾಷ್ಟ್ರೀಯ ಬ್ಯಾಂಕಿಗೆ ಉಪಯುಕ್ತವಾಗುವುದೆಂದು ಮಂಡಲಿಯು ಪರಿಗಣಿಸಿದ ಸಮಗ್ರ ಹಣಕಾಸು ಮತ್ತು ಸಾಲದ ಕಾರ್ಯನೀತಿಗಳು – ಇವುಗಳಲ್ಲಿ ವಿಶೇಷ ಜ್ಞಾನ ಮತ್ತು ಪರಿಜ್ಞಾನ ಹೊಂದಿರುವ ನಿರ್ದೇಶಕರುಗಳನ್ನು ಮತ್ತು ಇತರ ವ್ಯಕ್ತಿಗಳನ್ನು ಒಳಗೊಂಡ ಸಲಹಾ ಪರಿಷತ್ತನ್ನು ರಚಿಸಬಹುದು.

(2) ರಾಷ್ಟ್ರೀಯ ಬ್ಯಾಂಕ್ ಅಭಿಪ್ರಾಯ ಕೋರಿ ಸಲಹಾ ಪರಿಷತ್ತಿಗೆ ಕಳುಹಿಸಿದ ವಿಷಯಗಳ ಬಗ್ಗೆ ಸಲಹಾ ಪರಿಷತ್ತು ರಾಷ್ಟ್ರೀಯ ಬ್ಯಾಂಕಿಗೆ ಸಲಹೆ ನೀಡತಕ್ಕದ್ದು ಮತ್ತು ರಾಷ್ಟ್ರೀಯ ಬ್ಯಾಂಕ್ ಸಲಹಾ ಪರಿಷತ್ತಿಗೆ ವಹಿಸಬಹುದಾದಂಥ ಅಥವಾ ಪ್ರತ್ಯಾಯೋಜಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸಬಹುದು.

(3) ಸಲಹಾ ಪರಿಷತ್ತಿನ ಸದಸ್ಯನು ರಾಷ್ಟ್ರೀಯ ಬ್ಯಾಂಕ್ ನಿಗದಿಪಡಿಸಬಹುದಾದಂತೆ ಐದು ವರ್ಷಗಳಿಗೆ ಮೀರದ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಸಲಹಾ ಪರಿಷತ್ತಿನ ಸಭೆಗಳಿಗೆ ಹಾಜರಾಗಲು ಮತ್ತು ರಾಷ್ಟ್ರೀಯ ಬ್ಯಾಂಕಿನ ಯಾವುದೇ ಇತರ ಕೆಲಸಗಳನ್ನು ನಿರ್ವಹಿಸಲು ನಿಯಮಿಸಬಹುದಾದಂಥ ಫೀಜುಗಳನ್ನು ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು.

(4) ಸಲಹಾ ಪರಿಷತ್ತು, ನಿಯಮಿಸಬಹುದಾದಂಥ ವೇಳೆಗಳಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿನ ಕಾರ್ಯಕಲಾಪಗಳ ನಿರ್ವಹಣೆಗೆ ಸಂಬಂಧಿಸಿದ ಕಾರ್ಯವಿಧಾನದ ಅಂಥ ನಿಯಮಗಳನ್ನು ಪಾಲಿಸತಕ್ಕದ್ದು.

**15. ಕೆಲವು ಸಂದರ್ಭಗಳಲ್ಲಿ ಮಂಡಲಿಯ ಅಥವಾ ಅದರ ಸಮಿತಿಯ ಸದಸ್ಯನು ಸಭೆಗಳಲ್ಲಿ ಭಾಗವಹಿಸದಿರುವುದು.**– ಮಂಡಲಿಯ ಅಥವಾ ಅದರ ಸಮಿತಿಯ ಸಭೆಯಲ್ಲಿ ಪರ್ಯಾಲೋಚನೆಗಾಗಿ ಬರುವ ಯಾವುದೇ ವಿಷಯದಲ್ಲಿ ಯಾವುದೇ ಪ್ರತ್ಯಕ್ಷ ಅಥವಾ ಪರೋಕ್ಷ ಆರ್ಥಿಕ ಹಿತಾಸಕ್ತಿಯನ್ನು ಹೊಂದಿರುವ ಮಂಡಲಿಯ ನಿರ್ದೇಶಕನು ಅಥವಾ ಸಮಿತಿಯ ಸದಸ್ಯನು ಸಂಬಂಧಪಟ್ಟ ಪರಿಸ್ಥಿತಿಗಳು ಅವನ ತಿಳಿವಳಿಕೆಗೆ ಬಂದ ನಂತರ ಸಾಧ್ಯವಾದಷ್ಟು ಬೇಗನೆ, ಅಂಥ ಸಭೆಯಲ್ಲಿ ತನ್ನ ಹಿತಾಸಕ್ತಿಯ ಸ್ವರೂಪವನ್ನು ಬಹಿರಂಗಪಡಿಸತಕ್ಕದ್ದು ಮತ್ತು ಹಾಗೆ ಬಹಿರಂಗಪಡಿಸಿದ್ದನ್ನು ಮಂಡಲಿಯ ಅಥವಾ ಸಂದರ್ಭಾನುಸಾರ ಸಮಿತಿಯ ನಡವಳಿಯಲ್ಲಿ ದಾಖಲ್ಮಾಡತಕ್ಕದ್ದು ಮತ್ತು ನಿರ್ದೇಶಕನು ಅಥವಾ ಸದಸ್ಯನು ಆ ವಿಷಯಕ್ಕೆ ಸಂಬಂಧಿಸಿದಂತೆ ಮಂಡಲಿಯ ಅಥವಾ ಸಮಿತಿಯ ಯಾವುದೇ ಚರ್ಚೆಯಲ್ಲಿ ಅಥವಾ ನಿರ್ಣಯದಲ್ಲಿ ಭಾಗವಹಿಸತಕ್ಕದ್ದಲ್ಲ.

## ಅಧ್ಯಾಯ – IV

## ರಾಷ್ಟ್ರೀಯ ಬ್ಯಾಂಕಿಗೆ ವ್ಯವಹಾರದ ವರ್ಗಾವಣೆ

**16. ಕೃಷಿ ಪುನರ್ ವಿತ್ತೀಯ ಮತ್ತು ಅಭಿವೃದ್ಧಿ ನಿಗಮದ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ.**– (1) ಕೇಂದ್ರ ಸರ್ಕಾರವು, ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಎಲ್ಲಾ ವ್ಯವಹಾರ, ಸ್ವತ್ತು, ಆಸ್ತಿಗಳು ಮತ್ತು ಹೊಣೆಗಾರಿಕೆಗಳು, ಹಕ್ಕುಗಳು, ಹಿತಾಸಕ್ತಿಗಳು, ಯಾವುದೇ ಸ್ವರೂಪದ ವಿಶೇಷಾಧಿಕಾರಗಳು ಮತ್ತು ಬಾಧ್ಯತೆಗಳೂ ಸೇರಿದಂತೆ ಕೃಷಿ ಪುನರ್ ವಿತ್ತೀಯ ಮತ್ತು ಅಭಿವೃದ್ಧಿ ನಿಗಮದ (ಇಲ್ಲಿ ಇನ್ನು ಮುಂದೆ ಈ ಅಧ್ಯಾಯದಲ್ಲಿ ನಿಗಮ ಎಂದು ಉಲ್ಲೇಖಿಸಲಾಗಿದೆ) ಸಮಗ್ರ ಉದ್ಯಮವು ರಾಷ್ಟ್ರೀಯ ಬ್ಯಾಂಕಿಗೆ ವರ್ಗಾವಣೆಯಾಗತಕ್ಕದ್ದು ಮತ್ತು ಅದರಲ್ಲಿ ನಿಹಿತವಾಗತಕ್ಕದ್ದು.

* ದಿನಾಂಕ 12.07.1982 ರಿಂದ ಜಾರಿಗೆ ಬಂದಿದೆ.

(2) (1)ನೇ ಉಪಪ್ರಕರಣದ ಮೇರೆಗೆ ರಾಷ್ಟ್ರೀಯ ಬ್ಯಾಂಕಿಗೆ ನಿಗಮದ ಉದ್ಯಮದ ವರ್ಗಾವಣೆಯಿಂದಾದ ನಷ್ಟಕ್ಕೆ ಪರಿಹಾರವಾಗಿ, ರಾಷ್ಟ್ರೀಯ ಬ್ಯಾಂಕ್ ಆ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಲಾದ ದಿನಾಂಕದಿಂದ (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ಗೊತ್ತುಪಡಿಸಲಾದ ದಿನಾಂಕವೆಂದು ಉಲ್ಲೇಖಿಸಲಾಗಿದೆ) ಆರು ತಿಂಗಳ ಒಳಗಾಗಿ ನಿಗಮದ ಷೇರುದಾರರಿಗೆ, ಗೊತ್ತುಪಡಿಸಿದ ದಿನಾಂಕಕ್ಕೆ

ನಿಕಟಪೂರ್ವದ ದಿನಾಂಕದಂದು ಇದ್ದ ನಿಗಮದ ಒಟ್ಟು ಸಂದಾಯಿತ ಬಂಡವಾಳಕ್ಕೆ ಸಮನಾದ ಮೊತ್ತವನ್ನು ಸಂದಾಯ ಮಾಡತಕ್ಕದ್ದು.

(3) ನಿಗಮದ ಷೇರುದಾರರಿಗೆ (2)ನೇ ಉಪಪ್ರಕರಣದ ಮೇರೆಗೆ ಸಂದಾಯವಾಗತಕ್ಕ ನಷ್ಟ ಪರಿಹಾರದ ಮೊಬಲಗನ್ನು ಗೊತ್ತುಪಡಿಸಿದ ದಿನಾಂಕದ ನಿಕಟಪೂರ್ವ ದಿನಾಂಕದಂದು ಇದ್ದ ನಿಗಮದ ಸಂದಾಯಿತ ಷೇರು ಬಂಡವಾಳಕ್ಕೆ ಷೇರುದಾರರು ನೀಡಿದ್ದ ವಂತಿಗೆಗಳ ಪ್ರಮಾಣಕ್ಕನುಸಾರವಾಗಿ ಅವರೊಳಗೆ ಹಂಚಿಕೆ ಮಾಡತಕ್ಕದ್ದು.

**ವಿವರಣೆ:–** ಈ ಉಪಪ್ರಕರಣದ ಉದ್ದೇಶಗಳಿಗಾಗಿ "ನಿಗಮದ ಷೇರುದಾರರು" ಎಂದರೆ ಗೊತ್ತುಪಡಿಸಿದ ದಿನಾಂಕದ ನಿಕಟಪೂರ್ವದ ದಿನಾಂಕದಂದು ಕೃಷಿ ಪುನರ್ ವಿತ್ತೀಯ ಮತ್ತು ಅಭಿವೃದ್ಧಿ ನಿಗಮ ಅಧಿನಿಯಮ, 1963 (1963ರ 10)ರ 8ನೇ ಪ್ರಕರಣದ ಮೇರೆಗೆ ಇಟ್ಟುಕೊಂಡು ಬಂದ ಷೇರುದಾರರ ರಿಜಿಸ್ಟರಿನಲ್ಲಿ ಯಾರ ಹೆಸರುಗಳು ಕಂಡುಬರುವುವೋ ಆ ಷೇರುದಾರರು ಎಂದು ಅರ್ಥ.

(4) ರಾಷ್ಟ್ರೀಯ ಬ್ಯಾಂಕ್, (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನಿಗಮದ ಷೇರುದಾರರಿಗೆ, ಕೃಷಿ ಪುನರ್ ವಿತ್ತೀಯ ಮತ್ತು ಅಭಿವೃದ್ಧಿ ನಿಗಮ ಅಧಿನಿಯಮ, 1963 (1963ರ 10)ರ 6ನೇ ಪ್ರಕರಣದ ಮೇರೆಗೆ ಕನಿಷ್ಠ ಲಾಭಾಂಶದ ಸಂದಾಯಕ್ಕೆ ಸಂಬಂಧಿಸಿದಂತೆ ನಿಗಮದ ಷೇರುಗಳಿಗೆ ಯಾವ ದರದಲ್ಲಿ ಖಾತರಿ ಕೊಡಲಾಯಿತೋ ಆ ದರದಲ್ಲಿ ಗೊತ್ತುಪಡಿಸಿದ ದಿನಾಂಕಕ್ಕೆ ಮೊದಲು ನಿಗಮದ ಲೆಕ್ಕದ ವರ್ಷದಲ್ಲಿ ಮುಗಿದ ಅವಧಿ ಯಾವುದಾದರೂ ಇದ್ದಲ್ಲಿ, ಆ ಅವಧಿಗೆ ಲೆಕ್ಕಹಾಕಿದ ಮೊಬಲಗನ್ನು ಸಹ ಸಂದಾಯ ಮಾಡತಕ್ಕದ್ದು ಮತ್ತು ಈ ಮೊಬಲಗನ್ನು ರಾಷ್ಟ್ರೀಯ ಬ್ಯಾಂಕ್ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನಿಗಮದ ಷೇರುದಾರರಿಗೆ ಗೊತ್ತುಪಡಿಸಿದ ದಿನಾಂಕದ ನಿಕಟಪೂರ್ವದ ದಿನಾಂಕದಂದು ಅಂಥ ಷೇರುದಾರರು ಹೊಂದಿರತಕ್ಕ ಷೇರುಗಳ ಪ್ರಮಾಣಕ್ಕನುಸಾರವಾಗಿ ಮತ್ತು ಅಂಥ ಷೇರುಗಳಿಗೆ ಕನಿಷ್ಠ ಲಾಭಾಂಶದ ಸಂದಾಯಕ್ಕೆ ಸಂಬಂಧಿಸಿದಂತೆ ಖಾತರಿ ಕೊಡಲಾದ ದರದಲ್ಲಿ ಹಂಚತಕ್ಕದ್ದು.

(5) ಗೊತ್ತುಪಡಿಸಿದ ದಿನಾಂಕದ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಅಥವಾ ಜಾರಿಯಲ್ಲಿದ್ದ ಮತ್ತು ನಿಗಮವು ಒಂದು ಪಕ್ಷವಾಗಿರುವ ಅಥವಾ ನಿಗಮದ ಹೆಸರಿನಲ್ಲಿರುವ ಎಲ್ಲಾ ಕರಾರುಗಳು, ಪತ್ರಗಳು, ಬಂಧಪತ್ರಗಳು, ಒಪ್ಪಂದಗಳು, ಮುಖ್ತ್ಯಾರನಾಮೆ, ಕಾನೂನುಸಮ್ಮತ ಪ್ರಾತಿನಿಧ್ಯದ ಮಂಜೂರಾತಿ ಪತ್ರ ಮತ್ತು ಯಾವುದೇ ಸ್ವರೂಪದ ಇತರ ಲಿಖಿತಗಳು ಸಂದರ್ಭಾನುಸಾರ ರಾಷ್ಟ್ರೀಯ ಬ್ಯಾಂಕಿನ ವಿರುದ್ಧವಾಗಿ ಅಥವಾ ಪರವಾಗಿ ಸಂಪೂರ್ಣವಾಗಿ ಜಾರಿಯಲ್ಲಿರತಕ್ಕದ್ದು ಮತ್ತು ಪರಿಣಾಮಕಾರಿಯಾಗಿರತಕ್ಕದ್ದು ಮತ್ತು ನಿಗಮಕ್ಕೆ ಬದಲಾಗಿ ರಾಷ್ಟ್ರೀಯ ಬ್ಯಾಂಕ್ ಅವುಗಳಿಗೆ ಒಂದು ಪಕ್ಷವಾಗಿದ್ದರೆ ಹೇಗೋ ಹಾಗೆ ಅಥವಾ ಅವು ರಾಷ್ಟ್ರೀಯ ಬ್ಯಾಂಕಿನ ಹೆಸರಿನಲ್ಲಿದ್ದರೆ ಹೇಗೋ ಹಾಗೆ ಸಂಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಅವುಗಳನ್ನು ಜಾರಿಗೊಳಿಸಬಹುದು ಅಥವಾ ಅವುಗಳ ಮೇರೆಗೆ ಕ್ರಮ ಕೈಗೊಳ್ಳಬಹುದು.

(6) ಗೊತ್ತುಪಡಿಸಲಾದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ನಿಗಮವು ಹೂಡಿದ್ದ ಅಥವಾ ಅದರ ವಿರುದ್ಧ ಹೂಡಲಾದ ಯಾವುದೇ ದಾವೆ, ಅಪೀಲು ಅಥವಾ ಯಾವುದೇ ಸ್ವರೂಪದ ಇತರ ಕಾನೂನು ವ್ಯವಹರಣೆಯು ಇತ್ಯರ್ಥವಾಗದೆ ಉಳಿದಿದ್ದರೆ, ನಿಗಮದ ಉದ್ಯಮವು ರಾಷ್ಟ್ರೀಯ ಬ್ಯಾಂಕಿಗೆ ವರ್ಗಾವಣೆಯಾದ ಅಥವಾ ಈ ಅಧಿನಿಯಮದಲ್ಲಿ ಒಳಗೊಂಡ ಯಾವುದೇ ಕಾರಣದಿಂದಾಗಿ ಅವು ಕೊನೆಗೊಳ್ಳತಕ್ಕದ್ದಲ್ಲ, ಅವನ್ನು ಮುಂದುವರಿಸದೇ ಇರತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲಿ ಪ್ರತಿಕೂಲವಾಗಿ ಬಾಧಿತವಾಗತಕ್ಕದ್ದಲ್ಲ, ಆದರೆ, ಆ ದಾವೆ, ಅಪೀಲು ಅಥವಾ ಇತರ ವ್ಯವಹರಣೆಯನ್ನು ರಾಷ್ಟ್ರೀಯ ಬ್ಯಾಂಕ್ ಅಥವಾ ಅದರ ವಿರುದ್ಧ ಮುಂದುವರೆಸಬಹುದು, ಪ್ರಾಸಿಕ್ಯೂಟ್ ಮಾಡಬಹುದು ಮತ್ತು ಜಾರಿಗೊಳಿಸಬಹುದು.

**17. ನಿಗಮದ ವಿಸರ್ಜನೆ ಮತ್ತು 1963ರ ಅಧಿನಿಯಮ 10ರ ನಿರಸನ.–** 16ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಲಾದ ದಿನಾಂಕದಂದು,–

(ಎ) ನಿಗಮವು ವಿಸರ್ಜಿತವಾಗತಕ್ಕದ್ದು; ಮತ್ತು

(ಬಿ) ಕೃಷಿ ಪುನರ್‌ವಿತ್ತೀಯ ಮತ್ತು ಅಭಿವೃದ್ಧಿ ನಿಗಮ ಅಧಿನಿಯಮ, 1963 ನಿರಸನವಾಗತಕ್ಕದ್ದು.

**18. ರಿಸರ್ವ್ ಬ್ಯಾಂಕಿನಿಂದ ವ್ಯವಹಾರಗಳ ವರ್ಗಾವಣೆ.-** (1) ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು,-

* ದಿನಾಂಕ 12.07.1982 ರಿಂದ ಜಾರಿಗೆ ಬಂದಿದೆ.

(ಎ) ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 2)ರ 46ಎ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಮತ್ತು ನಿರ್ವಹಿಸಲಾದ ರಾಷ್ಟ್ರೀಯ ಕೃಷಿ ಸಾಲ ನೀಡಿಕೆ (ದೀರ್ಘಾವಧಿ ಕಾರ್ಯಾಚರಣೆಗಳು) ನಿಧಿಗೆ; ಮತ್ತು

(ಬಿ) ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 2)ರ 46ಬಿ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಮತ್ತು ನಿರ್ವಹಿಸಲಾದ ರಾಷ್ಟ್ರೀಯ ಕೃಷಿ ಸಾಲ ನೀಡಿಕೆ (ಸ್ಥಿರೀಕರಣ) ನಿಧಿಗೆ

– ಸಂಬಂಧಿಸಿದಂತೆ ರಿಸರ್ವ್ ಬ್ಯಾಂಕಿನಲ್ಲಿ ಇರುವ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ರಾಷ್ಟ್ರೀಯ ಬ್ಯಾಂಕಿಗೆ ವರ್ಗಾವಣೆಯಾಗತಕ್ಕದ್ದು ಮತ್ತು ಅನುಕ್ರಮವಾಗಿ 42ನೇ ಪ್ರಕರಣದಲ್ಲಿ ಉಲ್ಲೇಖಿಸಿದ ರಾಷ್ಟ್ರೀಯ ಗ್ರಾಮೀಣ ಸಾಲ ನೀಡಿಕೆ (ದೀರ್ಘಾವಧಿ ಕಾರ್ಯಾಚರಣೆಗಳು) ನಿಧಿಯ ಮತ್ತು 43ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ರಾಷ್ಟ್ರೀಯ ಗ್ರಾಮೀಣ ಸಾಲ ನೀಡಿಕೆ (ಸ್ಥಿರೀಕರಣ) ನಿಧಿಯ ಭಾಗವಾಗಿರತಕ್ಕದ್ದು.

(2) ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ 17ನೇ ಪ್ರಕರಣದ ಮೇರೆಗೆ ((4)ನೇ ಖಂಡದ (ಎ) ಉಪಖಂಡವನ್ನು ಹೊರತುಪಡಿಸಿ), ರಾಜ್ಯ ಸಹಕಾರ ಬ್ಯಾಂಕ್‌ಗಳಿಗೆ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿಗೆ ರಿಸರ್ವ್ ಬ್ಯಾಂಕ್ ಮಂಜೂರುಮಾಡಿದ ಮತ್ತು ರಿಸರ್ವ್ ಬ್ಯಾಂಕ್ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸಾಲಗಳು ಮತ್ತು ಮುಂಗಡಗಳು ಸಾಧ್ಯವಾದಷ್ಟು ಮಟ್ಟಿಗೆ 21ನೇ ಪ್ರಕರಣದ ಮೇರೆಗೆ ರಾಷ್ಟ್ರೀಯ ಬ್ಯಾಂಕ್ ಮಂಜೂರು ಮಾಡಿದ ಸಾಲಗಳು ಮತ್ತು ಮುಂಗಡಗಳು ಆಗಿರತಕ್ಕದ್ದು ಮತ್ತು ಆಗಿರುವುದಾಗಿ ಭಾವಿಸತಕ್ಕದ್ದು ಮತ್ತು ರಾಷ್ಟ್ರೀಯ ಬ್ಯಾಂಕ್, ಅಂಥ ಸಾಲಗಳು ಮತ್ತು ಮುಂಗಡಗಳ ಮೊಬಲಗನ್ನು ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ, ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ರಿಸರ್ವ್ ಬ್ಯಾಂಕಿಗೆ ಮರುಸಂದಾಯ ಮಾಡತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಆಸ್ತಿ ಮತ್ತು ಹೊಣೆಗಾರಿಕೆಗೆ ಅಥವಾ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಸಾಲ ಅಥವಾ ಮುಂಗಡಕ್ಕೆ ಸಂಬಂಧಿಸಿದಂತೆ ರಿಸರ್ವ್ ಬ್ಯಾಂಕಿನ ಎಲ್ಲ ಹಕ್ಕುಗಳು, ಹೊಣೆಗಾರಿಕೆಗಳು, ಹಿತಾಸಕ್ತಿಗಳು, ವಿಶೇಷಾಧಿಕಾರಗಳು ಮತ್ತು ಯಾವುದೇ ಸ್ವರೂಪದ ಬಾಧ್ಯತೆಗಳು (ಯಾವುದೇ ವಿನಿಮಯ ಪತ್ರ ಮತ್ತು ಪ್ರಾಮಿಸರಿ ನೋಟುಗಳ ಖರೀದಿ, ಮಾರಾಟ ಮತ್ತು ಮರುಸೋಡಿ ಮೂಲಕ ಉಂಟಾಗುವ ಹಕ್ಕುಗಳು ಮತ್ತು ಬಾಧ್ಯತೆಗಳೂ ಸೇರಿ) ಅಂಥ ಆಸ್ತಿ ಮತ್ತು ಹೊಣೆಗಾರಿಕೆಯು (1)ನೇ ಉಪಪ್ರಕರಣದ ಮೇರೆಗೆ ರಾಷ್ಟ್ರೀಯ ಬ್ಯಾಂಕಿಗೆ ಯಾವ ದಿನಾಂಕದಂದು ವರ್ಗಾವಣೆಯಾಗಿದೆಯೋ ಅಥವಾ ಸಂದರ್ಭಾನುಸಾರ (2)ನೇ ಉಪಪ್ರಕರಣದ ಮೇರೆಗೆ ಅಂಥ ಸಾಲವು ಅಥವಾ ಮುಂಗಡವು ರಾಷ್ಟ್ರೀಯ ಬ್ಯಾಂಕ್ ಮಂಜೂರು ಮಾಡಿದ ಸಾಲ ಅಥವಾ ಮುಂಗಡವಾಗಿದೆಯೋ ಆ ದಿನಾಂಕದಂದು ರಾಷ್ಟ್ರೀಯ ಬ್ಯಾಂಕಿಗೆ ವರ್ಗಾವಣೆಯಾಗತಕ್ಕದ್ದು ಮತ್ತು ಅದರಲ್ಲಿ ನಿಹಿತವಾಗತಕ್ಕದ್ದು.

(4) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಆಸ್ತಿಗೆ ಅಥವಾ ಹೊಣೆಗಾರಿಕೆಗೆ ಸಂಬಂಧಿಸಿದ ಮತ್ತು ಆ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಲಾದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿರುವ ಅಥವಾ ಪರಿಣಾಮ ಹೊಂದಿರುವ ಅಥವಾ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಸಾಲ ಅಥವಾ ಮುಂಗಡಕ್ಕೆ ಸಂಬಂಧಿಸಿದ ಮತ್ತು ಆ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಲಾದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಅಥವಾ ಪರಿಣಾಮ ಹೊಂದಿದ್ದ ಎಲ್ಲಾ ಕರಾರುಗಳು, ಪತ್ರಗಳು, ಬಂಧಪತ್ರಗಳು, ಒಪ್ಪಂದಗಳು, ಮುಖ್ತ್ಯಾರನಾಮೆಗಳು, ಕಾನೂನುಸಮ್ಮತ ಪ್ರಾತಿನಿಧ್ಯದ ಮಂಜೂರಾತಿ ಪತ್ರ ಮತ್ತು ಯಾವುದೇ ಸ್ವರೂಪದ ಇತರ ಲಿಖಿತಗಳು, ಸಂದರ್ಭಾನುಸಾರ ರಾಷ್ಟ್ರೀಯ ಬ್ಯಾಂಕಿನ ವಿರುದ್ಧವಾಗಿ

ಅಥವಾ ಪರವಾಗಿ ಪೂರ್ಣವಾಗಿ ಜಾರಿಗೆ ಬರತಕ್ಕದ್ದು ಮತ್ತು ರಿಸರ್ವ್ ಬ್ಯಾಂಕಿಗೆ ಬದಲಾಗಿ ರಾಷ್ಟ್ರೀಯ ಬ್ಯಾಂಕ್ ಅವುಗಳಿಗೆ ಒಂದು ಪಕ್ಷವಾಗಿದ್ದರೆ ಅಥವಾ ಅವುಗಳು ರಾಷ್ಟ್ರೀಯ ಬ್ಯಾಂಕಿನ ಪರವಾಗಿದ್ದಿದ್ದರೆ ಹೇಗೋ ಹಾಗೆ ಅವುಗಳನ್ನು ಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಜಾರಿಗೆ ತರಬಹುದು ಅಥವಾ ಅವುಗಳ ಮೇರೆಗೆ ಕ್ರಮ ಕೈಗೊಳ್ಳಬಹುದು.

(5) ಸಂದರ್ಭಾನುಸಾರ, (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಲಾದ ದಿನಾಂಕಕ್ಕೆ ನಿಕಟಪೂರ್ವದಲ್ಲಿ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಆಸ್ತಿಗೆ ಅಥವಾ ಹೊಣೆಗಾರಿಕೆಗೆ ಅಥವಾ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಸಾಲ ಅಥವಾ ಮುಂಗಡಕ್ಕೆ ಸಂಬಂಧಿಸಿದಂತೆ ರಿಸರ್ವ್ ಬ್ಯಾಂಕ್ ಹೂಡಿದ ಅಥವಾ ಅದರ ವಿರುದ್ಧ ಹೂಡಲಾದ ಯಾವುದೇ ದಾವೆ, ಅಪೀಲು ಅಥವಾ ಯಾವುದೇ ಸ್ವರೂಪದ ಇತರ ಕಾನೂನು ವ್ಯವಹರಣೆಗಳು ಇತ್ಯರ್ಥವಾಗದೇ ಉಳಿದಿದ್ದರೆ, ಸಂದರ್ಭಾನುಸಾರ (1)ನೇ ಉಪಪ್ರಕರಣದ ಮೇರೆಗೆ ರಾಷ್ಟ್ರೀಯ ಬ್ಯಾಂಕಿಗೆ ಅಂಥ ಆಸ್ತಿ ಅಥವಾ ಹೊಣೆಗಾರಿಕೆಗಳ ವರ್ಗಾವಣೆಯ ಅಥವಾ ಅಂಥ ಸಾಲ ಅಥವಾ ಮುಂಗಡವು (2)ನೇ ಉಪಪ್ರಕರಣದ ಮೇರೆಗೆ ರಾಷ್ಟ್ರೀಯ ಬ್ಯಾಂಕ್ ಮಂಜೂರು ಮಾಡಿದ ಸಾಲ ಅಥವಾ ಮುಂಗಡವಾಗಿರುವ ಅಥವಾ ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಆ ಕಾರಣದಿಂದಾಗಿ ಕೊನೆಗೊಳ್ಳತಕ್ಕದ್ದಲ್ಲ, ಮುಂದುವರಿಯದೆ ಇರತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲಿ ಪ್ರತಿಕೂಲವಾಗಿ ಬಾಧಿತವಾಗತಕ್ಕದ್ದಲ್ಲ. ಆದರೆ, ಆ ದಾವೆ, ಅಪೀಲು ಅಥವಾ ಇತರ ವ್ಯವಹರಣೆಗಳನ್ನು ರಾಷ್ಟ್ರೀಯ ಬ್ಯಾಂಕ್ ಅಥವಾ ಅದರ ವಿರುದ್ಧ ಮುಂದುವರಿಸಬಹುದು, ಪ್ರಾಸಿಕ್ಯೂಟ್ ಮಾಡಬಹುದು ಮತ್ತು ಜಾರಿಗೊಳಿಸಬಹುದು.

## ಅಧ್ಯಾಯ – V

## ರಾಷ್ಟ್ರೀಯ ಬ್ಯಾಂಕ್ ಸಾಲಗಳನ್ನು ಎತ್ತುವುದು

**19. ರಾಷ್ಟ್ರೀಯ ಬ್ಯಾಂಕ್ ಸಾಲಗಳನ್ನು ಎತ್ತುವುದು.**- ಈ ಅಧಿನಿಯಮದ ಮೇರೆಗೆ ರಾಷ್ಟ್ರೀಯ ಬ್ಯಾಂಕ್ ತನ್ನ ಪ್ರಕಾರ್ಯಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ,-

(ಎ) ಮಂಡಲಿಯು ಅನುಮೋದಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ, ಕೇಂದ್ರ ಸರ್ಕಾರದ ಖಾತರಿ ಸಹಿತ ಅಥವಾ ಖಾತ್ರಿ ಇಲ್ಲದೆ ಬಾಂಡ್‌ಗಳನ್ನು, ಡಿಬೆಂಚರುಗಳನ್ನು ಮತ್ತು ಇತರ ಹಣಕಾಸಿನ ಲಿಖಿತ ಪತ್ರಗಳನ್ನು ಹೊರಡಿಸಬಹುದು ಮತ್ತು ಮಾರಾಟ ಮಾಡಬಹುದು;

(ಬಿ) ರಿಸರ್ವ್ ಬ್ಯಾಂಕ್ ನಿರ್ದಿಷ್ಟಪಡಿಸಬಹುದಾದಂಥ ಭದ್ರತಾ ಪತ್ರಕ್ಕೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ನಿಬಂಧನೆಗಳೂ ಸೇರಿದಂತೆ ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ, ತಗಾದೆಯ ಮೇಲೆ ಅಥವಾ ಅನ್ಯಥಾ ಮರುಸಂದಾಯ ಮಾಡಬೇಕಾಗುವ ಹಣವನ್ನು ರಿಸರ್ವ್ ಬ್ಯಾಂಕಿನಿಂದ ಸಾಲ ಪಡೆಯಬಹುದು;

(ಸಿ) ಒಪ್ಪಿಕೊಳ್ಳಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಕೇಂದ್ರ ಸರ್ಕಾರದಿಂದ ಮತ್ತು ಮಂಡಲಿಯು ಅನುಮೋದಿಸಿದ ಯಾವುದೇ ಇತರ ಪ್ರಾಧಿಕಾರದಿಂದ ಅಥವಾ ಸಂಘಟನೆಯಿಂದ ಅಥವಾ ಸಂಸ್ಥೆಯಿಂದ ಹಣವನ್ನು ಸಾಲ ಪಡೆಯಬಹುದು;

(ಡಿ) ಕೇಂದ್ರ ಸರ್ಕಾರದಿಂದ, ರಾಜ್ಯ ಸರ್ಕಾರದಿಂದ, ಸ್ಥಳೀಯ ಪ್ರಾಧಿಕಾರದಿಂದ, ರಾಜ್ಯ ಭೂ ಅಭಿವೃದ್ಧಿ ಬ್ಯಾಂಕಿನಿಂದ, ರಾಜ್ಯ ಸಹಕಾರ ಬ್ಯಾಂಕಿನಿಂದ ಅಥವಾ ಅನುಸೂಚಿತ ಬ್ಯಾಂಕಿನಿಂದ ಅಥವಾ ನಿಕಾಯದಿಂದ ನಿಗಮಿತವಾಗಿರಲಿ ಅಥವಾ ಆಗಿರದಿರಲಿ, ಅಥವಾ ಯಾರೇ ವ್ಯಕ್ತಿಯಿಂದ – ರಿಸರ್ವ್ ಬ್ಯಾಂಕಿನ ಅನುಮೋದನೆಯೊಂದಿಗೆ, ರಾಷ್ಟ್ರೀಯ ಬ್ಯಾಂಕ್ ನಿಗದಿಪಡಿಸಬಹುದಾದಂಥ ನಿಬಂಧನೆಗಳ ಮೇಲೆ ಮರುಸಂದಾಯ ಮಾಡಬೇಕಾಗುವ ಠೇವಣಿಗಳನ್ನು ಸ್ವೀಕರಿಸಬಹುದು; ಮತ್ತು

(ಇ) ಕೇಂದ್ರ ಸರ್ಕಾರದಿಂದ ಅಥವಾ ಯಾವುದೇ ರಾಜ್ಯ ಸರ್ಕಾರದಿಂದ ಅಥವಾ ಯಾವುದೇ ಇತರ ಮೂಲದಿಂದ ದಾನಗಳನ್ನು, ಅನುದಾನಗಳನ್ನು, ವಂತಿಗೆಗಳನ್ನು ಅಥವಾ ಉಪಕಾರಧನಗಳನ್ನು ಸ್ವೀಕರಿಸಬಹುದು.

**20. ವಿದೇಶಿ ಕರೆನ್ಸಿಯಲ್ಲಿ ಸಾಲಗಳನ್ನು ಎತ್ತುವುದು.**- ವಿದೇಶಿ ವಿನಿಮಯ ವ್ಯವಸ್ಥಾಪನಾ ಅಧಿನಿಯಮ, 1999 (1999ರ 42) ರಲ್ಲಿ ಅಥವಾ ವಿದೇಶಿ ವಿನಿಮಯಕ್ಕೆ ಸಂಬಂಧಿಸಿದಂತೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ರಾಷ್ಟ್ರೀಯ ಬ್ಯಾಂಕ್, ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡುವುದಕ್ಕಾಗಿ ಅಥವಾ ಈ ಅಧಿನಿಯಮದ ಉಪಬಂಧಗಳ ಮೇರೆಗೆ ನಿರ್ದಿಷ್ಟಪಡಿಸಿದ ಯಾವುದೇ ಇತರ ಉದ್ದೇಶಕ್ಕೆ ಅಂಥ ಕರೆನ್ಸಿಯನ್ನು ಉಪಯೋಗಿಸಿಕೊಳ್ಳುವುದಕ್ಕಾಗಿ ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು ಮತ್ತು ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ ಭಾರತದಲ್ಲಿರುವ ಅಥವಾ ಬೇರೆಡೆ ಇರುವ ಯಾವುದೇ ಬ್ಯಾಂಕಿನಿಂದ ಅಥವಾ ಹಣಕಾಸು ಸಂಸ್ಥೆಯಿಂದ ವಿದೇಶಿ ಕರೆನ್ಸಿಯನ್ನು ಸಾಲವಾಗಿ ಪಡೆಯಬಹುದು.

## ಅಧ್ಯಾಯ - VI

## ರಾಷ್ಟ್ರೀಯ ಬ್ಯಾಂಕಿನ ಸಾಲ ನೀಡಿಕೆ ಪ್ರಕಾರ್ಯಗಳು

**21. ಉತ್ಪಾದನೆ ಮತ್ತು ಕ್ರಯ-ವಿಕ್ರಯ ವ್ಯವಹಾರಕ್ಕೆ ಸಾಲ ನೀಡಿಕೆ.**- (1) ರಾಷ್ಟ್ರೀಯ ಬ್ಯಾಂಕ್, ರಾಜ್ಯ ಸಹಕಾರ ಬ್ಯಾಂಕ್‌ಗಳಿಗೆ, ಕೇಂದ್ರ ಸಹಕಾರ ಬ್ಯಾಂಕ್‌ಗಳಿಗೆ, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿಗೆ ಅಥವಾ ಈ ಸಂಬಂಧದಲ್ಲಿ ರಿಸರ್ವ್ ಬ್ಯಾಂಕ್ ಅನುಮೋದಿಸಿದ ಯಾವುದೇ ಹಣಕಾಸು ಸಂಸ್ಥೆಗೆ ಅಥವಾ ಹಣಕಾಸು ಸಂಸ್ಥೆಗಳ ಯಾವುದೇ ವರ್ಗಕ್ಕೆ ತಗಾದೆಯ ಮೇಲೆ ಅಥವಾ ಹದಿನೆಂಟು ತಿಂಗಳ ಅವಧಿಯನ್ನು ಮೀರದ ನಿಗದಿತ ಅವಧಿಗಳು ಮುಕ್ತಾಯವಾದ ಮೇಲೆ ಮರುಸಂದಾಯವಾಗುವಂತೆ ಈ ಕೆಳಕಂಡ ಉದ್ದೇಶಕ್ಕಾಗಿ, ಎಂದರೆ:-

(i) ಕೃಷಿ ಕಾರ್ಯಾಚರಣೆಗಳು ಅಥವಾ ಬೆಳೆಗಳ ಕ್ರಯ-ವಿಕ್ರಯ ವ್ಯವಹಾರ; ಅಥವಾ

(ii) ಕೃಷಿ ಅಥವಾ ಗ್ರಾಮೀಣ ಅಭಿವೃದ್ಧಿಗೆ ಅವಶ್ಯವಾದ ಪರಿಕರಗಳ ಕ್ರಯ-ವಿಕ್ರಯ ವ್ಯವಹಾರ ಅಥವಾ ವಿತರಣೆ; ಅಥವಾ

(iii) ಕೃಷಿ ಅಥವಾ ಗ್ರಾಮೀಣಾಭಿವೃದ್ಧಿಗೆ ಉತ್ತೇಜನ ನೀಡುವುದು ಅಥವಾ ಆ ಕ್ಷೇತ್ರದಲ್ಲಿನ ಯಾವುದೇ ಇತರ ಚಟುವಟಿಕೆ; ಅಥವಾ

(iv) ವಾಣಿಜ್ಯದ ಅಥವಾ ವ್ಯಾಪಾರದ ಪ್ರಾಮಾಣಿಕ ವಹಿವಾಟುಗಳು; ಅಥವಾ

(v) ಕುಶಲಕರ್ಮಿಗಳು ಅಥವಾ ಸಣ್ಣ ಪ್ರಮಾಣದ ಕೈಗಾರಿಕೆಗಳ, ಅತಿ ಸಣ್ಣ ಮತ್ತು ವಿಕೇಂದ್ರೀಕೃತ ವಲಯದಲ್ಲಿನ ಕೈಗಾರಿಕೆಗಳ, ಗ್ರಾಮೀಣ ಮತ್ತು ಗುಡಿ ಕೈಗಾರಿಕೆಗಳ ಅಥವಾ ಕರಕುಶಲ ಕಲೆ ಮತ್ತು ಇತರ ಗ್ರಾಮೀಣ ಕುಶಲಕಲೆಯ ಕ್ಷೇತ್ರದಲ್ಲಿ ತೊಡಗಿರುವವರು ಮಾಡುವ ಉತ್ಪಾದನೆ ಮತ್ತು ಕ್ರಯ-ವಿಕ್ರಯ ವ್ಯವಹಾರ ಚಟುವಟಿಕೆಗಳು

- ಇವುಗಳಿಗೆ ಹಣಕಾಸು ಒದಗಿಸುವುದಕ್ಕಾಗಿ ಪುನರ್‌ವಿತ್ತೀಯ ರೂಪದಲ್ಲಿ ಸಾಲಗಳನ್ನು ಮತ್ತು ಮುಂಗಡಗಳನ್ನು ಒದಗಿಸಬಹುದು.

(2) ರಾಷ್ಟ್ರೀಯ ಬ್ಯಾಂಕ್,-

(i) ಸ್ಥಿರ ಸ್ವತ್ತನ್ನು ಹೊರತು ಪಡಿಸಿ, ಯಾವ ಸ್ಟಾಕುಗಳಲ್ಲಿ, ನಿಧಿಗಳಲ್ಲಿ ಮತ್ತು ಭದ್ರತಾ ಪತ್ರಗಳಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನ್ಯಾಸ ಹಣವನ್ನು ಹೂಡಲು ನ್ಯಾಸಧಾರಿಯನ್ನು ಅಧಿಕೃತಗಳಿಸಲಾಗಿದೆಯೋ ಆ ಯಾವುದೇ ಸ್ಟಾಕುಗಳ, ನಿಧಿಗಳ ಮತ್ತು ಭದ್ರತಾ ಪತ್ರಗಳ;

(ii) ಯಾವ ಸರಕುಗಳ ಸ್ವಾಮ್ಯದ ದಸ್ತವೇಜುಗಳನ್ನು (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಉದ್ದೇಶಕ್ಕಾಗಿ ಸಾಲ ಅಥವಾ ಮುಂಗಡವನ್ನು ನೀಡುವುದಕ್ಕಾಗಿ ಭದ್ರತೆಯಾಗಿ ಸಾಲ ಪಡೆಯುವ ಸಂಸ್ಥೆಗೆ ವರ್ಗಾಯಿಸಲಾಗಿದೆಯೋ, ಹಸ್ತಾಂತರಿಸಲಾಗಿದೆಯೋ

ಅಥವಾ ಒತ್ತೆ ಇಡಲಾಗಿದೆಯೋ ಆ ಸರಕು ಸ್ವಾಮ್ಯದ ದಸ್ತಾವೇಜುಗಳಿಂದ ಸಮರ್ಥಿತವಾಗಿರುವ ಪ್ರಾಮಿಸರಿ ನೋಟುಗಳ

– ಭದ್ರತೆ ಪಡೆದು (1)ನೇ ಉಪಪ್ರಕರಣದ ಮೇರೆಗೆ ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡಬಹುದು:

ಪರಂತು, ರಾಷ್ಟ್ರೀಯ ಬ್ಯಾಂಕ್, ರಾಷ್ಟ್ರೀಯ ಬ್ಯಾಂಕಿನ ಹೆಸರಿನಲ್ಲಿ ಅಂಥ ಯಾವುದೇ ಭದ್ರತಾ ಪತ್ರದ ವಾಸ್ತವಿಕ ಹಸ್ತಾಂತರಣ ಮಾಡುವುದಕ್ಕೆ ಬದಲಾಗಿ ಸಾಲ ಪಡೆಯುವ ಸಂಸ್ಥೆಯಿಂದ,–

(ಎ) ಅಂಥ ಸರಕು ಸ್ವಾಮ್ಯದ ದಸ್ತಾವೇಜುಗಳನ್ನು ತಾನು ಹೊಂದಿರುವುದಾಗಿ ನಿರೂಪಿಸುವ; ಮತ್ತು

(ಬಿ) ರಾಷ್ಟ್ರೀಯ ಬ್ಯಾಂಕ್ ಅಗತ್ಯಪಡಿಸಬಹುದಾದಂಥ ಇತರ ವಿವರಗಳನ್ನು ಒಳಗೊಂಡಿರುವ

– ಅಂಥ ಲಿಖಿತ ಘೋಷಣೆಯನ್ನು ಅಂಗೀಕರಿಸುವುದು ಅವಶ್ಯವೆಂದು ಪರಿಗಣಿಸಿದಾಗಲೆಲ್ಲ ಅದು, ಹಾಗೆ ಮಾಡಬಹುದು.

(3) (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ,–

(ಎ) ಸಾಲ ಅಥವಾ ಮುಂಗಡದ ಅಸಲು ಮತ್ತು ಬಡ್ಡಿಯ ಮರುಸಂದಾಯಕ್ಕೆ ಸರ್ಕಾರವು ಸಂಪೂರ್ಣ ಖಾತರಿ ನೀಡಿದ್ದರೆ, ಯಾವುದೇ ರಾಜ್ಯ ಸಹಕಾರ ಬ್ಯಾಂಕಿಗೆ ಅಥವಾ ಕೇಂದ್ರ ಸಹಕಾರ ಬ್ಯಾಂಕಿಗೆ;

(ಬಿ) ಸಾಲ ಅಥವಾ ಮುಂಗಡಕ್ಕೆ ಕೇಂದ್ರ ಸಹಕಾರ ಬ್ಯಾಂಕ್ ಬರೆದುಕೊಟ್ಟ ಮತ್ತು ರಾಜ್ಯ ಸಹಕಾರ ಬ್ಯಾಂಕಿನ ಹೆಸರಿಗೆ ಹಸ್ತಾಂತರಿಸಿದ ವಿನಿಮಯ ಪತ್ರದ ಅಥವಾ ಪ್ರಾಮಿಸರಿ ನೋಟಿನ ಮೂಲಕ ಭದ್ರತೆಯನ್ನು ಒದಗಿಸಿದ್ದರೆ, ಅನುಸೂಚಿತ ಬ್ಯಾಂಕ್ ಆಗಿರುವ ಯಾವುದೇ ರಾಜ್ಯ ಸಹಕಾರ ಬ್ಯಾಂಕಿಗೆ

– ರಾಷ್ಟ್ರೀಯ ಬ್ಯಾಂಕ್ ತನ್ನ ವಿವೇಚನಾನುಸಾರ ಅಂಥ ಸಾಲವನ್ನು ಅಥವಾ ಮುಂಗಡವನ್ನು ಮಂಜೂರು ಮಾಡಬಹುದು.

(4) (2) ಮತ್ತು (3)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಸಹಕಾರ ಬ್ಯಾಂಕಿನ ಅಥವಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಅಥವಾ (1)ನೇ ಉಪಪ್ರಕರಣದ ಮೇರೆಗೆ ಅನುಮೋದಿಸಿದ ಸಂಸ್ಥೆಯ ಪ್ರಾಮಿಸರಿ ನೋಟುಗಳಿಗೆ ಪ್ರತಿಯಾಗಿ, ತಗಾದೆಯ ಮೇಲೆ ಅಥವಾ ಹದಿನೆಂಟು ತಿಂಗಳ ಅವಧಿಯನ್ನು ಮೀರದ ನಿಗದಿಪಡಿಸಿದ ಅವಧಿಗಳು ಮುಕ್ತಾಯವಾದ ಮೇಲೆ ಮರುಸಂದಾಯವಾಗುವಂತೆ ಸಾಲಗಳನ್ನು ಮತ್ತು ಮುಂಗಡಗಳನ್ನು ಸಹ ರಾಷ್ಟ್ರೀಯ ಬ್ಯಾಂಕ್ ನೀಡಬಹುದು:

ಪರಂತು, ಸಾಲ ಪಡೆಯುವ ಸಂಸ್ಥೆಯು, ಯಾವ ಉದ್ದೇಶಕ್ಕಾಗಿ ಸಾಲಗಳನ್ನು ಮತ್ತು ಮುಂಗಡಗಳನ್ನು ತನಗೆ ನೀಡಿದೆ ಎಂಬುದನ್ನು ಮತ್ತು ರಾಷ್ಟ್ರೀಯ ಬ್ಯಾಂಕ್ ಅಗತ್ಯಪಡಿಸಬಹುದಾದಂಥ ಇತರ ವಿವರಗಳನ್ನು ನಿರೂಪಿಸುವ ಲಿಖಿತ ಘೋಷಣೆಯನ್ನು ಸಲ್ಲಿಸಬೇಕಾಗುತ್ತದೆ.

**22. ಉತ್ಪಾದನಾ ಸಾಲ ನೀಡಿಕೆಗಾಗಿ ಪರಿವರ್ತನ ಸಾಲ.–** ಬರಗಾಲ, ಕ್ಷಾಮ ಅಥವಾ ಇತರ ನೈಸರ್ಗಿಕ ವಿಪತ್ತುಗಳು, ಸೈನಿಕ ಕಾರ್ಯಾಚರಣೆಗಳು ಅಥವಾ ಶತ್ರು ದಾಳಿಯಿಂದಾಗಿ ಯಾವುದೇ ರಾಜ್ಯ ಸಹಕಾರ ಬ್ಯಾಂಕ್, ಕೇಂದ್ರ ಸಹಕಾರ ಬ್ಯಾಂಕ್, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಅಥವಾ ಯಾವುದೇ ಅಂಥ ಹಣಕಾಸು ಸಂಸ್ಥೆ ಅಥವಾ ಈ ಸಂಬಂಧದಲ್ಲಿ ರಿಸರ್ವ್ ಬ್ಯಾಂಕಿನಿಂದ ಅನುಮೋದಿತವಾದ ಯಾವುದೇ ಅಂಥ ಹಣಕಾಸು ಸಂಸ್ಥೆಗಳ ವರ್ಗದಲ್ಲಿ ಬರುವ ಯಾವುದೇ ಹಣಕಾಸು ಸಂಸ್ಥೆ – ಇವುಗಳಿಗೆ ಈ ಪ್ರಕರಣದ ಮೇರೆಗೆ ನೆರವು ಅವಶ್ಯವೆಂದು ರಾಷ್ಟ್ರೀಯ ಬ್ಯಾಂಕಿಗೆ ಮನದಟ್ಟಾದರೆ, ಅದು ಏಳು ವರ್ಷಗಳ ಅವಧಿಯನ್ನು ಮೀರದ ನಿಗದಿತ ಅವಧಿಯು ಮುಕ್ತಾಯವಾದ ಮೇಲೆ ಮರುಸಂದಾಯ ಮಾಡಬೇಕಾದ ಸಾಲ ಮತ್ತು ಮುಂಗಡಗಳನ್ನು ನೀಡುವ ಮೂಲಕ ಮತ್ತು ರಾಷ್ಟ್ರೀಯ ಬ್ಯಾಂಕ್ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದ ನಿಬಂಧನೆಗಳು ಮತ್ತು

ಷರತ್ತುಗಳ ಮೇಲೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಹಣಕಾಸು ನೆರವನ್ನು ಅಂಥ ಬ್ಯಾಂಕಿಗೆ ಅಥವಾ ಸಂಸ್ಥೆಗೆ ಒದಗಿಸಬಹುದು:

ಪರಂತು, ಸಾಲ ಪಡೆಯುವ ಬ್ಯಾಂಕಿಗೆ ಅಥವಾ ಸಂಸ್ಥೆಗೆ,–

(ಎ) 21ನೇ ಪ್ರಕರಣದ (1)ನೇ ಉಪಪ್ರಕರಣದ (i)ನೇ ಖಂಡದ ಮೇರೆಗೆ ಕೃಷಿ ಕಾರ್ಯಾಚರಣೆಗಳು ಅಥವಾ ಬೆಳೆಯ ಕ್ರಯ–ವಿಕ್ರಯ ವ್ಯವಹಾರಕ್ಕೆ ಹಣಕಾಸು ಒದಗಿಸುವುದಕ್ಕಾಗಿ ನೀಡಿದ ಸಾಲಕ್ಕೆ ರಾಷ್ಟ್ರೀಯ ಬ್ಯಾಂಕಿಗೆ ಯಾವುದೇ ಬಾಕಿಗಳನ್ನು ಸಂದಾಯ ಮಾಡಲು; ಅಥವಾ

(ಬಿ) (i) ಸಾಲ ಪಡೆಯುವ ಬ್ಯಾಂಕ್ ರಾಜ್ಯ ಸಹಕಾರ ಬ್ಯಾಂಕ್ ಆಗಿರುವ ಸಂದರ್ಭದಲ್ಲಿ ಕೇಂದ್ರ ಸಹಕಾರ ಬ್ಯಾಂಕ್‌ಗಳಿಗೆ ಅಥವಾ ಪ್ರಾಥಮಿಕ ಗ್ರಾಮೀಣ ಸಾಲ ನೀಡಿಕೆ ಸಂಘಗಳಿಗೆ ಸಾಲಗಳನ್ನು ಅಥವಾ ಮುಂಗಡಗಳನ್ನು ನೀಡಲು; ಮತ್ತು

(ii) ಸಾಲ ಪಡೆಯುವ ಬ್ಯಾಂಕ್ ಕೇಂದ್ರ ಸಹಕಾರ ಬ್ಯಾಂಕ್ ಆಗಿರುವ ಸಂದರ್ಭದಲ್ಲಿ ಪ್ರಾಥಮಿಕ ಗ್ರಾಮೀಣ ಸಾಲ ನೀಡಿಕೆ ಸಂಘಗಳಿಗೆ ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡಲು ಶಕ್ತಗೊಳಿಸುವ ಉದ್ದೇಶಕ್ಕಾಗಿ ಮಾತ್ರವೇ ಈ ಪ್ರಕರಣದ ಮೇರೆಗೆ ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡಬಹುದು

– ಮತ್ತು ಈ ಎರಡೂ ಸಂದರ್ಭಗಳಲ್ಲಿ, ಅಂಥ ಸಹಕಾರ ಬ್ಯಾಂಕ್‌ಗಳು ಅಥವಾ ಕೃಷಿ ಅಥವಾ ಕೃಷಿ ಕಾರ್ಯಾಚರಣೆ ಸಂಘಗಳು ನೀಡಿದ ಸಾಲಗಳನ್ನು ಅಥವಾ ಮುಂಗಡಗಳನ್ನು ತುಂಬಿಕೊಡುವ ಮೂಲಕ ಅಥವಾ ಸಾಲಗಳಾಗಿ ಅಥವಾ ಮುಂಗಡಗಳಾಗಿ ಪರಿವರ್ತಿಸಲಾಗಿದ್ದು, ಆ ಪರಿವರ್ತನೆಯ ದಿನಾಂಕದಿಂದ ಹದಿನೆಂಟು ತಿಂಗಳಿಗೆ ಕಡಿಮೆಯಿಲ್ಲದ ಮತ್ತು ಏಳು ವರ್ಷಗಳನ್ನು ಮೀರದ ನಿಗದಿತ ಅವಧಿಗಳು ಮುಗಿದ ತರುವಾಯ ಮರುಸಂದಾಯಮಾಡಬೇಕಾದ ಅಂಥ ಸಾಲಗಳನ್ನು ಅಥವಾ ಮುಂಗಡಗಳನ್ನು ತುಂಬಿಕೊಡುವುದಕ್ಕಾಗಿ, ಹದಿನೆಂಟು ತಿಂಗಳಿಗೆ ಕಡಿಮೆಯಿಲ್ಲದ ಮತ್ತು ಏಳು ವರ್ಷಗಳನ್ನು ಮೀರದ ನಿಗದಿತ ಅವಧಿಗಳು ಮುಕ್ತಾಯವಾದ ಮೇಲೆ ಮರುಸಂದಾಯ ಮಾಡಬೇಕಾಗಿರುವ ಅಂಥ ಸಾಲಗಳನ್ನು ಅಥವಾ ಮುಂಗಡಗಳನ್ನು ಮರು ಸಂದಾಯ ಮಾಡಲಾಗುತ್ತದೆ:

ಮತ್ತೂ ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ಸಾಲದ ಅಥವಾ ಮುಂಗಡದ ಅಸಲಿನ ಮರು ಸಂದಾಯಕ್ಕೆ ಮತ್ತು ಬಡ್ಡಿಯ ಸಂದಾಯಕ್ಕೆ ರಾಜ್ಯ ಸರ್ಕಾರದಿಂದ ಸಂಪೂರ್ಣ ಖಾತರಿ ದೊರೆತ ಹೊರತು ಅಂಥ ಯಾವುದೇ ಸಾಲವನ್ನು ಮತ್ತು ಮುಂಗಡವನ್ನು ರಾಜ್ಯ ಸಹಕಾರಿ ಬ್ಯಾಂಕಿಗೆ ಅಥವಾ ಕೇಂದ್ರ ಸಹಕಾರ ಬ್ಯಾಂಕಿಗೆ ನೀಡತಕ್ಕದ್ದಲ್ಲ.

**23. ಕುಶಲಕರ್ಮಿಗಳಿಗೆ, ಸಣ್ಣ ಪ್ರಮಾಣದ ಕೈಗಾರಿಕೆಗಳು ಮೊದಲಾದವುಗಳಿಗೆ ಸಾಲಗಳನ್ನು ಪುನರ್‌ನಿಗದಿ ಪಡಿಸುವುದು.**– ಕುಶಲಕರ್ಮಿಗಳಿಗೆ, ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ, ಸಣ್ಣ ಹಾಗೂ ವಿಕೇಂದ್ರೀಕೃತ ವಲಯದಲ್ಲಿನ ಕೈಗಾರಿಕೆಗಳಿಗೆ, ಗ್ರಾಮೀಣ ಮತ್ತು ಗುಡಿ ಕೈಗಾರಿಕೆಗಳಿಗೆ ಮತ್ತು ಕರಕುಶಲ ಮತ್ತು ಇತರ ಗ್ರಾಮೀಣ ಕುಶಲಕಲೆಗಳಲ್ಲಿ ತೊಡಗಿರುವ ವ್ಯಕ್ತಿಗಳಿಗೆ, ಯಾವುದೇ ರಾಜ್ಯ ಸಹಕಾರ ಬ್ಯಾಂಕ್, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಅಥವಾ ಈ ಸಂಬಂಧದಲ್ಲಿ ರಿಸರ್ವ್ ಬ್ಯಾಂಕಿನಿಂದ ಅನುಮೋದಿತವಾದ ಯಾವುದೇ ಅಂಥ ಹಣಕಾಸು ಸಂಸ್ಥೆಯು ಅಥವಾ ಅಂಥ ಹಣಕಾಸು ಸಂಸ್ಥೆಗಳ ವರ್ಗದ ವ್ಯಾಪ್ತಿಯಲ್ಲಿ ಬರುವ ಯಾವುದೇ ಹಣಕಾಸು ಸಂಸ್ಥೆಯು ನೀಡಿದ ಯಾವುದೇ ಸಾಲಗಳನ್ನು ಮತ್ತು ಮುಂಗಡಗಳನ್ನು ಅನಿರೀಕ್ಷಿತ ಪರಿಸ್ಥಿತಿಗಳಿಂದಾಗಿ ಪುನರ್‌ನಿಗದಿ ಮಾಡುವುದು ಅವಶ್ಯವಾಗಿದೆ ಎಂದು ರಾಷ್ಟ್ರೀಯ ಬ್ಯಾಂಕಿಗೆ ಮನದಟ್ಟಾದರೆ, ಅದು ಅಂಥ ಬ್ಯಾಂಕಿಗೆ ಅಥವಾ ಸಂಸ್ಥೆಗೆ, ರಾಷ್ಟ್ರೀಯ ಬ್ಯಾಂಕ್ ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಭದ್ರತೆಗಳಿಗೆ ಪ್ರತಿಯಾಗಿ ಹದಿನೆಂಟು ತಿಂಗಳಿಗಿಂತ ಕಡಿಮೆಯಿಲ್ಲದ ಮತ್ತು ಏಳು ವರ್ಷಗಳನ್ನು ಮೀರದ ನಿಗದಿತ ಅವಧಿಯು ಮುಗಿದ ತರುವಾಯ ಮರುಸಂದಾಯಮಾಡಬೇಕಾದ ಸಾಲಗಳ

ಮತ್ತು ಮುಂಗಡಗಳ ರೂಪದಲ್ಲಿ ತಾನು ಉಚಿತವೆಂದು ಭಾವಿಸಬಹುದಾದಂಥ ಹಣಕಾಸು ನೆರವನ್ನು ಒದಗಿಸಬಹುದು:

ಪರಂತು, ಯಾವುದೇ ಸಾಲದ ಅಥವಾ ಮುಂಗಡದ ಅಸಲಿನ ಮರುಸಂದಾಯಕ್ಕೆ ಮತ್ತು ಬಡ್ಡಿಯ ಸಂದಾಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಸಂಪೂರ್ಣ ಖಾತರಿ ನೀಡಿದ ಹೊರತು ಈ ಪ್ರಕರಣದ ಮೇರೆಗೆ ಅಂಥ ಸಾಲವನ್ನು ಅಥವಾ ಮುಂಗಡವನ್ನು ರಾಜ್ಯ ಸಹಕಾರ ಬ್ಯಾಂಕಿಗೆ ನೀಡತಕ್ಕದ್ದಲ್ಲ; ಆದರೆ, ರಾಷ್ಟ್ರೀಯ ಬ್ಯಾಂಕಿಗೆ ಸಮಾಧಾನವಾಗುವ ಹಾಗೆ ಯಾವುದೇ ಇತರ ಭದ್ರತೆಯನ್ನು ಒದಗಿಸಿದರೆ ಅಥವಾ ಆ ಖಾತರಿ ಅಥವಾ ಇತರ ಭದ್ರತೆಯು ಅವಶ್ಯವಿಲ್ಲವೆಂದು ರಾಷ್ಟ್ರೀಯ ಬ್ಯಾಂಕಿಗೆ ಮನದಟ್ಟಾದರೆ ಕಾರಣಗಳನ್ನು ಲಿಖಿತದಲ್ಲಿ ದಾಖಲು ಮಾಡಿ ಅಂಥ ಖಾತರಿ ನೀಡುವಿಕೆಯನ್ನು ರಾಷ್ಟ್ರೀಯ ಬ್ಯಾಂಕ್ ಮನ್ನಾ ಮಾಡಬಹುದು.

**24. ಮಧ್ಯಮಾವಧಿ ಹೂಡಿಕೆಗಾಗಿ ಸಾಲ ನೀಡುವುದು.**- ರಾಜ್ಯ ಸಹಕಾರ ಬ್ಯಾಂಕ್‌ಗಳಿಗೆ, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿಗೆ ರಾಷ್ಟ್ರೀಯ ಬ್ಯಾಂಕ್ ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದಾದ ಭದ್ರತೆಗಳಿಗೆ ಪ್ರತಿಯಾಗಿ ಹದಿನೆಂಟು ತಿಂಗಳಿಗೆ ಕಡಿಮೆಯಿಲ್ಲದ ಮತ್ತು ಏಳು ವರ್ಷಗಳನ್ನು ಮೀರದ ನಿಗದಿತ ಅವಧಿಗಳು ಮುಗಿದ ತರುವಾಯ ಮರುಸಂದಾಯಮಾಡಬೇಕಾದ ಸಾಲಗಳು ಮತ್ತು ಮುಂಗಡಗಳ ರೂಪದಲ್ಲಿ ತಾನು ಅವಶ್ಯವೆಂದು ಪರಿಗಣಿಸಬಹುದಾದಂಥ ಹಣಕಾಸು ನೆರವನ್ನು ರಾಷ್ಟ್ರೀಯ ಬ್ಯಾಂಕ್ ಒದಗಿಸತಕ್ಕದ್ದು ಮತ್ತು ಅಂಥ ಸಾಲಗಳನ್ನು ಅಥವಾ ಮುಂಗಡಗಳನ್ನು ಕೃಷಿ, ಗ್ರಾಮೀಣಾಭಿವೃದ್ಧಿ ಅಥವಾ ರಾಷ್ಟ್ರೀಯ ಬ್ಯಾಂಕ್ ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ಇತರ ಉದ್ದೇಶಗಳಿಗಾಗಿ ನೀಡಬಹುದು:

ಪರಂತು, ಯಾವುದೇ ಸಾಲದ ಅಥವಾ ಮುಂಗಡದ ಅಸಲಿನ ಮರುಸಂದಾಯಕ್ಕೆ ಮತ್ತು ಬಡ್ಡಿಯ ಸಂದಾಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಸಂಪೂರ್ಣ ಖಾತರಿ ನೀಡಿದ ಹೊರತು ಈ ಪ್ರಕರಣದ ಮೇರೆಗೆ ಅಂಥ ಸಾಲವನ್ನು ಅಥವಾ ಮುಂಗಡವನ್ನು ರಾಜ್ಯ ಸಹಕಾರ ಬ್ಯಾಂಕಿಗೆ ನೀಡತಕ್ಕದ್ದಲ್ಲ; ಆದರೆ, ರಾಷ್ಟ್ರೀಯ ಬ್ಯಾಂಕಿಗೆ ಸಮಾಧಾನವಾಗುವ ಹಾಗೆ ಯಾವುದೇ ಇತರ ಭದ್ರತೆಯನ್ನು ಒದಗಿಸಿದರೆ ಅಥವಾ ಆ ಖಾತರಿ ಅಥವಾ ಇತರ ಭದ್ರತೆಯು ಅವಶ್ಯವಿಲ್ಲವೆಂದು ರಾಷ್ಟ್ರೀಯ ಬ್ಯಾಂಕಿಗೆ ಮನದಟ್ಟಾದರೆ ಕಾರಣಗಳನ್ನು ಲಿಖಿತದಲ್ಲಿ ದಾಖಲು ಮಾಡಿ ಅಂಥ ಖಾತರಿ ನೀಡುವಿಕೆಯನ್ನು ರಾಷ್ಟ್ರೀಯ ಬ್ಯಾಂಕ್ ಮನ್ನಾ ಮಾಡಬಹುದು.

**25. ಇತರ ಹೂಡಿಕೆಗಾಗಿ ಸಾಲ ನೀಡುವುದು.**- (1) ರಾಷ್ಟ್ರೀಯ ಬ್ಯಾಂಕ್ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಉತ್ತೇಜನ ನೀಡುವುದಕ್ಕಾಗಿ,-

(ಎ) ರಾಷ್ಟ್ರೀಯ ಬ್ಯಾಂಕ್ ವಿಧಿಸುವುದು ಸೂಕ್ತವೆಂದು ಆಲೋಚಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ, ರಾಜ್ಯ ಭೂ ಅಭಿವೃದ್ಧಿ ಬ್ಯಾಂಕಿಗೆ ಅಥವಾ ಒಂದು ರಾಜ್ಯ ಸಹಕಾರ ಬ್ಯಾಂಕಿಗೆ ಅಥವಾ ಒಂದು ಅನುಸೂಚಿತ ಬ್ಯಾಂಕಿಗೆ ಅಥವಾ ಈ ಸಂಬಂಧದಲ್ಲಿ ರಿಸರ್ವ್ ಬ್ಯಾಂಕಿನಿಂದ ಅನುಮೋದಿತವಾದ ಯಾವುದೇ ಇತರ ಹಣಕಾಸು ಸಂಸ್ಥೆಗೆ ಪುನರ್‌ವಿತ್ತೀಯ ರೂಪದಲ್ಲಿ ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡುವ ಮತ್ತು ಅಂಥ ಸಾಲಗಳ ಮತ್ತು ಮುಂಗಡಗಳ ಸಂದಾಯವನ್ನು ಪುನರ್ ನಿಗದಿಪಡಿಸುವ ಮೂಲಕ ಸಹ:

ಪರಂತು, ಯಾವ ಗರಿಷ್ಠ ಅವಧಿಗಾಗಿ ಅಂಥ ಸಾಲವನ್ನು ಅಥವಾ ಮುಂಗಡವನ್ನು ಮೂಲತ: ಇದ್ದಂತೆ ಆಗಲಿ ಅಥವಾ ಅದರ ಸಂದಾಯವನ್ನು ಪುನರ್‌ನಿಗದಿಪಡಿಸುವ ಮೂಲಕವಾಗಲಿ ಮಂಜೂರು ಮಾಡಬಹುದೋ ಆ ಗರಿಷ್ಠ ಅವಧಿಯು ಇಪ್ಪತ್ತೈದು ವರ್ಷಗಳನ್ನು ಮೀರತಕ್ಕದ್ದಲ್ಲ.

(ಬಿ) (ಎ) ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಬ್ಯಾಂಕ್ ಅಥವಾ ಸಂಸ್ಥೆಯು ಹೊರಡಿಸಿದ ಮತ್ತು ಹಾಗೆ ಹೊರಡಿಸಿದ ದಿನಾಂಕದಿಂದ ಇಪ್ಪತ್ತೈದು ವರ್ಷಗಳನ್ನು ಮೀರದ ಅವಧಿಯೊಳಗೆ ಮರುಸಂದಾಯಮಾಡಬೇಕಾದ ಬಾಂಡುಗಳನ್ನು ಅಥವಾ ಡಿಬೆಂಚರುಗಳನ್ನು ಖರೀದಿಸುವ ಅಥವಾ ಮಾರಾಟ ಮಾಡುವ ಅಥವಾ ಅವುಗಳಿಗೆ ವಂತಿಗೆ ನೀಡುವ ಮೂಲಕ;

(ಸಿ) ಕುಶಲಕರ್ಮಿಗಳಿಗೆ, ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ, ಅತಿ ಸಣ್ಣ ಮತ್ತು ವಿಕೇಂದ್ರೀಕೃತ ವಲಯದಲ್ಲಿನ ಕೈಗಾರಿಕೆಗಳಿಗೆ, ಗ್ರಾಮೀಣ ಮತ್ತು ಗುಡಿ ಕೈಗಾರಿಕೆಗಳಿಗೆ ಮತ್ತು ಕರಕುಶಲಕಲೆ ಹಾಗೂ ಇತರ ಗ್ರಾಮೀಣ ಕುಶಲ ಕಲೆಗಳ ಕ್ಷೇತ್ರದಲ್ಲಿ ತೊಡಗಿರುವವರಿಗೆ ಸಾಲಗಳನ್ನು ಅಥವಾ

ಮುಂಗಡಗಳನ್ನು ನೀಡಲು ರಾಜ್ಯ ಸಹಕಾರ ಬ್ಯಾಂಕನ್ನು ಅಥವಾ ಅನುಸೂಚಿತ ಬ್ಯಾಂಕನ್ನು ಶಕ್ತಗೊಳಿಸುವ ಉದ್ದೇಶಕ್ಕಾಗಿ ರಾಷ್ಟ್ರೀಯ ಬ್ಯಾಂಕ್ ತಾನು ವಿಧಿಸಲು ಸೂಕ್ತವೆಂದು ಆಲೋಚಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಅವುಗಳಿಗೆ ಸಾಲಗಳನ್ನು ಅಥವಾ ಮುಂಗಡಗಳನ್ನು ನೀಡುವ ಮೂಲಕ ಮತ್ತು ಅಂಥ ಸಾಲಗಳ ಮತ್ತು ಮುಂಗಡಗಳ ಸಂದಾಯವನ್ನು ಪುನರ್‌ನಿಗದಿಪಡಿಸುವ ಮೂಲಕ ಸಹ:

ಪರಂತು, ಯಾವ ಗರಿಷ್ಠ ಅವಧಿಗಾಗಿ ಅಂಥ ಸಾಲವನ್ನು ಅಥವಾ ಮುಂಗಡವನ್ನು ಮೂಲತ: ಇದ್ದಂತೆ ಆಗಲಿ ಅಥವಾ ಅದರ ಸಂದಾಯವನ್ನು ಪುನರ್‌ನಿಗದಿಪಡಿಸುವ ಮೂಲಕವಾಗಲಿ ಮಂಜೂರು ಮಾಡಬಹುದೋ ಆ ಗರಿಷ್ಠ ಅವಧಿಯು ಇಪ್ಪತ್ತೈದು ವರ್ಷಗಳನ್ನು ಮೀರತಕ್ಕದ್ದಲ್ಲ.

(ಡಿ) ಒಂದು ರಾಜ್ಯ ಭೂ ಅಭಿವೃದ್ಧಿ ಬ್ಯಾಂಕಿಗೆ ಅಥವಾ ರಾಜ್ಯ ಸಹಕಾರ ಬ್ಯಾಂಕಿಗೆ ಅಥವಾ ಅನುಸೂಚಿತ ಬ್ಯಾಂಕಿಗೆ (ಎ) ಖಂಡದ ಅಥವಾ (ಬಿ) ಖಂಡದ ಅಥವಾ (ಸಿ) ಖಂಡದ ಮೇರೆಗೆ ಯಾವುದೇ ಹಣಕಾಸು ನೆರವಿಗೆ ಸಂಬಂಧಿಸಿ ತಗಾದೆಯ ಮೇಲೆ ಅಥವಾ ಹದಿನೆಂಟು ತಿಂಗಳನ್ನು ಮೀರದ ನಿಗದಿತ ಅವಧಿಯು ಮುಕ್ತಾಯವಾದ ಮೇಲೆ ಮರುಸಂದಾಯಮಾಡಬೇಕಾದ ಸಾಲಗಳನ್ನು ಮತ್ತು ಮುಂಗಡಗಳನ್ನು ಅಂಥ ಬ್ಯಾಂಕಿಗೆ ಪುನರ್ ವಿತ್ತೀಯ ರೂಪದಲ್ಲಿ ಅಥವಾ ಅನ್ಯಥಾ ನೀಡುವುದು ಅವಶ್ಯವೆಂದು ಭಾವಿಸಿದರೆ ಹಾಗೆ ಮಾಡುವ ಮೂಲಕ ಮತ್ತು ರಾಷ್ಟ್ರೀಯ ಬ್ಯಾಂಕ್ ಸೂಕ್ತವೆಂದು ಭಾವಿಸಬಹುದಾದಂಥ ಅವಧಿಗೆ ಅಂಥ ಸಾಲಗಳ ಮತ್ತು ಮುಂಗಡಗಳ ಸಂದಾಯವನ್ನು ಪುನರ್‌ನಿಗದಿಪಡಿಸುವ ಮೂಲಕ ಸಹ

– ತಾನು ಅವಶ್ಯವೆಂದು ಪರಿಗಣಿಸಬಹುದಾದಂಥ ಹಣಕಾಸು ನೆರವನ್ನು ಒದಗಿಸಬಹುದು.

(2) ಈ ಪ್ರಕರಣದ ಉಪಬಂಧಗಳು, 21ನೇ ಪ್ರಕರಣದ ಮತ್ತು 24ನೇ ಪ್ರಕರಣದ ಉಪಬಂಧಗಳಿಗೆ ಪೂರಕವಾಗಿರಬೇಕೇ ಹೊರತು ಅವುಗಳನ್ನು ಕುಂಠಿತಗೊಳಿಸುವಂತೆ ಅಲ್ಲ.

**26. ಷೇರುಗಳ ಖರೀದಿ ಮತ್ತು ಮಾರಾಟ.–** ಮಂಡಲಿಯು, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಯಾವ ಸಂಸ್ಥೆಯನ್ನು ಅಥವಾ ಸಂಸ್ಥೆಗಳ ವರ್ಗವನ್ನು ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಅನುಮೋದಿಸಬಹುದೋ ಆ ಯಾವುದೇ ಸಂಸ್ಥೆಗೆ ಅಥವಾ ಸಂಸ್ಥೆಗಳ ವರ್ಗಕ್ಕೆ ರಾಷ್ಟ್ರೀಯ ಬ್ಯಾಂಕ್ ವಂತಿಗೆ ನೀಡಬಹುದು, ಅಥವಾ ಅದರ ಅಥವಾ ಅವುಗಳ ಸ್ಟಾಕುಗಳನ್ನು, ಷೇರುಗಳನ್ನು, ಬಾಂಡುಗಳನ್ನು ಅಥವಾ ಡಿಬೆಂಚರುಗಳನ್ನು ಖರೀದಿಸಬಹುದು ಅಥವಾ ಮಾರಾಟ ಮಾಡಬಹುದು ಅಥವಾ ಭದ್ರತಾ ಪತ್ರಗಳಲ್ಲಿ ಹಣ ಹೂಡಬಹುದು.

**27. ಷೇರು ಬಂಡವಾಳ ವಂತಿಗೆಗಾಗಿ ರಾಜ್ಯ ಸರ್ಕಾರಗಳಿಗೆ ಸಾಲಗಳು.–** ರಾಷ್ಟ್ರೀಯ ಬ್ಯಾಂಕ್, ಸಹಕಾರ ಸಾಲ ನೀಡಿಕೆ ಸಂಘದ ಷೇರು ಬಂಡವಾಳಕ್ಕೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವಂತಿಗೆ ನೀಡಲು ರಾಜ್ಯ ಸರ್ಕಾರಗಳನ್ನು ಶಕ್ತಗೊಳಿಸುವುದಕ್ಕಾಗಿ 42ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ರಾಷ್ಟ್ರೀಯ ಗ್ರಾಮೀಣ ಸಾಲ ನೀಡಿಕೆ (ದೀರ್ಘಾವಧಿ ಕಾರ್ಯಾಚರಣೆಗಳ) ನಿಧಿಯಿಂದ ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡಿದ ದಿನಾಂಕದಿಂದ ಇಪ್ಪತ್ತೈದು ವರ್ಷಗಳನ್ನು ಮೀರದ ನಿಗದಿತ ಅವಧಿಗಳು ಮುಕ್ತಾಯವಾದ ಮೇಲೆ ಮರುಸಂದಾಯವಾಗುವಂತೆ ಅಂಥ ಸಾಲಗಳನ್ನು ಮತ್ತು ಮುಂಗಡಗಳನ್ನು ರಾಜ್ಯ ಸರ್ಕಾರಗಳಿಗೆ ನೀಡಬಹುದು.

**27ಎ. ರಾಜ್ಯ ಸರ್ಕಾರ, ಉದ್ಯಮಗಳು, ಇತ್ಯಾದಿಗಳಿಗೆ ಸಾಲಗಳು.–** ರಾಷ್ಟ್ರೀಯ ಬ್ಯಾಂಕ್, ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಉತ್ತೇಜನ ನೀಡುವುದಕ್ಕಾಗಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ, ಯಾವುದೇ ರಾಜ್ಯ ಸರ್ಕಾರಕ್ಕೆ ಅಥವಾ ರಾಜ್ಯಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ನಿಗಮಕ್ಕೆ ಅಥವಾ ಮಂಡಲಿಯು ಅನುಮೋದಿಸಬಹುದಾದ ಇತರ ಯಾರೇ ವ್ಯಕ್ತಿಗೆ ಅಥವಾ ವ್ಯಕ್ತಿಗಳ ವರ್ಗಕ್ಕೆ, ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡಿದ ದಿನಾಂಕದಿಂದ 25 ವರ್ಷಗಳನ್ನು ಮೀರದ ನಿಗದಿತ ಅವಧಿಗಳು ಮುಕ್ತಾಯವಾದ ಮೇಲೆ ಮರುಸಂದಾಯವಾಗುವಂತೆ ಮತ್ತು ಮಂಡಲಿಯು

ಅನುಮೋದಿಸಬಹುದಾದಂಥ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೊಳಪಟ್ಟು ಅಂಥ ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡಬಹುದು.

**28. ಸಾಲಕ್ಕಾಗಿ ಭದ್ರತೆ.-** (1) ರಾಷ್ಟ್ರೀಯ ಬ್ಯಾಂಕ್, ಅನುಸೂಚಿತ ಬ್ಯಾಂಕ್ ಅಲ್ಲದ ಸಂಸ್ಥೆಗೆ, ಅಸಲಿನ ಮರುಸಂದಾಯ ಮತ್ತು ಬಡ್ಡಿಯ ಸಂದಾಯಕ್ಕೆ ಸಂಬಂಧಿಸಿ ಸರ್ಕಾರದಿಂದ ಸಂಪೂರ್ಣವಾಗಿ ಮತ್ತು ಬೇಷರತ್ತಾಗಿ ಖಾತರಿ ದೊರೆತ ಹೊರತು, 25ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಅಥವಾ (ಸಿ) ಖಂಡದ ಅಥವಾ 30ನೇ ಪ್ರಕರಣದ ಅಥವಾ 32ನೇ ಪ್ರಕರಣದ ಮೇರೆಗೆ ಯಾವುದೇ ರೀತಿಯ ಸಾಲವನ್ನು ಮಂಜೂರು ಮಾಡತಕ್ಕದ್ದಲ್ಲ:

ಪರಂತು, ಸಾಲ ಪಡೆಯುವ ಸಂಸ್ಥೆಯು ಯಾವ ಪ್ರಕರಣಗಳಲ್ಲಿ ಮಂಡಲಿಗೆ ಸಮಾಧಾನವಾಗುವಂತೆ ಭದ್ರತೆಯನ್ನೊದಗಿಸಿದೆಯೋ ಆ ಪ್ರಕರಣಗಳಲ್ಲಿ ಯಾವುದೇ ಅಂಥ ಖಾತರಿಯನ್ನು ಅಗತ್ಯಪಡಿಸತಕ್ಕದ್ದಲ್ಲ.

(2) ರಾಷ್ಟ್ರೀಯ ಬ್ಯಾಂಕ್, ಯಾವುದೇ ಅನುಸೂಚಿತ ಬ್ಯಾಂಕಿಗೆ, ಅಂಥ ಅನುಸೂಚಿತ ಬ್ಯಾಂಕ್ ಮಂಡಲಿಗೆ ಸಮಾಧಾನವಾಗುವಂತೆ ಭದ್ರತೆಯನ್ನು ಒದಗಿಸಿದ ಹೊರತು, 25ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಅಥವಾ (ಸಿ) ಖಂಡದ ಅಥವಾ 32ನೇ ಪ್ರಕರಣದ ಮೇರೆಗೆ ಯಾವುದೇ ಸಾಲವನ್ನು ಮಂಜೂರುಮಾಡತಕ್ಕದ್ದಲ್ಲ.

(3) (1)ನೇ ಉಪಪ್ರಕರಣದಲ್ಲಿ ಅಥವಾ (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ರಾಷ್ಟ್ರೀಯ ಬ್ಯಾಂಕ್ ಸಾಲ ಮಂಜೂರು ಮಾಡಲು ಉದ್ದೇಶಿಸಿದ ಯೋಜನೆ ಮತ್ತು ಯೋಜನೆಗಳ ಸ್ವರೂಪವನ್ನು ಮತ್ತು ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು, ಅನುಸೂಚಿತ ಬ್ಯಾಂಕ್, ರಾಜ್ಯ ಸಹಕಾರ ಬ್ಯಾಂಕ್ ಅಥವಾ ಮಂಡಲಿಯು ನಿರ್ದಿಷ್ಟವಾಗಿ ಅನುಮೋದಿಸಿದ ಯಾರೇ ವ್ಯಕ್ತಿಗೆ ಅಥವಾ ವ್ಯಕ್ತಿಗಳ ವರ್ಗಕ್ಕೆ ಸಂಬಂಧಿಸಿದಂತೆ ಅಥವಾ ಯಾವುದೇ ಯೋಜನೆಗೆ ಅಥವಾ ಯೋಜನೆಗಳಿಗೆ ಸಂಬಂಧಿಸಿದಂತೆ, ಕಾರಣಗಳನ್ನು ಲಿಖಿತದಲ್ಲಿ ದಾಖಲು ಮಾಡಿ ಯಾವ ಪ್ರಕರಣಗಳಲ್ಲಿ ಮಂಡಲಿಯು ಅದರಲ್ಲಿ ಉಲ್ಲೇಖಿಸಿದ ಯಾವುದೇ ಖಾತರಿ ಅಥವಾ ಭದ್ರತೆಯು ಅವಶ್ಯವಿಲ್ಲವೆಂದು ತೀರ್ಮಾನಿಸಿರುವುದೋ ಆ ಪ್ರಕರಣಗಳಲ್ಲಿ ಅಂಥ ಖಾತರಿಯನ್ನು ಅಥವಾ ಭದ್ರತೆಯನ್ನು ಅಗತ್ಯಪಡಿಸತಕ್ಕದ್ದಲ್ಲ.

**29. ನ್ಯಾಸದಲ್ಲಿ ಧಾರಣ ಮಾಡಬೇಕಾದ ಮೊಬಲಗು ಮತ್ತು ಭದ್ರತಾ ಪತ್ರಗಳು.-** (1) ರಾಷ್ಟ್ರೀಯ ಬ್ಯಾಂಕ್ ಪೂರ್ಣವಾಗಿ ಅಥವಾ ಭಾಗಶಃ ಪುನರ್‌ವಿತ್ತೀಯ ರೂಪದಲ್ಲಿ ಒದಗಿಸಿದ ಸಾಲಗಳ ಮತ್ತು ಮುಂಗಡಗಳ ಮರುಸಂದಾಯಕ್ಕೆ ಅಥವಾ ವಸೂಲಿಗೆ ಸಂಬಂಧಿಸಿ ಸಾಲ ಪಡೆಯುವ ಸಂಸ್ಥೆಯು ಸ್ವೀಕರಿಸಿದ ಯಾವುದೇ ಮೊತ್ತಗಳು ರಾಷ್ಟ್ರೀಯ ಬ್ಯಾಂಕ್ ಮಂಜೂರು ಮಾಡಿರುವಷ್ಟರ ಮಟ್ಟಿಗೆ ಮತ್ತು ಬಾಕಿ ಉಳಿದಿರುವ ಸಾಲದಷ್ಟರ ಮಟ್ಟಿಗೆ ರಾಷ್ಟ್ರೀಯ ಬ್ಯಾಂಕಿನ ಪರ ನ್ಯಾಸವಾಗಿ ಸಾಲ ಪಡೆಯುವ ಸಂಸ್ಥೆಯು ಸ್ವೀಕರಿಸಿರುವುದಾಗಿ ಭಾವಿಸತಕ್ಕದ್ದು ಮತ್ತು ತದನುಸಾರವಾಗಿ, ರಾಷ್ಟ್ರೀಯ ಬ್ಯಾಂಕ್ ನಿಗದಿಪಡಿಸಿದ ಮರುಸಂದಾಯದ ವೇಳಾಪಟ್ಟಿಯ ಪ್ರಕಾರ ಅಂಥ ಸಂಸ್ಥೆಯು ರಾಷ್ಟ್ರೀಯ ಬ್ಯಾಂಕಿಗೆ ಸಂದಾಯಮಾಡತಕ್ಕದ್ದು.

(2) ಸಾಲ ಪಡೆಯುವ ಸಂಸ್ಥೆಗೆ ಸಾಲವನ್ನು ಮಂಜೂರು ಮಾಡಿರುವಲ್ಲಿ ಯಾವ ವ್ಯವಹಾರಕ್ಕೆ ಸಂಬಂಧಿಸಿ ರಾಷ್ಟ್ರೀಯ ಬ್ಯಾಂಕ್ ಅಂಥ ಸಾಲವನ್ನು ಮಂಜೂರು ಮಾಡಿದೆಯೋ ಆ ಯಾವುದೇ ವ್ಯವಹಾರದ ಕಾರಣದಿಂದಾಗಿ ಅಂಥ ಸಾಲವನ್ನು ಪಡೆಯುವ ಸಂಸ್ಥೆಯು ಧಾರಣ ಮಾಡಿರುವ ಅಥವಾ ಧಾರಣ ಮಾಡಬಹುದಾದ ಎಲ್ಲಾ ಭದ್ರತಾ ಪತ್ರಗಳನ್ನು ಅಂಥ ಸಂಸ್ಥೆಯು ರಾಷ್ಟ್ರೀಯ ಬ್ಯಾಂಕಿನ ಪರ ನ್ಯಾಸವಾಗಿ ಧಾರಣ ಮಾಡತಕ್ಕದ್ದು.

(3) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ತದ್ವಿರುದ್ಧವಾದುದು ಏನೇ ಒಳಗೊಂಡಿದ್ದರೂ, ಸಾಲ ಪಡೆಯುವ ಸಂಸ್ಥೆಯನ್ನು ಪರಿಸಮಾಪನಗೊಳಿಸುವುದಕ್ಕಾಗಿ ಸಮಾಪಕನನ್ನು ನೇಮಕ ಮಾಡಿರುವಾಗ, ರಾಷ್ಟ್ರೀಯ ಬ್ಯಾಂಕ್, ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಪುನರ್‌ವಿತ್ತೀಯ ರೂಪದಲ್ಲಿ ಒದಗಿಸಿದ್ದ ಸಾಲಗಳ ಮತ್ತು ಮುಂಗಡಗಳ ಮರುಸಂದಾಯಕ್ಕೆ ಅಥವಾ ವಸೂಲಿಗೆ ಸಂಬಂಧಿಸಿ, ಪುನರ್‌ವಿತ್ತೀಯವು ಬಾಕಿ ಇರುವಷ್ಟರ ಮಟ್ಟಿಗೆ, ಸಂದರ್ಭಾನುಸಾರ, ಸಾಲ ಪಡೆಯುವ ಸಂಸ್ಥೆಯು ಅಥವಾ ಸಮಾಪಕನು ವಸೂಲಿ ಮಾಡಿದ ಮೊಬಲಗನ್ನು ರಾಷ್ಟ್ರೀಯ ಬ್ಯಾಂಕಿಗೆ ಕೂಡಲೇ ವರ್ಗಾವಣೆ ಮಾಡುವುದು ಸಮಾಪಕನ ಕರ್ತವ್ಯವಾಗಿರತಕ್ಕದ್ದು ಮತ್ತು ರಾಷ್ಟ್ರೀಯ ಬ್ಯಾಂಕ್, ಸಾಲ ಪಡೆಯುವ ಸಂಸ್ಥೆಯು ಮಾಡಿಕೊಂಡ

ಯಾವುದೇ ಕರಾರಿನಲ್ಲಿ, ಭದ್ರತಾ ಪತ್ರದಲ್ಲಿ ಅಥವಾ ಪಡೆದ ಇತರ ದಸ್ತಾವೇಜಿನಲ್ಲಿ ಸಾಲ ಪಡೆದ ಸಂಸ್ಥೆಗೆ ಮಾಡಿದ ಪ್ರತಿಯೊಂದು ಉಲ್ಲೇಖವು ರಾಷ್ಟ್ರೀಯ ಬ್ಯಾಂಕಿಗೆ ಮಾಡಿದ ಉಲ್ಲೇಖವಾಗಿದ್ದರೆ ಹೇಗೋ ಹಾಗೆ ರಾಷ್ಟ್ರೀಯ ಬ್ಯಾಂಕಿನ ಪರವಾಗಿ ನ್ಯಾಸದಲ್ಲಿ ಸಾಲ ಪಡೆಯುವ ಸಂಸ್ಥೆಯು ಧಾರಣ ಮಾಡಿರುವ ಭದ್ರತಾ ಪತ್ರಗಳನ್ನು ಜಾರಿಗೊಳಿಸಲು ಹಕ್ಕುಳ್ಳದ್ದಾಗಿರತಕ್ಕದ್ದು ಮತ್ತು ತದನುಸಾರವಾಗಿ, ರಾಷ್ಟ್ರೀಯ ಬ್ಯಾಂಕ್, ಸಾಲ ಪಡೆಯುವ ಸಂಸ್ಥೆಯ ಘಟಕಗಳಿಂದ ಅಂಥ ಸಾಲಗಳ ಮತ್ತು ಮುಂಗಡಗಳ ಮೇರೆಗೆ ಬರಬೇಕಾದ ಬಾಕಿ ಮೊಬಲಗನ್ನು ವಸೂಲು ಮಾಡಲು ಹಕ್ಕುಳ್ಳದ್ದಾಗಿರತಕ್ಕದ್ದು, ಹಾಗೂ ರಾಷ್ಟ್ರೀಯ ಬ್ಯಾಂಕ್ ಅಂಥ ಘಟಕಕ್ಕೆ ನೀಡಿದ ಯಾವುದೇ ವಿಮೋಚನೆಯು ಸಿಂಧುವಾದ ವಿಮೋಚನೆಯಾಗಿರತಕ್ಕದ್ದು ಮತ್ತು ಸಮಾಪಕನು, ರಾಷ್ಟ್ರೀಯ ಬ್ಯಾಂಕ್ ತಗಾದೆ ಮಾಡಿದಾಗ, ಅಂಥ ಎಲ್ಲಾ ಕರಾರುಗಳನ್ನು, ಭದ್ರತಾ ಪತ್ರಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಅವುಗಳ ಯುಕ್ತ ಜಾರಿಗಾಗಿ ರಾಷ್ಟ್ರೀಯ ಬ್ಯಾಂಕಿಗೆ ಒಪ್ಪಿಸತಕ್ಕದ್ದು.

**ವಿವರಣೆ:–** ಈ ಉಪಪ್ರಕರಣದ ಉದ್ದೇಶಗಳಿಗಾಗಿ, 'ಸಮಾಪಕ' ಎಂಬ ಪದವು, ಸಾಲ ಪಡೆಯುವ ಸಂಸ್ಥೆಯನ್ನು ಸಮಾಪನಗೊಳಿಸುವ ಕರ್ತವ್ಯವನ್ನು ವಹಿಸಿದ ಸಮಾಪಕನನ್ನು ಅಥವಾ ಹಂಗಾಮಿ ಸಮಾಪಕನನ್ನು ಅಥವಾ ಯಾರೇ ವ್ಯಕ್ತಿಯನ್ನು ಅಥವಾ ಪ್ರಾಧಿಕಾರಿಯನ್ನು ಒಳಗೊಳ್ಳತಕ್ಕದ್ದು.

**30. ನೇರ ಸಾಲಗಳು.–** ರಾಷ್ಟ್ರೀಯ ಬ್ಯಾಂಕ್, ಮಂಡಲಿಯು ವಿಶೇಷ ಸಂದರ್ಭಗಳನ್ನು ಲಿಖಿತದಲ್ಲಿ ದಾಖಲಿಸಿ ಅದೇ ಸ್ವತಃ ಅಥವಾ ಇತರ ಹಣಕಾಸು ಸಂಸ್ಥೆಗಳೊಂದಿಗೆ ಅಥವಾ ಅನುಸೂಚಿತ ಬ್ಯಾಂಕ್‌ಗಳೊಂದಿಗೆ ಜೊತೆಗೂಡಿ, ಯಾರೇ ವ್ಯಕ್ತಿಗೆ ಅಥವಾ ವ್ಯಕ್ತಿಗಳ ವರ್ಗಕ್ಕೆ ಅಥವಾ ನಿಗಮಿತ ನಿಕಾಯಕ್ಕೆ ಪುನರ್‌ವಿತ್ತೀಯ ರೂಪದಲ್ಲಲ್ಲದೆ ಅನ್ಯಥಾ ರಾಷ್ಟ್ರೀಯ ಬ್ಯಾಂಕ್ ತಾನು ಸೂಕ್ತವೆಂದು ಭಾವಿಸಬಹುದಾದಂಥ ಭದ್ರತಾ ಪತ್ರವೂ ಸೇರಿ ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮತ್ತು ಇಪ್ಪತ್ತೈದು ವರ್ಷಗಳನ್ನು ಮೀರದಂಥ ಅವಧಿಯೊಳಗೆ ಮರು ಸಂದಾಯ ಮಾಡಬೇಕಾದ ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡಬಹುದು.

**30ಎ. ವಿನಿಮಯ ಪತ್ರಗಳ ಮೇಲೆ ಮರುಸೋಡಿ.–** ಅನುಸೂಚಿತ ಬ್ಯಾಂಕ್, ರಾಜ್ಯ ಸಹಕಾರ ಬ್ಯಾಂಕ್, ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಅಥವಾ ಮಂಡಲಿಯು ಅನುಮೋದಿಸಿದ ಯಾವುದೇ ಇತರ ಸಂಸ್ಥೆಯು ಅಥವಾ ಸಂಸ್ಥೆಗಳ ವರ್ಗವು ಸಲ್ಲಿಸಿದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ಯಾವುದೇ ಕಂಪನಿಯು ಅಥವಾ ನಿಗಮಿತ ನಿಕಾಯವು ಮಾಡಿದ, ಬರೆದ, ಅಂಗೀಕರಿಸಿದ ಅಥವಾ ಹಿಂಬರಹ ಮಾಡಿದ ವಿನಿಮಯ ಪತ್ರಗಳಿಗೆ ಮತ್ತು ಪ್ರಾಮಿಸರಿ ನೋಟುಗಳಿಗೆ ರಾಷ್ಟ್ರೀಯ ಬ್ಯಾಂಕ್ ಮರುಸೋಡಿ ನೀಡಬಹುದು.

**31. ಕಮೀಷನ್.–** ರಾಷ್ಟ್ರೀಯ ಬ್ಯಾಂಕ್, ಈ ಅಧ್ಯಾಯದಲ್ಲಿ ಅಥವಾ ಅಧ್ಯಾಯ VII ರಲ್ಲಿ ನಮೂದಿಸಲಾದ ಸೇವೆಗಳ ಪೈಕಿ ಯಾವುದೇ ಸೇವೆ ಸಲ್ಲಿಸಲು ಒಪ್ಪಬಹುದಾದ ಕಮೀಷನ್ ಅಥವಾ ಇತರ ಪ್ರತಿಫಲವನ್ನು ಸ್ವೀಕರಿಸಬಹುದು.

**32. ಖಾತರಿಗಳನ್ನು ನೀಡುವುದು.–** ಮಂಡಲಿಯು ಕಾಲಕಾಲಕ್ಕೆ ನೀಡಬಹುದಾದಂಥ ನಿರ್ದೇಶನಗಳಿಗೆ ಒಳಪಟ್ಟು, ಯಾರೇ ವ್ಯಕ್ತಿಯಿಂದ ಅಥವಾ ನಿಗಮಿತವಾದ ಅಥವಾ ನಿಗಮಿತವಲ್ಲದ ವ್ಯಕ್ತಿಗಳ ವರ್ಗದಿಂದ ಬರಬೇಕಾದ ಬಾಕಿಯನ್ನು, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವುದಕ್ಕಾಗಿ ಬಂಡವಾಳ ಸರಕುಗಳ ಖರೀದಿಗೆ ಅಥವಾ ಯಾವುದೇ ಇತರ ಉದ್ದೇಶಕ್ಕೆ ಸಂಬಂಧಿಸಿದಂತೆ ಮುಂದೂಡಿದ ಸಂದಾಯಗಳಿಗೆ ರಾಷ್ಟ್ರೀಯ ಬ್ಯಾಂಕ್ ಖಾತರಿ ಕೊಡಬಹುದು.

**33. ಸಾಲ ಸೌಲಭ್ಯಕ್ಕಾಗಿ ಷರತ್ತುಗಳನ್ನು ವಿಧಿಸಲು ಅಧಿಕಾರ.–** ರಾಷ್ಟ್ರೀಯ ಬ್ಯಾಂಕ್, ಸಾಲ ಪಡೆಯುವವನೊಂದಿಗೆ ಈ ಅಧಿನಿಯಮದ ಮೇರೆಗೆ ಯಾವುದೇ ವ್ಯವಹಾರವನ್ನು ಮಾಡಿಕೊಳ್ಳುವಲ್ಲಿ ರಾಷ್ಟ್ರೀಯ ಬ್ಯಾಂಕಿನ ಹಿತಾಸಕ್ತಿಯ ರಕ್ಷಣೆಗಾಗಿ ತಾನು ಅವಶ್ಯವೆಂದು ಅಥವಾ ವಿಹಿತವೆಂದು ಆಲೋಚಿಸಬಹುದಾದಂಥ ಷರತ್ತುಗಳನ್ನು ಅದು ವಿಧಿಸಬಹುದು.

**34. ಒಪ್ಪಿಕೊಂಡ ಅವಧಿಗೆ ಮೊದಲೇ ಮರುಸಂದಾಯ ಮಾಡುವಂತೆ ಕೇಳಲು ಅಧಿಕಾರ.–** ಯಾವುದೇ ಒಪ್ಪಂದದಲ್ಲಿ ಅಥವಾ ವ್ಯವಸ್ಥೆಯಲ್ಲಿ ಏನೇ ಒಳಗೊಂಡಿದ್ದರೂ,–

(ಎ) ಸಾಲ ಅಥವಾ ಇತರ ಹಣಕಾಸಿನ ನೆರವಿಗಾಗಿ ಸಲ್ಲಿಸಿದ ಅರ್ಜಿಯಲ್ಲಿ ಯಾವುದೇ ಮುಖ್ಯ ವಿವರಗಳಲ್ಲಿ ಸುಳ್ಳು ಅಥವಾ ತಪ್ಪುದಾರಿಗೆ ಎಳೆಯುವ ಮಾಹಿತಿಯನ್ನು ಕೊಡಲಾಗಿತ್ತೆಂದು ರಾಷ್ಟ್ರೀಯ ಬ್ಯಾಂಕಿಗೆ ಕಂಡುಬಂದರೆ; ಅಥವಾ

(ಬಿ) ಸಾಲ ಪಡೆಯುವ ಸಂಸ್ಥೆಯು ಅಥವಾ ವ್ಯಕ್ತಿಯು, ಅನುದಾನಗಳೂ ಒಳಗೊಂಡಂತೆ ಸಾಲ ಅಥವಾ ಇತರ ಹಣಕಾಸು ನೆರವಿನ ವಿಷಯದಲ್ಲಿ ರಾಷ್ಟ್ರೀಯ ಬ್ಯಾಂಕಿನೊಂದಿಗೆ ಮಾಡಿಕೊಂಡ ಕರಾರಿನ ಅಥವಾ ಏರ್ಪಾಡಿನ ಯಾವುವೇ ನಿಬಂಧನೆಗಳನ್ನು ಪಾಲಿಸುವುದಕ್ಕೆ ತಪ್ಪಿದರೆ; ಅಥವಾ

(ಸಿ) ಸಾಲ ಪಡೆಯುವ ಸಂಸ್ಥೆಯು ತನ್ನ ಋಣಗಳನ್ನು ತೀರಿಸಲು ಅಸಮರ್ಥವಾಗಿದೆಯೆಂದು ಅಥವಾ ಈ ಸಂಬಂಧದಲ್ಲಿ ಸಮಾಪನ ವ್ಯವಹರಣೆಗಳನ್ನು ಪ್ರಾರಂಭಿಸಬಹುದೆಂಬ ಬಗ್ಗೆ ಯುಕ್ತ ಸಂದೇಹ ಉಂಟಾದರೆ; ಅಥವಾ

(ಡಿ) ಯಾವುದೇ ಕಾರಣಕ್ಕಾಗಿ, ರಾಷ್ಟ್ರೀಯ ಬ್ಯಾಂಕಿನ ಹಿತಾಸಕ್ತಿಗಳನ್ನು ರಕ್ಷಿಸುವುದು ಅವಶ್ಯವೆಂದು ಕಂಡುಬಂದರೆ

– ರಾಷ್ಟ್ರೀಯ ಬ್ಯಾಂಕ್, ಯಾವ ಸಾಲ ಪಡೆದವನಿಗೆ ಅಥವಾ ನೆರವು ಪಡೆದ ವ್ಯಕ್ತಿಗೆ ಅನುದಾನಗಳೂ ಒಳಗೊಂಡಂತೆ ಯಾವುದೇ ಸಾಲವನ್ನು ಅಥವಾ ಹಣಕಾಸಿನ ನೆರವನ್ನು ಮಂಜೂರು ಮಾಡಲಾಗಿದೆಯೋ ಆ ಯಾರೇ ಸಾಲ ಪಡೆದ ವ್ಯಕ್ತಿಯನ್ನು ಅಥವಾ ನೆರವು ಪಡೆದ ವ್ಯಕ್ತಿಯನ್ನು ಲಿಖಿತ ನೋಟೀಸು ಕೊಡುವ ಮೂಲಕ ಅನುದಾನಗಳೂ ಒಳಗೊಂಡಂತೆ, ಸಂದರ್ಭಾನುಸಾರ, ಸಾಲವನ್ನು ಅಥವಾ ಇತರ ಹಣಕಾಸಿನ ನೆರವನ್ನು ಸಂಪೂರ್ಣವಾಗಿ ಕೂಡಲೇ ತೀರಿಸುವಂತೆ ಅಗತ್ಯಪಡಿಸಬಹುದು.

**35. ರಾಷ್ಟ್ರೀಯ ಬ್ಯಾಂಕ್ ದಾಖಲೆಗಳನ್ನು ನೋಡುವ ಅವಕಾಶ ಹೊಂದಿರುವುದು.**– (1) ಈ ಅಧಿನಿಯಮದ ಮೇರೆಗೆ ರಾಷ್ಟ್ರೀಯ ಬ್ಯಾಂಕಿನಿಂದ ಯಾವುದೇ ಸಾಲವನ್ನು ಅಥವಾ ಇತರೆ ಸೌಲಭ್ಯಗಳನ್ನು ಪಡೆಯಬಯಸುವ ಸಾಲ ಪಡೆಯುವ ಸಂಸ್ಥೆಯ ಅಂಥ ಎಲ್ಲ ದಾಖಲೆಗಳನ್ನು ಮತ್ತು ಅಂಥ ಸಾಲ ಪಡೆಯುವ ಸಂಸ್ಥೆಯಿಂದ ಯಾವುದೇ ಸಾಲವನ್ನು ಅಥವಾ ಇತರ ಸೌಲಭ್ಯಗಳನ್ನು ಪಡೆಯಬಯಸುವ ಯಾರೇ ವ್ಯಕ್ತಿಯ ಅಂಥ ಎಲ್ಲ ದಾಖಲೆಗಳನ್ನು, ಅಂಥ ಸಾಲ ಪಡೆಯುವ ಸಂಸ್ಥೆಗೆ ಹಣಕಾಸು ಅಥವಾ ಇತರ ನೆರವನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ ಅಥವಾ ಸಾಲ ಪಡೆಯುವ ಸಂಸ್ಥೆಯು ಅಂಥ ವ್ಯಕ್ತಿಗೆ ನೀಡಿದ ಯಾವುದೇ ಸಾಲವನ್ನು ಅಥವಾ ಮುಂಗಡವನ್ನು ಪುನರ್‌ವಿತ್ತೀಯ ರೂಪದಲ್ಲಿ ನೀಡುವುದಕ್ಕೆ ಸಂಬಂಧಿಸಿದಂತೆ, ಪರಿಶೀಲಿಸುವುದು ಅವಶ್ಯವೆಂದು ರಾಷ್ಟ್ರೀಯ ಬ್ಯಾಂಕಿಗೆ ಕಂಡುಬಂದರೆ, ಅದು ಅಂಥ ಎಲ್ಲಾ ದಾಖಲೆಗಳನ್ನು ನೋಡುವ ಮುಕ್ತ ಅವಕಾಶ ಹೊಂದಿರತಕ್ಕದ್ದು.

(2) ರಾಷ್ಟ್ರೀಯ ಬ್ಯಾಂಕ್, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಸಂಸ್ಥೆಯನ್ನು ಅಥವಾ ವ್ಯಕ್ತಿಯನ್ನು ಆ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ದಾಖಲೆಗಳ ಪ್ರತಿಗಳನ್ನು ತನಗೆ ಒದಗಿಸುವಂತೆ ಅಗತ್ಯಪಡಿಸಬಹುದು ಮತ್ತು ಸಂದರ್ಭಾನುಸಾರ ಆ ಸಂಸ್ಥೆಯು ಅಥವಾ ಆ ವ್ಯಕ್ತಿಯು ಅಂಥ ಕೋರಿಕೆಯನ್ನು ಪಾಲಿಸಲು ಬದ್ಧವಾಗಿರತಕ್ಕದ್ದು.

**36. ಸಾಲ ಅಥವಾ ಮುಂಗಡದ ಸಿಂಧುತ್ವವನ್ನು ಪ್ರಶ್ನಿಸದಿರುವುದು.**– ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ತದ್ವಿರುದ್ಧವಾದುದು ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ರಾಷ್ಟ್ರೀಯ ಬ್ಯಾಂಕ್ ಮಂಜೂರು ಮಾಡಿದ ಯಾವುದೇ ಸಾಲದ ಅಥವಾ ಮುಂಗಡದ ಸಿಂಧುತ್ವವನ್ನು, ಮೇಲೆ ಹೇಳಿದಂಥ ಇತರ ಕಾನೂನಿನ ಅಥವಾ ಯಾವುದೇ ನಿರ್ಣಯದ, ಕರಾರಿನ, ಜ್ಞಾಪನಪತ್ರದ, ಸಂಘದ ನಿಯಮಾವಳಿಯ ಅಥವಾ ಇತರ ಲಿಖಿತದ ಅಗತ್ಯತೆಗಳನ್ನು ಪಾಲಿಸದಿರುವ ಕಾರಣಮಾತ್ರದಿಂದಲೇ ಪ್ರಶ್ನಿಸತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಯಾವುದೇ ಕಂಪನಿಯು ಅಥವಾ ಸಹಕಾರ ಸಂಘವು ಸಾಲಗಳನ್ನು ಅಥವಾ ಮುಂಗಡಗಳನ್ನು ಪಡೆಯಲು ಅದರ ಜ್ಞಾಪನಪತ್ರದ ಮೂಲಕ ಅಧಿಕಾರ ಹೊಂದಿಲ್ಲದಿದ್ದರೆ ಅಂಥ ಯಾವುದೇ ಕಂಪನಿಯು ಅಥವಾ ಸಹಕಾರ ಸಂಘವು ಪಡೆದ ಯಾವುದೇ ಸಾಲವನ್ನು ಅಥವಾ ಮುಂಗಡವನ್ನು ಸಿಂಧುಗೊಳಿಸತಕ್ಕದ್ದಲ್ಲ.

**37. ರಾಷ್ಟ್ರೀಯ ಬ್ಯಾಂಕ್ ತನ್ನ ಬಾಂಡುಗಳ ಅಥವಾ ಡಿಬೆಂಚರುಗಳ ಮೇಲೆ ಸಾಲ ಅಥವಾ ಮುಂಗಡಗಳನ್ನು ಮಂಜೂರು ಮಾಡದಿರುವುದು.–** ರಾಷ್ಟ್ರೀಯ ಬ್ಯಾಂಕ್, ತನ್ನ ಬಾಂಡುಗಳ ಅಥವಾ ಡಿಬೆಂಚರುಗಳ ಭದ್ರತೆಯ ಮೇಲೆ ಯಾವುದೇ ಸಾಲವನ್ನು ಅಥವಾ ಮುಂಗಡವನ್ನು ಮಂಜೂರು ಮಾಡತಕ್ಕದ್ದಲ್ಲ.

**37ಎ. ನಿಷೇಧಿತ ವ್ಯವಹಾರ.–** (1) ರಾಷ್ಟ್ರೀಯ ಬ್ಯಾಂಕ್, ಯಾವ ವ್ಯಕ್ತಿಗೆ ಅಥವಾ ವ್ಯಕ್ತಿಗಳ ನಿಕಾಯಕ್ಕೆ ರಾಷ್ಟ್ರೀಯ ಬ್ಯಾಂಕಿನ ನಿರ್ದೇಶಕರುಗಳಲ್ಲಿ ಯಾರಾದರೂ ಮಾಲೀಕ, ಪಾಲುದಾರ, ನಿರ್ದೇಶಕ, ವ್ಯವಸ್ಥಾಪಕ, ಏಜೆಂಟ್, ನೌಕರ ಅಥವಾ ಖಾತರಿದಾರ ಆಗಿರುವವರೋ ಅಥವಾ ರಾಷ್ಟ್ರೀಯ ಬ್ಯಾಂಕಿನ ನಿರ್ದೇಶಕರುಗಳಲ್ಲಿ ಒಬ್ಬರು ಅಥವಾ ಹೆಚ್ಚಿನ ನಿರ್ದೇಶಕರು ಒಟ್ಟಿಗೆ ಗಣನೀಯ ಹಿತಾಸಕ್ತಿ ಹೊಂದಿರುವವರೋ, ಆ ಯಾರೇ ವ್ಯಕ್ತಿಗೆ ಅಥವಾ ವ್ಯಕ್ತಿಗಳ ನಿಕಾಯಕ್ಕೆ 30ನೇ ಪ್ರಕರಣದ ಮೇರೆಗೆ ಯಾವುವೇ ಸಾಲಗಳನ್ನು ಅಥವಾ ಮುಂಗಡಗಳನ್ನು ನೀಡತಕ್ಕದ್ದಲ್ಲ ಅಥವಾ ಈ ಅಧಿನಿಯಮದ ಮೇರೆಗೆ ಯಾವುವೇ ಅನುದಾನಗಳನ್ನು ನೀಡತಕ್ಕದ್ದಲ್ಲ:

ಪರಂತು, ರಾಷ್ಟ್ರೀಯ ಬ್ಯಾಂಕಿನ ಯಾರೇ ನಿರ್ದೇಶಕನನ್ನು,–

(ಎ) ಸರ್ಕಾರವು ಅಥವಾ ಕಂಪನಿಗಳ ಅಧಿನಿಯಮ, 1956ರ 617ನೇ ಪ್ರಕರಣದಲ್ಲಿ ಪರಿಭಾಷಿಸಿದಂಥ ಸರ್ಕಾರಿ ಕಂಪನಿಯು ಅಥವಾ ಕಾನೂನಿನ ಮೂಲಕ ಸ್ಥಾಪಿತವಾದ ಯಾವುದೇ ಇತರ ನಿಗಮವು ಅಂಥ ಸಾಲ ಪಡೆಯುವ ಸಂಸ್ಥೆಯ ಮಂಡಲಿಯ ನಿರ್ದೇಶಕನೆಂದು ನಾಮನಿರ್ದೇಶನ ಮಾಡಿದ್ದರೆ;

(ಬಿ) ಸರ್ಕಾರವು ಅಥವಾ ಕಂಪನಿಗಳ ಅಧಿನಿಯಮ, 1956ರ 617ನೇ ಪ್ರಕರಣದಲ್ಲಿ ಪರಿಭಾಷಿಸಿದಂಥ ಸರ್ಕಾರಿ ಕಂಪನಿಯು ಅಥವಾ ಕಾನೂನಿನ ಮೂಲಕ ಸ್ಥಾಪಿತವಾದ ಯಾವುದೇ ಇತರ ನಿಗಮವು ಸಾಲ ಪಡೆಯುವ ಸಂಸ್ಥೆಯಲ್ಲಿ ಹೊಂದಿರುವ ಷೇರುಗಳ ಕಾರಣದಿಂದ ಅಂಥ ಸಾಲ ಪಡೆಯುವ ಸಂಸ್ಥೆಯು ಮಂಡಲಿಗೆ ಆಯ್ಕೆಮಾಡಿದ್ದರೆ

– ಸಂದರ್ಭಾನುಸಾರ, ಅಂಥ ನಾಮನಿರ್ದೇಶನ ಅಥವಾ ಆಯ್ಕೆಯ ಕಾರಣದಿಂದಲೇ ಯಾವುದೇ ಸಾಲ ಪಡೆಯುವ ಸಂಸ್ಥೆಗೆ ಈ ಉಪಪ್ರಕರಣವು ಅನ್ವಯಿಸತಕ್ಕದ್ದಲ್ಲ.

**ವಿವರಣೆ:–** ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಸಾಲ ಪಡೆಯುವ ಸಂಸ್ಥೆಗೆ ಸಂಬಂಧಿಸಿದಂತೆ "ಗಣನೀಯ ಹಿತಾಸಕ್ತಿ" ಎಂದರೆ, ರಾಷ್ಟ್ರೀಯ ಬ್ಯಾಂಕಿನ ನಿರ್ದೇಶಕರುಗಳಲ್ಲಿ ಒಬ್ಬರು ಅಥವಾ ಹೆಚ್ಚಿನವರು ಅಥವಾ ಕಂಪನಿಗಳ ಅಧಿನಿಯಮ, 1956ರ 2ನೇ ಪ್ರಕರಣದ (41)ನೇ ಖಂಡದಲ್ಲಿ ಪರಿಭಾಷಿಸಿದಂತೆ ಅಂಥ ನಿರ್ದೇಶಕನ ಯಾರೇ ಸಂಬಂಧಿಕನು, ಸಾಲ ಪಡೆಯುವ ಸಂಸ್ಥೆಯ ಷೇರುಗಳಲ್ಲಿ, ಒಬ್ಬನ ಅಥವಾ ಒಬ್ಬರಿಗಿಂತ ಹೆಚ್ಚಿನವರ ಹಿತಾಸಕ್ತಿಯನ್ನು ಗಣನೆಗೆ ತೆಗೆದುಕೊಂಡರೆ ಯಾವ ಸಂದಾಯಿತ ಷೇರು ಬಂಡವಾಳದ ಸರಾಸರಿ ಮೊತ್ತವು ಐದು ಲಕ್ಷ ರೂ.ಗಳನ್ನಾಗಲಿ ಅಥವಾ ಸಾಲ ಪಡೆಯುವ ಸಂಸ್ಥೆಯ ಸಂದಾಯಿತ ಷೇರು ಬಂಡವಾಳದ ಶೇಕಡ ಐದರಷ್ಟನ್ನಾಗಲಿ ಮೀರುವುದೋ, ಇದರಲ್ಲಿ ಯಾವುದು ಕಡಿಮೆಯೋ ಅದರಲ್ಲಿ ಹೊಂದಿರುವ ಪ್ರಯೋಜನಕಾರಿ ಹಿತಾಸಕ್ತಿ ಎಂದು ಅರ್ಥ.

(2) (1)ನೇ ಉಪಪ್ರಕರಣದ ಉಪಬಂಧಗಳು,–

(ಎ) ಸಾಲ ಪಡೆಯುವ ಸಂಸ್ಥೆಯೊಂದಿಗೆ ವ್ಯವಹಾರ ನಡೆಸುವುದು ಸಾರ್ವಜನಿಕ ಹಿತಾಸಕ್ತಿಯಿಂದ ಅವಶ್ಯಕವೆಂದು ರಾಷ್ಟ್ರೀಯ ಬ್ಯಾಂಕಿಗೆ ಮನದಟ್ಟಾದರೆ ಆ ಯಾವುದೇ ಸಾಲ ಪಡೆಯುವ ಸಂಸ್ಥೆಗೆ ಅನ್ವಯವಾಗತಕ್ಕದ್ದಲ್ಲ ಮತ್ತು ಅಂಥ ಸಾಲ ಪಡೆಯುವ ಸಂಸ್ಥೆಯೊಂದಿಗೆ ಯಾವುದೇ ರೀತಿಯ ವ್ಯವಹಾರವನ್ನು ನಡೆಸುವುದು ಮಂಡಲಿಯು ಅನುಮೋದಿಸಬಹುದಾದಂಥ ಷರತ್ತುಗಳಿಗೆ ಮತ್ತು ಪರಿಮಿತಿಗಳಿಗೆ ಅನುಸಾರವಾಗಿರತಕ್ಕದ್ದು ಮತ್ತು ಅವುಗಳಿಗೆ ಒಳಪಟ್ಟಿರತಕ್ಕದ್ದು;

(ಬಿ) ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ತಿದ್ದುಪಡಿ) ಅಧಿನಿಯಮ, 2000ದ ಪ್ರಾರಂಭಕ್ಕೆ ಮೊದಲು ಪ್ರಾರಂಭಿಸಿರುವ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ವ್ಯವಹರಣೆಗೆ ಅನ್ವಯವಾಗತಕ್ಕದ್ದಲ್ಲ, ಮತ್ತು ಅಂಥ ಎಲ್ಲಾ ವ್ಯವಹಾರಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ಯಾವುದೇ ವ್ಯವಹರಣೆಗಳನ್ನು ಆ ಅಧಿನಿಯಮವು ಜಾರಿಗೆ ಬಂದಿರದಿದ್ದರೆ ಹೇಗೋ ಹಾಗೇ ಕಾರ್ಯಗತಗೊಳಿಸಬಹುದು ಅಥವಾ ಮುಂದುವರೆಸಬಹುದು;

(ಸಿ) ಸದರಿ ಉಪಪ್ರಕರಣದಲ್ಲಿ ಹೇಳಲಾದಂಥ ಅನರ್ಹತೆಗೆ ಮುಂಚಿನ ಷರತ್ತುಗಳು ಎಲ್ಲಿಯವರೆಗೆ ಮುಂದುವರಿಯುವವೋ ಅಲ್ಲಿಯವರೆಗೆ ಮಾತ್ರ ಅನ್ವಯವಾಗತಕ್ಕದ್ದು.

## ಅಧ್ಯಾಯ – VII

## ರಾಷ್ಟ್ರೀಯ ಬ್ಯಾಂಕಿನ ಇತರ ಪ್ರಕಾರ್ಯಗಳು

**38. ರಾಷ್ಟ್ರೀಯ ಬ್ಯಾಂಕಿನ ಇತರ ಪ್ರಕಾರ್ಯಗಳು.**- ರಾಷ್ಟ್ರೀಯ ಬ್ಯಾಂಕ್,-

(i) ತನ್ನ ಕಾರ್ಯಾಚರಣೆಗಳನ್ನು ಮತ್ತು ಗ್ರಾಮೀಣ ಸಾಲ ನೀಡಿಕೆ ಕ್ಷೇತ್ರದಲ್ಲಿ ತೊಡಗಿರುವ ವಿವಿಧ ಸಂಸ್ಥೆಗಳ ಕಾರ್ಯಾಚರಣೆಗಳನ್ನು ಸಮನ್ವಯಗೊಳಿಸತಕ್ಕದ್ದು ಮತ್ತು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳನ್ನು ಅಧ್ಯಯನ ಮಾಡುವುದಕ್ಕೆ ಪರಿಣಿತ ಸಿಬ್ಬಂದಿ ವರ್ಗವನ್ನು ಹೊಂದಿರತಕ್ಕದ್ದು ಮತ್ತು ಕೇಂದ್ರ ಸರ್ಕಾರ, ರಿಸರ್ವ್ ಬ್ಯಾಂಕ್, ರಾಜ್ಯ ಸರ್ಕಾರಗಳು ಮತ್ತು ಗ್ರಾಮೀಣಾಭಿವೃದ್ಧಿ ಕ್ಷೇತ್ರದಲ್ಲಿ ತೊಡಗಿರುವ ಇತರ ಸಂಸ್ಥೆಗಳೊಂದಿಗೆ ಸಮಾಲೋಚನೆಗೆ ಲಭ್ಯವಾಗತಕ್ಕದ್ದು;

(ii) ಮಂಜೂರು ಮಾಡಿದ ಅಥವಾ ಮಂಜೂರು ಮಾಡಬೇಕಾದ ಸಾಲಗಳ ಮತ್ತು ಮುಂಗಡಗಳ, ಖರೀದಿ ಮಾಡಿದ ಅಥವಾ ವಂತಿಗೆ ನೀಡಿದ ಅಥವಾ ಖರೀದಿ ಮಾಡಬೇಕಾದ ಅಥವಾ ವಂತಿಗೆ ನೀಡಬೇಕಾದ ಬಾಂಡುಗಳ ಅಥವಾ ಡಿಬೆಂಚರುಗಳ ಸಂಬಂಧದಲ್ಲಿ ಯಾವುದೇ ವ್ಯವಹಾರದ ವಹಿವಾಟಿನಲ್ಲಿ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ರಿಸರ್ವ್ ಬ್ಯಾಂಕಿನ ಪರವಾಗಿ ಏಜೆಂಟಾಗಿ ಕೆಲಸ ಮಾಡಬಹುದು.

(iii) ಗ್ರಾಮೀಣ ಬ್ಯಾಂಕಿಂಗ್, ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಕ್ಷೇತ್ರದಲ್ಲಿ ಅಧ್ಯಯನಗಳು, ಸಂಶೋಧನೆಗಳು, ತಾಂತ್ರಿಕ ಹಾಗೂ ಆರ್ಥಿಕ ಮತ್ತು ಇತರ ಸಮೀಕ್ಷೆಗಳೂ ಸೇರಿ ತರಬೇತಿ, ಮಾಹಿತಿ ಪ್ರಸಾರ ಮತ್ತು ಸಂಶೋಧನೆಗೆ ಉತ್ತೇಜನ ನೀಡುವುದಕ್ಕಾಗಿ ಸೌಲಭ್ಯಗಳನ್ನು ಒದಗಿಸಬಹುದು ಮತ್ತು ಸದರಿ ಉದ್ದೇಶಗಳಿಗಾಗಿ ಯಾವುದೇ ಸಂಸ್ಥೆಗೆ ಫೆಲೋಷಿಪ್‌ಗಳು ಮತ್ತು ವ್ಯಾಸಂಗ ಪೀಠ ಇವುಗಳಿಗೆ ಉಪಬಂಧ ಕಲ್ಪಿಸುವ ಮೂಲಕ ಅನುದಾನಗಳೂ ಒಳಗೊಂಡಂತೆ ಸಾಲಗಳನ್ನು ಅಥವಾ ಮುಂಗಡಗಳನ್ನು ಅಥವಾ ಅನುದಾನಗಳನ್ನು ನೀಡಬಹುದು.

(iv) ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿರುವ ಯಾರೇ ವ್ಯಕ್ತಿಗೆ ತಾಂತ್ರಿಕ, ಕಾನೂನು, ಹಣಕಾಸು, ಮಾರುಕಟ್ಟೆ ವ್ಯವಹಾರ ಮತ್ತು ಆಡಳಿತಾತ್ಮಕ ನೆರವನ್ನು ನೀಡಬಹುದು;

(v) ಭಾರತದ ಒಳಗೆ ಅಥವಾ ಭಾರತದ ಹೊರಗೆ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಇತರ ಸಂಬಂಧಿತ ವಿಷಯಗಳ ಕ್ಷೇತ್ರದಲ್ಲಿ, ಒಪ್ಪಬಹುದಾದಂಥ ನಿಬಂಧನೆಗಳ ಮೇಲೆ ಮತ್ತು ಅಂಥ ಪರಿಶ್ರಮ ಧನಕ್ಕೆ ಪ್ರತಿಯಾಗಿ, ಸಮಾಲೋಚನಾ ಸೇವೆಗಳನ್ನು ಒದಗಿಸಬಹುದು;

(vi) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ರಾಷ್ಟ್ರೀಯ ಬ್ಯಾಂಕಿಗೆ ವಹಿಸಲಾದ ಅಥವಾ ಅದಕ್ಕೆ ಅಗತ್ಯವಿರುವ ಪ್ರಕಾರ್ಯಗಳನ್ನು ನೆರವೇರಿಸಬಹುದು; ಮತ್ತು

(vii) ಕೇಂದ್ರ ಸರ್ಕಾರವು ಅಥವಾ ರಿಜರ್ವ್ ಬ್ಯಾಂಕ್ ಅಧಿಕೃತಗೊಳಿಸಬಹುದಾದಂಥ ಯಾವುದೇ ಇತರ ರೀತಿಯ ವ್ಯವಹಾರವನ್ನು ಮಾಡಬಹುದು ಅಥವಾ ಯಾವುದೇ ಇತರ ರೀತಿಯ ಚಟುವಟಿಕೆಯನ್ನು ಕೈಗೊಳ್ಳಬಹುದು.

**38ಎ. ಸಹಾಯಕ ಸಂಸ್ಥೆಗಳನ್ನು ಸಂವರ್ಧಿಸುವುದು.–** ರಾಷ್ಟ್ರೀಯ ಬ್ಯಾಂಕ್, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ಅದು ಯುಕ್ತವೆಂದು ಭಾವಿಸಬಹುದಾದಂಥ ಕಂಪನಿಗಳು, ಸಹಾಯಕ ಸಂಸ್ಥೆಗಳು, ಸಂಯೋಜಿತ ಸಂಸ್ಥೆಗಳು, ಸೊಸೈಟಿಗಳು, ನ್ಯಾಸಗಳು ಅಥವಾ ಅಂಥ ಇತರ ವ್ಯಕ್ತಿಗಳ ಸಂಘವನ್ನು ಸಂವರ್ಧಿಸಲು, ರಚಿಸಲು ಅಥವಾ ವ್ಯವಸ್ಥಾಪನೆ ಮಾಡಲು ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ, ಸ್ವತಃ ತಾನೇ ಸಂವರ್ಧಿಸಬಹುದು, ರಚಿಸಬಹುದು ಅಥವಾ ವ್ಯವಸ್ಥಾಪನೆ ಮಾಡಬಹುದು ಅಥವಾ ಸಹವರ್ತಿಯಾಗಬಹುದು.

**38ಬಿ. ಋಣದ ಭದ್ರತೀಕರಣ.–** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ರಾಷ್ಟ್ರೀಯ ಬ್ಯಾಂಕ್,–

(ಎ) ಒಂದು ಅಥವಾ ಹೆಚ್ಚು ನ್ಯಾಸಗಳನ್ನು ಸೃಜಿಸಬಹುದು ಮತ್ತು ಅದು ಅಂಥ ನ್ಯಾಸಗಳಿಗೆ ಭದ್ರತೆ ಸಹಿತ ಅಥವಾ ಭದ್ರತೆ ಇಲ್ಲದೆ ಮಂಜೂರು ಮಾಡಿದ ಸಾಲಗಳನ್ನು ಮತ್ತು ಮುಂಗಡಗಳನ್ನು ಪ್ರತಿಫಲಕ್ಕಾಗಿ ವರ್ಗಾವಣೆ ಮಾಡಬಹುದು;

(ಬಿ) ರಾಷ್ಟ್ರೀಯ ಬ್ಯಾಂಕ್ ಧಾರಣ ಮಾಡಿರುವ ಸಾಲಗಳನ್ನು ಮತ್ತು ಮುಂಗಡಗಳನ್ನು ರದ್ದುಗೊಳಿಸಬಹುದು ಮತ್ತು ಹಾಗೆ ರದ್ದುಗೊಳಿಸಿದ ಅಂಥ ಸಾಲಗಳ ಅಥವಾ ಮುಂಗಡಗಳ ಮೇಲೆ ಆಧಾರಿತವಾದ ಭದ್ರತಾ ಪತ್ರಗಳನ್ನು, ಋಣದ ಬಾಧ್ಯತೆಗಳ, ಪ್ರಯೋಜನಕಾರಿ ಹಿತಾಸಕ್ತಿಯ ನ್ಯಾಸ ಪ್ರಮಾಣ ಪತ್ರಗಳ ಅಥವಾ ಯಾವುದೇ ಹೆಸರಿನಿಂದ ಕರೆಯುವ ಇತರ ಲಿಖಿತಗಳ ಮೂಲಕ ಹೊರಡಿಸಬಹುದು ಮತ್ತು ಮಾರಾಟ ಮಾಡಬಹುದು ಮತ್ತು ಅಂಥ ಭದ್ರತಾ ಪತ್ರಗಳನ್ನು ಧಾರಣ ಮಾಡಿರುವವರ ಪರವಾಗಿ ನ್ಯಾಸಧಾರಿಯಾಗಿ ಕಾರ್ಯನಿರ್ವಹಿಸಬಹುದು.

**38ಸಿ. ಕಡ್ಡಾಯ ನೋಂದಣಿಯಿಂದ ವಿನಾಯಿತಿ.–** ನೋಂದಣಿ ಅಧಿನಿಯಮ, 1908 (1908ರ 16)ರ 17ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ,–

(ಎ) ರಾಷ್ಟ್ರೀಯ ಬ್ಯಾಂಕ್ ಹೊರಡಿಸಿದ ಋಣ ಬಾಧ್ಯತೆಗಳ ಅಥವಾ ಪ್ರಯೋಜನಕಾರಿ ಹಿತಾಸಕ್ತಿಯುಳ್ಳ ನ್ಯಾಸ ಪ್ರಮಾಣ ಪತ್ರಗಳ ಅಥವಾ ಯಾವುದೇ ಹೆಸರಿನಿಂದ ಕರೆದಿರುವ ಯಾವುದೇ ಇತರ ಲಿಖಿತವನ್ನು ಅಥವಾ ಅದು ಮಂಜೂರು ಮಾಡಿದ ಸಾಲಗಳ ಭದ್ರತೀಕರಣಕ್ಕಾಗಿ ಅದು ಸೃಜಿಸಿದ ಮತ್ತು ಸ್ಥಿರ ಸ್ವತ್ತಿಗೆ ಅಥವಾ ಸ್ಥಿರ ಸ್ವತ್ತಿನಲ್ಲಿ ಯಾವುದೇ ಹಕ್ಕನ್ನು, ಹಕ್ಕುಸ್ವಾಮ್ಯವನ್ನು ಅಥವಾ ಹಿತಾಸಕ್ತಿಯನ್ನು ಸೃಜಿಸದ, ಘೋಷಿಸದ, ಹಸ್ತಾಂತರಗೊಳಿಸದ, ಸೀಮಿತಗೊಳಿಸದ ಅಥವಾ ಅಂತ್ಯಗೊಳಿಸದ ನ್ಯಾಸವನ್ನು; ಅಥವಾ

(ಬಿ) (ಎ) ಖಂಡದಲ್ಲಿ ಉಲ್ಲೇಖಿಸಿದಂಥ ಲಿಖಿತದ ಯಾವುದೇ ವರ್ಗಾವಣೆಯನ್ನು

– ಕಡ್ಡಾಯವಾಗಿ ನೋಂದಣಿ ಮಾಡಿಸುವುದು ಅಗತ್ಯವಾಗಿರತಕ್ಕದ್ದಲ್ಲ.

**39. ಪ್ರಾಸಂಗಿಕ ಅಧಿಕಾರಗಳು.–** ರಾಷ್ಟ್ರೀಯ ಬ್ಯಾಂಕ್, ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ತನ್ನ ಅಧಿಕಾರಗಳ ಚಲಾವಣೆ, ತನ್ನ ಪ್ರಕಾರ್ಯಗಳ ನಿರ್ವಹಣೆ ಮತ್ತು ತನ್ನ ಕರ್ತವ್ಯಗಳ ನೆರವೇರಿಕೆ – ಇವುಗಳಿಗೆ ಅವಶ್ಯಕವಾಗಬಹುದಾದಂಥ ಅಥವಾ ಪ್ರಾಸಂಗಿಕವಾಗಬಹುದಾದಂಥ ಅಥವಾ ಆನುಷಂಗಿಕವಾಗಬಹುದಾದಂಥ ಎಲ್ಲಾ ಕಾರ್ಯಗಳನ್ನು ಸಹ ಮಾಡಬಹುದು.

**40. ಠೇವಣಿಗಳು ಮತ್ತು ಹೂಡಿಕೆಗಳು.–** (1) ರಾಷ್ಟ್ರೀಯ ಬ್ಯಾಂಕ್, ಕೇಂದ್ರ ಸರ್ಕಾರದ ಪ್ರಾಮಿಸರಿ ನೋಟುಗಳು, ಸ್ಟಾಕುಗಳು ಅಥವಾ ಭದ್ರತಾ ಪತ್ರಗಳಲ್ಲಿ ತನ್ನ ನಿಧಿಗಳನ್ನು ಹೂಡಬಹುದು ಅಥವಾ ರಿಸರ್ವ್ ಬ್ಯಾಂಕಿನಲ್ಲಿ ಅಥವಾ ರಿಸರ್ವ್ ಬ್ಯಾಂಕಿನ ಯಾವುದೇ ಏಜೆನ್ಸಿಯಲ್ಲಿ ಅಥವಾ ರಾಜ್ಯ ಸಹಕಾರ ಬ್ಯಾಂಕಿನಲ್ಲಿ ಅಥವಾ ಅನುಸೂಚಿತ ಬ್ಯಾಂಕಿನಲ್ಲಿ ಹಣವನ್ನು ಠೇವಣಿ ಇಡಬಹುದು.

(2) (1)ನೇ ಉಪಪ್ರಕರಣದಲ್ಲಿ ಅಥವಾ 30ಎ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ರಾಷ್ಟ್ರೀಯ ಬ್ಯಾಂಕ್, ಅದರ ಹೆಚ್ಚುವರಿ ನಿಧಿಗಳನ್ನು ಲಾಭದಾಯಕ ಹೂಡಿಕೆಗಾಗಿ, ಸದ್ಭಾವನಾಪೂರ್ವಕ ವ್ಯಾಪಾರ ಮತ್ತು ವಾಣಿಜ್ಯ ವ್ಯವಹಾರಗಳಿಂದ ಉದ್ಭವಿಸುವ ವಿನಿಮಯ ಪತ್ರಗಳ ಮೇಲೆ ಅಥವಾ ಪ್ರಾಮಿಸರಿ ನೋಟುಗಳ ಮೇಲೆ ಮರು ಸೋಡಿ ನೀಡಬಹುದು ಮತ್ತು ಅನುಸೂಚಿತ ಬ್ಯಾಂಕಿಗೆ ಅಥವಾ ರಿಸರ್ವ್ ಬ್ಯಾಂಕ್

ಅನುಮೋದಿಸಿದ ಯಾವುದೇ ಹಣಕಾಸು ಸಂಸ್ಥೆಗೆ ಕೇಳಿದ ಕೂಡಲೇ ಅಥವಾ ಅಲ್ಪಾವಧಿ ನೋಟೀಸು ನೀಡಿದ ಕೂಡಲೇ ಮರುಸಂದಾಯ ಮಾಡುವ ಆಧಾರದ ಮೇಲೆ ಸಾಲ ನೀಡಬಹುದು ಅಥವಾ ಮಂಡಲಿಯು ಅನುಮೋದಿಸಬಹುದಾದ ಠೇವಣಿ ಪ್ರಮಾಣ ಪತ್ರಗಳಲ್ಲಿ ಮತ್ತು ಇತರ ಲಿಖಿತಗಳಲ್ಲಿ ಅಥವಾ ಯೋಜನೆಗಳಲ್ಲಿ ಹೂಡಬಹುದು.

**41. ಸಾಲದ ಬಗ್ಗೆ ಮಾಹಿತಿ.–** ರಾಷ್ಟ್ರೀಯ ಬ್ಯಾಂಕ್, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಯ ಉದ್ದೇಶಕ್ಕಾಗಿ ಸಾಲದ ಬಗ್ಗೆ ಮಾಹಿತಿಯನ್ನು ಅಥವಾ ಇತರ ಮಾಹಿತಿಯನ್ನು, ಕೇಂದ್ರ ಸರ್ಕಾರ, ರಿಸರ್ವ್ ಬ್ಯಾಂಕ್ ಅಥವಾ ಯಾವುದೇ ಬ್ಯಾಂಕಿಂಗ್ ಕಂಪನಿ ಅಥವಾ ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂಥ ಇತರ ಹಣಕಾಸು ಸಂಸ್ಥೆ – ಇವುಗಳಿಂದ ಸಂಗ್ರಹಿಸಬಹುದು ಅಥವಾ ಇವುಗಳಿಗೆ ಒದಗಿಸಬಹುದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ "ಬ್ಯಾಂಕಿಂಗ್ ಕಂಪನಿ" ಮತ್ತು "ಸಾಲ ಮಾಹಿತಿ" ಎಂಬ ಪದಾವಳಿಗಳು ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ (1934ರ 2) 45ಎ ಪ್ರಕರಣದಲ್ಲಿರುವಂಥದೇ ಅರ್ಥವನ್ನು ಹೊಂದಿರತಕ್ಕದ್ದು.

## ಅಧ್ಯಾಯ – VIII

## ನಿಧಿಗಳು, ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ

**42. ರಾಷ್ಟ್ರೀಯ ಗ್ರಾಮೀಣ ಸಾಲ ನೀಡಿಕೆ (ದೀರ್ಘಾವಧಿ ಕಾರ್ಯಾಚರಣೆಗಳು) ನಿಧಿ.–** (1) ರಾಷ್ಟ್ರೀಯ ಬ್ಯಾಂಕ್, ರಾಷ್ಟ್ರೀಯ ಗ್ರಾಮೀಣ ಸಾಲ ನೀಡಿಕೆ (ದೀರ್ಘಾವಧಿ ಕಾರ್ಯಾಚರಣೆಗಳು) ನಿಧಿ ಎಂಬ ಹೆಸರಿನಿಂದ ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(2) ನಿಧಿಯು (18ನೇ ಪ್ರಕರಣದ ಮೇರೆಗೆ ವರ್ಗಾಯಿಸಲಾದ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಜೊತೆಗೆ) ಈ ಕೆಳಕಂಡವುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಕಾಲಕಾಲಕ್ಕೆ ಕೇಂದ್ರ ಸರ್ಕಾರವು ಮತ್ತು ರಾಜ್ಯ ಸರ್ಕಾರಗಳು ವಂತಿಗೆ ಕೊಡಬಹುದಾದಂಥ ಹಣದ ಮೊತ್ತಗಳು;

(ಬಿ) ಪ್ರತಿ ವರ್ಷ ರಿಸರ್ವ್ ಬ್ಯಾಂಕ್ ವಂತಿಗೆ ಕೊಡಬಹುದಾದಂಥ ಹಣದ ಮೊತ್ತಗಳು;

(ಸಿ) ಪ್ರತಿ ವರ್ಷ ಮಂಡಲಿಯು ವಂತಿಗೆ ಕೊಡಬಹುದಾದಂಥ ಹಣದ ಮೊತ್ತಗಳು.

(3) ರಾಷ್ಟ್ರೀಯ ಬ್ಯಾಂಕ್ ಸದರಿ ನಿಧಿಯ ಮೊಬಲಗನ್ನು 23ನೇ ಪ್ರಕರಣದ, 24ನೇ ಪ್ರಕರಣದ, 25ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ 27ನೇ ಪ್ರಕರಣದ ಮೇರೆಗೆ ಸಾಲಗಳ ಮತ್ತು ಮುಂಗಡಗಳ ಮೂಲಕ ಹಣಕಾಸು ನೆರವನ್ನು ಒದಗಿಸುವುದಕ್ಕಾಗಿ ಅಥವಾ 26ನೇ ಪ್ರಕರಣದ ಉದ್ದೇಶಗಳಿಗಾಗಿ ಮಾತ್ರ ವಿನಿಯೋಗಿಸತಕ್ಕದ್ದು.

**43. ರಾಷ್ಟ್ರೀಯ ಗ್ರಾಮೀಣ ಸಾಲ ನೀಡಿಕೆ (ಸ್ಥಿರೀಕರಣ) ನಿಧಿ.–** (1) ರಾಷ್ಟ್ರೀಯ ಬ್ಯಾಂಕ್, ರಾಷ್ಟ್ರೀಯ ಗ್ರಾಮೀಣ ಸಾಲ ನೀಡಿಕೆ (ಸ್ಥಿರೀಕರಣ) ನಿಧಿ ಎಂಬ ಹೆಸರಿನಿಂದ ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(2) ನಿಧಿಯು (18ನೇ ಪ್ರಕರಣದ ಮೇರೆಗೆ ವರ್ಗಾಯಿಸಲಾದ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಜೊತೆಗೆ) ಈ ಕೆಳಕಂಡವುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ವಂತಿಗೆ ಕೊಡಬಹುದಾದಂಥ ಹಣದ ಮೊತ್ತಗಳು;

(ಬಿ) ಪ್ರತಿ ವರ್ಷ ರಿಸರ್ವ್ ಬ್ಯಾಂಕ್ ವಂತಿಗೆ ಕೊಡಬಹುದಾದಂಥ ಹಣದ ಮೊತ್ತಗಳು;

(ಸಿ) ಪ್ರತಿ ವರ್ಷ ಮಂಡಲಿಯು ವಂತಿಗೆ ಕೊಡಬಹುದಾದಂಥ ಹಣದ ಮೊತ್ತಗಳು.

(3) ರಾಷ್ಟ್ರೀಯ ಬ್ಯಾಂಕ್ ಸದರಿ ನಿಧಿಯ ಮೊಬಲಗನ್ನು 22ನೇ ಪ್ರಕರಣದ ಮೇರೆಗೆ ಸಾಲಗಳು ಮತ್ತು ಮುಂಗಡಗಳನ್ನು ಒದಗಿಸಲು ಮಾತ್ರ ವಿನಿಯೋಗಿಸತಕ್ಕದ್ದು.

**44. ಸಂಶೋಧನಾ ಮತ್ತು ಅಭಿವೃದ್ಧಿ ನಿಧಿ.–** (1) ರಾಷ್ಟ್ರೀಯ ಬ್ಯಾಂಕ್ ಸಂಶೋಧನಾ ಮತ್ತು ಅಭಿವೃದ್ಧಿ ನಿಧಿ ಎಂಬ ಹೆಸರಿನಿಂದ ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು ಮತ್ತು ಅದಕ್ಕೆ ಈ ಮುಂದಿನವುಗಳನ್ನು ಜಮೆ ಮಾಡತಕ್ಕದ್ದು, ಎಂದರೆ:–

(ಎ) 47ನೇ ಪ್ರಕರಣದ ಅನುಸಾರ ಈ ನಿಧಿಗೆ ವರ್ಗಾಯಿಸಬಹುದಾದಂಥ ಹಣದ ಮೊತ್ತಗಳು;

(ಬಿ) ಪ್ರತಿ ವರ್ಷ ಮಂಡಲಿಯು ತನ್ನ ವಾರ್ಷಿಕ ಲಾಭಗಳಿಂದ ಈ ನಿಧಿಗೆ ವಂತಿಗೆ ಕೊಡಬಹುದಾದಂಥ ಹಣದ ಮೊತ್ತಗಳು; ಮತ್ತು

(ಸಿ) ರಾಷ್ಟ್ರೀಯ ಬ್ಯಾಂಕ್ ಸ್ವೀಕರಿಸಬಹುದಾದ ಮತ್ತು ಮಂಡಲಿಯು ಈ ಉದ್ದೇಶಕ್ಕಾಗಿ ಗೊತ್ತುಪಡಿಸಬಹುದಾದಂಥ ಕೊಡುಗೆಗಳು, ಅನುದಾನಗಳು, ದೇಣಿಗೆಗಳು ಅಥವಾ ಉಪಕಾರ ಧನಗಳು.

(2) ಸಂಶೋಧನಾ ಮತ್ತು ಅಭಿವೃದ್ಧಿ ನಿಧಿಯನ್ನು, ತರಬೇತಿ ಮತ್ತು ಸಂಶೋಧನಾ ಸೌಲಭ್ಯಗಳ ವ್ಯವಸ್ಥೆ ಮತ್ತು 38ನೇ ಪ್ರಕರಣದ (iii)ನೇ ಖಂಡದ ಮೇರೆಗೆ ಸಾಲಗಳ ಅಥವಾ ಮುಂಗಡಗಳ ಅಥವಾ ಅನುದಾನಗಳ ನೀಡಿಕೆ ಸೇರಿದಂತೆ, ಕೃಷಿ, ಕೃಷಿ ಕಾರ್ಯಾಚರಣೆಗಳು ಮತ್ತು ಗ್ರಾಮೀಣ ಅಭಿವೃದ್ಧಿ ಇವುಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳಿಗೆ ಖರ್ಚು ಮಾಡತಕ್ಕದ್ದು.

**45. ಮೀಸಲು ನಿಧಿ ಮತ್ತು ಇತರ ನಿಧಿಗಳು.–** ರಾಷ್ಟ್ರೀಯ ಬ್ಯಾಂಕ್ ತನ್ನ ವಾರ್ಷಿಕ ಲಾಭಗಳಿಂದ ಮತ್ತು ತಾನು ಸ್ವೀಕರಿಸಬಹುದಾದ ಕೊಡುಗೆಗಳು, ಅನುದಾನಗಳು, ದೇಣಿಗೆಗಳು ಅಥವಾ ಉಪಕಾರ ಧನಗಳಿಂದ ತಾನು ಸೂಕ್ತವೆಂದು ಭಾವಿಸಬಹುದಾದಂಥ ಮೊತ್ತಗಳನ್ನು ವರ್ಗಾಯಿಸುವ ಮೂಲಕ ಒಂದು ಮೀಸಲು ನಿಧಿಯನ್ನು ಮತ್ತು ಮಂಡಲಿಯು ಅವಶ್ಯವೆಂದು ಪರಿಗಣಿಸಬಹುದಾದ ಇತರ ನಿಧಿಗಳನ್ನು ಸ್ಥಾಪಿಸತಕ್ಕದ್ದು.

**46. ರಾಷ್ಟ್ರೀಯ ಬ್ಯಾಂಕಿನ ಜಮಾ-ಖರ್ಚು ಪಟ್ಟಿ ಮುಂತಾದವುಗಳನ್ನು ಸಿದ್ಧಪಡಿಸುವುದು.–** (1) ರಾಷ್ಟ್ರೀಯ ಬ್ಯಾಂಕಿನ ಜಮಾ-ಖರ್ಚು ಪಟ್ಟಿಯನ್ನು ಮತ್ತು ಲೆಕ್ಕಪತ್ರಗಳನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(2) ಮಂಡಲಿಯು, ಪ್ರತಿಯೊಂದು ವರ್ಷದಲ್ಲಿ ಜೂನ್ ಮೂವತ್ತನೇ ದಿನಾಂಕದಂದು ಇದ್ದಂತೆ ಅಥವಾ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಇತರ ದಿನಾಂಕದಂದು ಇದ್ದಂತೆ ರಾಷ್ಟ್ರೀಯ ಬ್ಯಾಂಕಿನ ಪುಸ್ತಕಗಳಲ್ಲಿ ಮತ್ತು ಲೆಕ್ಕಪತ್ರಗಳಲ್ಲಿ ಜಮಾ ಖರ್ಚನ್ನು ಸಮಗೊಳಿಸಿ ಮುಕ್ತಾಯಗೊಳಿಸುವಂತೆ ಮಾಡತಕ್ಕದ್ದು:

ಪರಂತು, ಈ ಉಪ-ಪ್ರಕರಣದ ಮೇರೆಗೆ ಲೆಕ್ಕದ ಅವಧಿಯನ್ನು ಲೆಕ್ಕದ ಮತ್ತೊಂದು ಅವಧಿಗೆ ಬದಲಾಯಿಸುವುದಕ್ಕೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ಸಂಬಂಧಪಟ್ಟ ವರ್ಷಗಳಿಗೆ ಸಂಬಂಧಿಸಿದ ಲೆಕ್ಕಪುಸ್ತಕಗಳಲ್ಲಿ ಮತ್ತು ಲೆಕ್ಕಪತ್ರಗಳಲ್ಲಿ ಜಮಾ ಖರ್ಚನ್ನು ಸಮಗೊಳಿಸಲು ಮತ್ತು ಮುಕ್ತಾಯಗೊಳಿಸಲು ತಾನು ಅವಶ್ಯವೆಂದು ಅಥವಾ ವಿಹಿತವೆಂದು ಪರಿಗಣಿಸಬಹುದಾದಂಥ ಉಪಬಂಧಗಳನ್ನು ರಚಿಸಬಹುದು.

**47. ಹೆಚ್ಚುವರಿಯ ವಿಲೆ.–** ವಸೂಲಾಗದ ಮತ್ತು ಸಂದೇಹಾಸ್ಪದವಾದ ಸಾಲಗಳು, ಆಸ್ತಿಗಳ ಸವಕಳಿ ಮತ್ತು ಉಪಬಂಧದ ಅಗತ್ಯವಿರುವ ಅಥವಾ ವಿಹಿತವಾಗಿರುವ ಎಲ್ಲ ಇತರ ವಿಷಯಗಳಿಗೆ ಅಥವಾ ಬ್ಯಾಂಕರುಗಳು ಸಾಮಾನ್ಯವಾಗಿ ಯಾವುದಕ್ಕೆ ಏರ್ಪಾಟು ಮಾಡಿರುವರೋ ಅದಕ್ಕೆ ಮತ್ತು 42, 43 ಮತ್ತು 45ನೇ ಪ್ರಕರಣಗಳಲ್ಲಿ ಉಲ್ಲೇಖಿಸಲಾದ ನಿಧಿಗಳಿಗೆ ಏರ್ಪಾಟು ಮಾಡಿದ ತರುವಾಯ ರಾಷ್ಟ್ರೀಯ ಬ್ಯಾಂಕ್,–

(i) ರಾಷ್ಟ್ರೀಯ ಬ್ಯಾಂಕ್ ಸ್ಥಾಪನೆಯಾದ ಲೆಕ್ಕದ ವರ್ಷದಿಂದ ಮುಂದಿನ ಹದಿನೈದು ವರ್ಷಗಳ ಅವಧಿಗೆ 44ನೇ ಪ್ರಕರಣದ ಮೇರೆಗೆ ಸಂಶೋಧನಾ ಮತ್ತು ಅಭಿವೃದ್ಧಿ ನಿಧಿಗೆ ಉಳಿದ ಮೊಬಲಗನ್ನು (ಇನ್ನು ಮುಂದೆ ಈ ಪ್ರಕರಣದಲ್ಲಿ ಹೆಚ್ಚುವರಿ ಎಂದು ಉಲ್ಲೇಖಿಸಲಾಗಿದೆ) ವರ್ಗಾಯಿಸತಕ್ಕದ್ದು; ಮತ್ತು

(ii) ಸದರಿ ಹದಿನೈದು ವರ್ಷಗಳ ಅವಧಿ ಮುಗಿದ ನಂತರ, ಮಂಡಲಿಯು, (i)ನೇ ಖಂಡದಲ್ಲಿ ಉಲ್ಲೇಖಿಸಲಾದ ನಿಧಿಗಾಗಿ ಏರ್ಪಾಟು ಮಾಡಿದ ತರುವಾಯ, ಹೆಚ್ಚುವರಿಯಾಗಿ ಉಳಿದುದನ್ನು ಮಂಡಲಿಯು ಅನುಮೋದಿಸಬಹುದಾದಂಥ ರೀತಿಯಲ್ಲಿ ಬಟವಾಡೆ ಮಾಡತಕ್ಕದ್ದು ಅಥವಾ ಖರ್ಚು ಮಾಡತಕ್ಕದ್ದು.

**48. ಲೆಕ್ಕಪರಿಶೋಧನೆ.**- (1) ಕಂಪನಿಗಳ ಅಧಿನಿಯಮ, 1956 (1956ರ 1)ರ 226ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಲೆಕ್ಕ ಪರಿಶೋಧಕರಾಗಿ ಕಾರ್ಯನಿರ್ವಹಿಸಲು ವಿಧ್ಯುಕ್ತವಾಗಿ ಅರ್ಹರಾದ ಲೆಕ್ಕಪರಿಶೋಧಕರು ರಾಷ್ಟ್ರೀಯ ಬ್ಯಾಂಕಿನ ಲೆಕ್ಕಪತ್ರಗಳನ್ನು ಪರಿಶೋಧಿಸತಕ್ಕದ್ದು ಮತ್ತು ಅವರನ್ನು ಕೇಂದ್ರ ಸರ್ಕಾರವು ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ ನಿಗದಿಪಡಿಸಬಹುದಾದಂಥ ಅವಧಿಗಾಗಿ ಮತ್ತು ಅಂಥ ಸಂಭಾವನೆಯ ಮೇಲೆ ನೇಮಿಸತಕ್ಕದ್ದು.

(2) ಲೆಕ್ಕ ಪರಿಶೋಧಕರಿಗೆ ರಾಷ್ಟ್ರೀಯ ಬ್ಯಾಂಕಿನ ವಾರ್ಷಿಕ ಜಮಾ-ಖರ್ಚು ಪಟ್ಟಿಯ ಒಂದು ಪ್ರತಿಯನ್ನು ಒದಗಿಸತಕ್ಕದ್ದು ಮತ್ತು ಅದಕ್ಕೆ ಸಂಬಂಧಪಟ್ಟ ಲೆಕ್ಕಪತ್ರಗಳು ಮತ್ತು ವೋಚರುಗಳ ಜೊತೆಗೆ ಅದನ್ನು ಪರೀಕ್ಷಿಸುವುದು ಅವರ ಕರ್ತವ್ಯವಾಗಿರತಕ್ಕದ್ದು ಮತ್ತು ರಾಷ್ಟ್ರೀಯ ಬ್ಯಾಂಕ್ ಅವರ ವಶಕ್ಕೆ ಕೊಟ್ಟ ಎಲ್ಲಾ ಪುಸ್ತಕಗಳ ಪಟ್ಟಿಯೊಂದನ್ನು ಅವರು ಹೊಂದಿರತಕ್ಕದ್ದು ಮತ್ತು ರಾಷ್ಟ್ರೀಯ ಬ್ಯಾಂಕಿನ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ವೋಚರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಎಲ್ಲಾ ಸೂಕ್ತ ಸಮಯದಲ್ಲಿ ನೋಡುವ ಅವಕಾಶ ಅವರಿಗೆ ಇರತಕ್ಕದ್ದು.

(3) ಲೆಕ್ಕ ಪರಿಶೋಧಕರು, ರಾಷ್ಟ್ರೀಯ ಬ್ಯಾಂಕಿನ ಲೆಕ್ಕಪತ್ರಗಳ ಸಂಬಂಧದಲ್ಲಿ ಮಂಡಲಿಯ ಯಾರೇ ನಿರ್ದೇಶಕನನ್ನು ಅಥವಾ ರಾಷ್ಟ್ರೀಯ ಬ್ಯಾಂಕಿನ ಯಾರೇ ಅಧಿಕಾರಿಯನ್ನು ಅಥವಾ ಇತರ ನೌಕರನನ್ನು ಪರೀಕ್ಷಿಸಬಹುದು ಮತ್ತು ಅವರು ತಮ್ಮ ಕರ್ತವ್ಯಗಳ ನಿರ್ವಹಣೆಗೆ ಅವಶ್ಯವೆಂದು ಆಲೋಚಿಸಬಹುದಾದಂಥ ಮಾಹಿತಿಯನ್ನು ಮತ್ತು ವಿವರಣೆಯನ್ನು ಒದಗಿಸುವಂತೆ ಮಂಡಲಿಯನ್ನು ಅಥವಾ ರಾಷ್ಟ್ರೀಯ ಬ್ಯಾಂಕಿನ ಅಧಿಕಾರಿಗಳನ್ನು ಅಥವಾ ನೌಕರರನ್ನು ಅಗತ್ಯಪಡಿಸಲು ಹಕ್ಕುಳ್ಳವರಾಗಿರತಕ್ಕದ್ದು.

(4) ಲೆಕ್ಕಪರಿಶೋಧಕರು, ತಾವು ಪರೀಕ್ಷಿಸಿದ ವಾರ್ಷಿಕ ಜಮಾ-ಖರ್ಚು ಪಟ್ಟಿಯನ್ನು ಮತ್ತು ಲೆಕ್ಕಪತ್ರಗಳನ್ನು ಕುರಿತು ರಾಷ್ಟ್ರೀಯ ಬ್ಯಾಂಕಿಗೆ ಒಂದು ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ಅಂಥ ಪ್ರತಿಯೊಂದು ವರದಿಯಲ್ಲಿ, ಅವರ ಅಭಿಪ್ರಾಯದಲ್ಲಿ ಜಮಾ-ಖರ್ಚು ಪಟ್ಟಿಯು ಎಲ್ಲಾ ಅವಶ್ಯಕ ವಿವರಗಳನ್ನು ಒಳಗೊಂಡ ಪೂರ್ಣ ಹಾಗೂ ನ್ಯಾಯ ಸಮ್ಮತ ಜಮಾ-ಖರ್ಚು ಪಟ್ಟಿಯಾಗಿದೆಯೇ ಮತ್ತು ರಾಷ್ಟ್ರೀಯ ಬ್ಯಾಂಕಿನ ವ್ಯವಹಾರಗಳ ಸ್ಥಿತಿಗತಿಯ ನಿಜವಾದ ಮತ್ತು ನ್ಯಾಯ ಸಮ್ಮತವಾದ ಚಿತ್ರಣವನ್ನು ತೋರಿಸುವ ರೀತಿಯಲ್ಲಿ ಯಥೋಚಿತವಾಗಿ ತಯಾರಿಸಲಾಗಿದೆಯೇ ಎಂಬುದನ್ನು ಮತ್ತು ಅವರು ಮಂಡಲಿಯಿಂದ ಅಥವಾ ರಾಷ್ಟ್ರೀಯ ಬ್ಯಾಂಕಿನ ಯಾರೇ ಅಧಿಕಾರಿಯಿಂದ ಅಥವಾ ಇತರ ನೌಕರನಿಂದ ಯಾವುದೇ ವಿವರಣೆ ಅಥವಾ ಮಾಹಿತಿಯನ್ನು ಕೇಳಿದ್ದ ಸಂದರ್ಭದಲ್ಲಿ ಅದನ್ನು ಕೊಡಲಾಗಿದೆಯೇ ಮತ್ತು ಅದು ತೃಪ್ತಿಕರವಾಗಿದೆಯೇ ಎಂಬುದನ್ನು ತಿಳಿಸತಕ್ಕದ್ದು.

(5) ರಾಷ್ಟ್ರೀಯ ಬ್ಯಾಂಕಿನ ವಾರ್ಷಿಕ ಲೆಕ್ಕಪತ್ರಗಳು ಅಂತ್ಯಗೊಂಡ ಮತ್ತು ಜಮಾ-ಖರ್ಚು ಪಟ್ಟಿಯನ್ನು ತಯಾರಿಸಿದ ದಿನಾಂಕದಿಂದ ನಾಲ್ಕು ತಿಂಗಳೊಳಗೆ ಆ ವರ್ಷದ ಲಾಭ ಮತ್ತು ನಷ್ಟದ ಲೆಕ್ಕದ ಪ್ರತಿಯೊಂದಿಗೆ ಆ ವರ್ಷಕ್ಕೆ ಅಂತ್ಯಗೊಂಡ ಜಮಾ-ಖರ್ಚು ಪಟ್ಟಿಯ ಒಂದು ಪ್ರತಿಯನ್ನು ಮತ್ತು ಲೆಕ್ಕಪರಿಶೋಧಕರ ವರದಿಯ ಒಂದು ಪ್ರತಿಯನ್ನು ಮತ್ತು ಸಂಬಂಧಪಟ್ಟ ವರ್ಷದಲ್ಲಿ ರಾಷ್ಟ್ರೀಯ ಬ್ಯಾಂಕಿನ ಕಾರ್ಯನಿರ್ವಹಣೆಯ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಮತ್ತು ರಿಸರ್ವ್ ಬ್ಯಾಂಕಿಗೆ ರಾಷ್ಟ್ರೀಯ ಬ್ಯಾಂಕ್ ಒದಗಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರವು ಅವುಗಳನ್ನು ಸ್ವೀಕರಿಸಿದ ತರುವಾಯ ಸಾಧ್ಯವಾಗಬಹುದಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇರಿಸತಕ್ಕದ್ದು ಮತ್ತು ಸದರಿ ಜಮಾ-ಖರ್ಚು ಪಟ್ಟಿ, ಲಾಭ ಮತ್ತು ನಷ್ಟದ ಲೆಕ್ಕ ಮತ್ತು ಲೆಕ್ಕ ಪರಿಶೋಧಕರ ವರದಿ-ಇವುಗಳ ಪ್ರತಿಗಳನ್ನು ರಾಜಪತ್ರದಲ್ಲಿ ಪ್ರಕಟವಾಗುವಂತೆ ಮಾಡತಕ್ಕದ್ದು.

(6) ಈ ಹಿಂದಿನ ಉಪಪ್ರಕರಣಗಳಲ್ಲಿ ಒಳಗೊಂಡಿರುವ ಯಾವುದಕ್ಕೂ ಬಾಧಕವಾಗದಂತೆ, ಕೇಂದ್ರ ಸರ್ಕಾರವು, ಯಾವುದೇ ಕಾಲದಲ್ಲಿ, ರಾಷ್ಟ್ರೀಯ ಬ್ಯಾಂಕಿನ ಲೆಕ್ಕಪತ್ರಗಳನ್ನು ಪರೀಕ್ಷಿಸಿ ವರದಿಮಾಡಲು ಭಾರತದ ಲೆಕ್ಕ ನಿಯಂತ್ರಕ ಹಾಗೂ ಮಹಾ ಲೆಕ್ಕಪರಿಶೋಧಕನನ್ನು ನೇಮಕ ಮಾಡಬಹುದು ಮತ್ತು ಅಂಥ ಪರೀಕ್ಷೆ ಮತ್ತು ವರದಿಯ ಸಂಬಂಧದಲ್ಲಿ ಭಾರತದ ಲೆಕ್ಕನಿಯಂತ್ರಕ ಹಾಗೂ ಮಹಾ ಲೆಕ್ಕಪರಿಶೋಧಕನು ವಹಿಸಿದ ಯಾವುದೇ ವೆಚ್ಚವನ್ನು ರಾಷ್ಟ್ರೀಯ ಬ್ಯಾಂಕ್ ಅವನಿಗೆ ಸಂದಾಯ ಮಾಡತಕ್ಕದ್ದು.

**49. ವಿವರ ಪಟ್ಟಿಕೆಗಳು.-** ರಾಷ್ಟ್ರೀಯ ಬ್ಯಾಂಕ್, ಕೇಂದ್ರ ಸರ್ಕಾರ ಅಥವಾ ರಿಸರ್ವ್ ಬ್ಯಾಂಕ್ ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ವಿವರ ಪಟ್ಟಿಕೆಗಳನ್ನು ಕೇಂದ್ರ ಸರ್ಕಾರಕ್ಕೆ ಮತ್ತು ರಿಸರ್ವ್ ಬ್ಯಾಂಕಿಗೆ ಒದಗಿಸತಕ್ಕದ್ದು.

## ಅಧ್ಯಾಯ - IX

### ಸಿಬ್ಬಂದಿ ವರ್ಗ

**50. ರಾಷ್ಟ್ರೀಯ ಬ್ಯಾಂಕಿನ ಸಿಬ್ಬಂದಿ ವರ್ಗ.-** (1) ರಾಷ್ಟ್ರೀಯ ಬ್ಯಾಂಕ್, ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಗೆ ತಾನು ಅವಶ್ಯವೆಂದು ಅಥವಾ ಅಪೇಕ್ಷಣೀಯವೆಂದು ಪರಿಗಣಿಸುವಷ್ಟು ಸಂಖ್ಯೆಯ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ನೇಮಕ ಮಾಡಿಕೊಳ್ಳಬಹುದು ಮತ್ತು ಅವರ ನೇಮಕದ ಮತ್ತು ಸೇವೆಯ ನಿಬಂಧನೆಗಳನ್ನು ಹಾಗೂ ಷರತ್ತುಗಳನ್ನು ನಿರ್ಧರಿಸಬಹುದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ರಾಷ್ಟ್ರೀಯ ಬ್ಯಾಂಕ್ ಮತ್ತು ರಿಸರ್ವ್ ಬ್ಯಾಂಕ್ ಪರಸ್ಪರ ಒಪ್ಪಿಕೊಳ್ಳಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ರಿಸರ್ವ್ ಬ್ಯಾಂಕಿನ ಅಂಥ ಸಿಬ್ಬಂದಿಯ ಸೇವೆಗಳನ್ನು ರಾಷ್ಟ್ರೀಯ ಬ್ಯಾಂಕ್ ಉಪಯೋಗಿಸಿಕೊಳ್ಳುವುದು ಮತ್ತು ಅದನ್ನು ರಿಸರ್ವ್ ಬ್ಯಾಂಕ್ ಲಭ್ಯವಾಗುವಂತೆ ಮಾಡುವುದು ಕಾನೂನುಸಮ್ಮತವಾಗಿರತಕ್ಕದ್ದು.

(3) (6)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಗೊತ್ತುಪಡಿಸಿದ ದಿನಾಂಕದಿಂದ ಆರು ತಿಂಗಳು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ರಿಸರ್ವ್ ಬ್ಯಾಂಕ್, ಸಾರ್ವಜನಿಕ ಹಿತದೃಷ್ಟಿಯಿಂದ ರಾಷ್ಟ್ರೀಯ ಬ್ಯಾಂಕ್ ತನ್ನ ದಕ್ಷ ಕಾರ್ಯನಿರ್ವಹಣೆಗೆ ಅಗತ್ಯವಾಗಬಹುದಾದ ಅದೇ ಸ್ವರೂಪದ ಅಥವಾ ಅಂಥದೇ ಸ್ವರೂಪದ ಕಾರ್ಯವನ್ನು ನಿರ್ವಹಿಸುವಲ್ಲಿ ತೊಡಗಿರುವವರೆಂದು ಅಥವಾ ತೊಡಗಲು ಸೂಕ್ತರಾದವರು ಎಂದು ರಿಸರ್ವ್ ಬ್ಯಾಂಕ್ ಪರಿಗಣಿಸುವ ರಿಸರ್ವ್ ಬ್ಯಾಂಕಿನ ಸಿಬ್ಬಂದಿ ಸದಸ್ಯರನ್ನು ರಾಷ್ಟ್ರೀಯ ಬ್ಯಾಂಕಿಗೆ ವರ್ಗಾಯಿಸಬಹುದು ಮತ್ತು ಹಾಗೆ ವರ್ಗಾವಣೆಯಾದ ಮೇಲೆ ಅವರನ್ನು, ಅಂಥ ವರ್ಗಾವಣೆಯ ದಿನಾಂಕದಿಂದ ಜಾರಿಗೆ ಬರುವಂತೆ (1)ನೇ ಉಪಪ್ರಕರಣದ ಮೇರೆಗೆ ಅವರನ್ನು ರಾಷ್ಟ್ರೀಯ ಬ್ಯಾಂಕ್ ನೇಮಕ ಮಾಡಿರುವುದಾಗಿ ಭಾವಿಸತಕ್ಕದ್ದು:

ಪರಂತು, ಹಾಗೆ ವರ್ಗಾವಣೆಯಾದ ಪ್ರತಿಯೊಬ್ಬ ವ್ಯಕ್ತಿಯು, ಗೊತ್ತುಪಡಿಸಿದ ದಿನಾಂಕದಿಂದ ಆರು ತಿಂಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಅಥವಾ ಅಂಥ ವರ್ಗಾವಣೆಯ ದಿನದಿಂದ ಮೂವತ್ತು ದಿವಸಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಇವುಗಳಲ್ಲಿ ಯಾವ ಅವಧಿಯು ಆನಂತರ ಮುಕ್ತಾಯವಾಗುವುದೋ ಅದಕ್ಕಿಂತ ಮುಂಚೆ ತಾನು ರಿಸರ್ವ್ ಬ್ಯಾಂಕಿಗೆ ಮರಳಿಹೋಗುವ ಬಗ್ಗೆ ಲಿಖಿತದಲ್ಲಿ ತನ್ನ ಆಯ್ಕೆಯನ್ನು ತಿಳಿಯಪಡಿಸುವ ಮೂಲಕ ಹಾಗೆ ಮರಳಿಹೋಗುವ ಆಯ್ಕೆ ಮಾಡಿಕೊಳ್ಳಬಹುದು ಮತ್ತು ಹಾಗೆ ಒಮ್ಮೆ ಚಲಾಯಿಸಿದ ಆಯ್ಕೆಯು ಅಂತಿಮವಾಗತಕ್ಕದ್ದು ಮತ್ತು ಅಂಥ ಆಯ್ಕೆಯನ್ನು ತಿಳಿಯಪಡಿಸಿದ ಮೇಲೆ ಗೊತ್ತುಪಡಿಸಿದ ದಿನಾಂಕದಿಂದ ಹದಿನೆಂಟು ತಿಂಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ರಿಸರ್ವ್ ಬ್ಯಾಂಕ್, ಸಿಬ್ಬಂದಿ ವರ್ಗದ ಅಂಥ ವ್ಯಕ್ತಿಯನ್ನು ಹಿಂಪಡೆದುಕೊಳ್ಳತಕ್ಕದ್ದು ಮತ್ತು ಅವನು ರಾಷ್ಟ್ರೀಯ ಬ್ಯಾಂಕಿನ ಸಿಬ್ಬಂದಿ ವರ್ಗದ ಒಬ್ಬ ಸದಸ್ಯನಾಗಿದ್ದ ಅವಧಿಯಲ್ಲಿ ರಾಷ್ಟ್ರೀಯ ಬ್ಯಾಂಕಿನಲ್ಲಿ ಪ್ರತಿನಿಯೋಜನೆಯಲ್ಲಿದ್ದುದಾಗಿ ಭಾವಿಸತಕ್ಕದ್ದು.

(4) (ಎ) (3)ನೇ ಉಪಪ್ರಕರಣದ ಮೇರೆಗೆ ನೇಮಕವಾಗಿರದ ರಿಸರ್ವ್ ಬ್ಯಾಂಕಿನ ಸಿಬ್ಬಂದಿ ವರ್ಗದ ಯಾರೇ ಸದಸ್ಯನು, ಅವನು ಹಾಗೆ ಇಷ್ಟಪಟ್ಟಲ್ಲಿ, ಗೊತ್ತುಪಡಿಸಿದ ದಿನಾಂಕದಿಂದ ಆರು ತಿಂಗಳ

ಅವಧಿಯೊಳಗೆ ತನ್ನನ್ನು ರಾಷ್ಟ್ರೀಯ ಬ್ಯಾಂಕಿನ ಸಿಬ್ಬಂದಿ ವರ್ಗದ ಸದಸ್ಯನನ್ನಾಗಿ ನೇಮಕ ಮಾಡಿಕೊಳ್ಳಲು ಪರಿಗಣಿಸಬೇಕೆಂದು ಕೋರಿ ರಿಸರ್ವ್ ಬ್ಯಾಂಕಿಗೆ ಅರ್ಜಿಯನ್ನು ಸಲ್ಲಿಸಬಹುದು.

(ಬಿ) ರಿಸರ್ವ್ ಬ್ಯಾಂಕ್, ರಾಷ್ಟ್ರೀಯ ಬ್ಯಾಂಕಿನೊಂದಿಗೆ ಸಮಾಲೋಚಿಸಿ, ಹಾಗೆ ಅರ್ಜಿ ಹಾಕಿದ ವ್ಯಕ್ತಿಯ ಅರ್ಹತೆಯನ್ನು, ರಾಷ್ಟ್ರೀಯ ಬ್ಯಾಂಕಿನಲ್ಲಿ ಖಾಲಿ ಹುದ್ದೆಗಳ ಲಭ್ಯತೆಯನ್ನು, ರಿಸರ್ವ್ ಬ್ಯಾಂಕ್ ಮತ್ತು ರಾಷ್ಟ್ರೀಯ ಬ್ಯಾಂಕಿನಲ್ಲಿನ ಸೇವೆಯ ಅಗತ್ಯತೆಯನ್ನು ಮತ್ತು ಈ ಸಂಬಂಧದಲ್ಲಿ ಸುಸಂಬದ್ಧವೆಂದು ಪರಿಗಣಿಸಬಹುದಾದಂಥ ಇತರ ಸಂಗತಿಗಳನ್ನು ಗಮನದಲ್ಲಿರಿಸಿಕೊಂಡು ಅಂಥ ಅರ್ಜಿಯನ್ನು ಪರಿಗಣಿಸಬಹುದು ಮತ್ತು ಈ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಅಂಥ ಅರ್ಜಿದಾರನು ಹಾಗೆ ನೇಮಕಗೊಳ್ಳಲು ಸೂಕ್ತನಾಗಿದ್ದಾನೆಂದು ರಿಸರ್ವ್‌ಬ್ಯಾಂಕಿಗೆ ಮನದಟ್ಟಾದರೆ, ಅವನ ನೇಮಕಕ್ಕಾಗಿ ಅದು ರಾಷ್ಟ್ರೀಯ ಬ್ಯಾಂಕಿಗೆ ಶಿಫಾರಸು ಮಾಡಬಹುದು.

(ಸಿ) ರಾಷ್ಟ್ರೀಯ ಬ್ಯಾಂಕ್ ಆ ತರುವಾಯ, ಗೊತ್ತುಪಡಿಸಿದ ದಿನಾಂಕದಿಂದ ಹದಿನೆಂಟು ತಿಂಗಳೊಳಗೆ ಈ ಉಪಪ್ರಕರಣದ ಮೇರೆಗೆ ಅರ್ಜಿ ಹಾಕಿಕೊಂಡಿರುವ ವ್ಯಕ್ತಿಯನ್ನು ರಾಷ್ಟ್ರೀಯ ಬ್ಯಾಂಕಿನ ಸಿಬ್ಬಂದಿ ವರ್ಗದ ಸದಸ್ಯನನ್ನಾಗಿ ನೇಮಕ ಮಾಡಿಕೊಳ್ಳಬಹುದು ಮತ್ತು ಅಂಥ ನೇಮಕದ ತರುವಾಯ, ಅಂಥ ವ್ಯಕ್ತಿಯನ್ನು (3)ನೇ ಉಪಪ್ರಕರಣದ ಮೇರೆಗೆ ರಾಷ್ಟ್ರೀಯ ಬ್ಯಾಂಕಿನಲ್ಲಿ ನೇಮಕ ಮಾಡಿಕೊಂಡಿರುವುದಾಗಿ ಭಾವಿಸತಕ್ಕದ್ದು:

ಪರಂತು, (3)ನೇ ಉಪಪ್ರಕರಣದ ಪರಂತುಕವು ಮತ್ತು (5)ನೇ ಉಪಪ್ರಕರಣದ ಪರಂತುಕವು ಅಂಥ ವ್ಯಕ್ತಿಯ ಸಂಬಂಧದಲ್ಲಿ ಅನ್ವಯವಾಗತಕ್ಕದ್ದಲ್ಲ.

(5) ಈ ಅಧಿನಿಯಮದಲ್ಲಿ ಬೇರೆಲ್ಲಾದರೂ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಯಾವುದೇ ಕರಾರಿನಲ್ಲಿ ಏನೇ ಒಳಗೊಂಡಿದ್ದರೂ, ಗೊತ್ತುಪಡಿಸಿದ ದಿನಾಂಕದಿಂದ ಆರು ತಿಂಗಳು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ರಿಸರ್ವ್ ಬ್ಯಾಂಕ್, ರಾಷ್ಟ್ರೀಯ ಬ್ಯಾಂಕಿನ ಹಿತದೃಷ್ಟಿಯಿಂದ ರಾಷ್ಟ್ರೀಯ ಬ್ಯಾಂಕಿನ ಸಿಬ್ಬಂದಿ ವರ್ಗದ ಯಾರೇ ಸದಸ್ಯನನ್ನು ಬಡ್ತಿಯ ಮೇಲೆ ರಿಸರ್ವ್ ಬ್ಯಾಂಕಿಗೆ ವರ್ಗಾವಣೆ ಮಾಡುವುದು ಅವಶ್ಯವೆಂದು ಪರಿಗಣಿಸಿದಲ್ಲಿ ಅದು ಹಾಗೆ ಮಾಡಬಹುದು ಮತ್ತು ರಿಸರ್ವ್ ಬ್ಯಾಂಕಿಗೆ ಹಾಗೆ ವರ್ಗಾವಣೆಯಾದ ತರುವಾಯ, ಸಿಬ್ಬಂದಿ ವರ್ಗದ ಅಂಥ ಪ್ರತಿಯೊಬ್ಬ ಸದಸ್ಯನನ್ನು ರಿಸರ್ವ್ ಬ್ಯಾಂಕಿನ ಸಿಬ್ಬಂದಿ ವರ್ಗದ ಒಬ್ಬ ಸದಸ್ಯನೆಂಬುದಾಗಿ ಭಾವಿಸತಕ್ಕದ್ದು ಮತ್ತು ಅಂಥ ಬಡ್ತಿಯಿಂದ ನೇರವಾಗಿ ಉಂಟಾಗುವ ಯಾವುವೇ ಪ್ರಯೋಜನಗಳಿದ್ದರೆ ಅವುಗಳೂ ಸೇರಿ ಅಂಥ ವರ್ಗಾವಣೆಯ ನಿಕಟಪೂರ್ವದಲ್ಲಿ ಅವನು ಹಕ್ಕುಳ್ಳವನಾಗಿದ್ದಂಥ ಅದೇ ಸಂಬಳ, ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳಿಗೆ ಅವನು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಮೇಲೆ ಹೇಳಿದಂತೆ ವರ್ಗಾವಣೆಯಾದ ಸಿಬ್ಬಂದಿ ವರ್ಗದ ಪ್ರತಿಯೊಬ್ಬ ಸದಸ್ಯನು, ಗೊತ್ತುಪಡಿಸಿದ ದಿನಾಂಕದಿಂದ ಆರು ತಿಂಗಳ ಅವಧಿ ಮುಕ್ತಾಯವಾಗುವುದಕ್ಕೆ ಮುಂಚೆ ಅಥವಾ ಅಂಥ ವರ್ಗಾವಣೆಯಾದ ಮೂವತ್ತು ದಿವಸಗಳೊಳಗೆ ಈ ಎರಡೂ ಅವಧಿಗಳಲ್ಲಿ ಯಾವುದು ಅನಂತರದ್ದೋ ಆ ಅವಧಿಗೆ ಮುಂಚೆ, ತಾನು ರಾಷ್ಟ್ರಿಯ ಬ್ಯಾಂಕಿಗೆ ಮರಳಿಹೋಗುವ ಬಗ್ಗೆ ಲಿಖಿತದಲ್ಲಿ ತನ್ನ ಆಯ್ಕೆಯ ಅವಕಾಶವನ್ನು ತಿಳಿಸುವ ಮೂಲಕ ಹಾಗೆ ಮರಳಿಹೋಗುವ ಆಯ್ಕೆ ಮಾಡಿಕೊಳ್ಳಬಹುದು ಮತ್ತು ಹಾಗೆ ಒಮ್ಮೆ ಮಾಡಿಕೊಂಡ ಆಯ್ಕೆಯು ಅಂತಿಮವಾಗಿರತಕ್ಕದ್ದು ಮತ್ತು ಅಂಥ ಆಯ್ಕೆಯನ್ನು ತಿಳಿಯಪಡಿಸಿದ ಮೇಲೆ, ಗೊತ್ತುಪಡಿಸಿದ ದಿನಾಂಕದಿಂದ ಹದಿನೆಂಟು ತಿಂಗಳ ಅವಧಿ ಮುಕ್ತಾಯವಾಗುವುದಕ್ಕೆ ಮುಂಚೆ ಸಿಬ್ಬಂದಿ ವರ್ಗದ ಅಂಥ ಸದಸ್ಯನನ್ನು ರಾಷ್ಟ್ರೀಯ ಬ್ಯಾಂಕ್ ಹಿಂದಕ್ಕೆ ಕರೆಸಿಕೊಳ್ಳತಕ್ಕದ್ದು ಮತ್ತು ಅವನು, ರಿಸರ್ವ್ ಬ್ಯಾಂಕಿನ ಸಿಬ್ಬಂದಿ ವರ್ಗದ ಒಬ್ಬ ಸದಸ್ಯನಾಗಿದ್ದ ಅವಧಿಯಲ್ಲಿ ರಿಸರ್ವ್ ಬ್ಯಾಂಕಿನಲ್ಲಿ ಪ್ರತಿನಿಯೋಜನೆಯಲ್ಲಿದ್ದುದಾಗಿ ಭಾವಿಸತಕ್ಕದ್ದು.

(6) ಅಂಥ ಪ್ರತಿಯೊಬ್ಬ ವ್ಯಕ್ತಿಯನ್ನು,–

(ಎ) ಅವನು 16ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಿದ ದಿನಾಂಕದ ನಿಕಟಪೂರ್ವದಲ್ಲಿ, ಕೃಷಿ ಪುನರ್‌ವಿತ್ತೀಯ ಮತ್ತು ಅಭಿವೃದ್ಧಿ ನಿಗಮದ ಸಿಬ್ಬಂದಿ ವರ್ಗದ ಸದಸ್ಯನಾಗಿರುವಲ್ಲಿ; ಅಥವಾ

(ಬಿ) ಅವನು ರಿಸರ್ವ್ ಬ್ಯಾಂಕಿನ ಸಿಬ್ಬಂದಿ ವರ್ಗದ ಸದಸ್ಯನಾಗಿದ್ದು, ಸದರಿ ನಿಗಮವು ಆ ದಿನಾಂಕದ ನಿಕಟಪೂರ್ವದಲ್ಲಿ ಅವನ ಸೇವೆಯನ್ನು ಉಪಯೋಗಿಸಿಕೊಳ್ಳುತ್ತಿರುವಲ್ಲಿ

- ಸದರಿ ದಿನಾಂಕದಂದು (1)ನೇ ಉಪಪ್ರಕರಣದ ಮೇರೆಗೆ ರಾಷ್ಟ್ರೀಯ ಬ್ಯಾಂಕ್ ನೇಮಕ ಮಾಡಿಕೊಂಡಿರುವುದಾಗಿ ಭಾವಿಸತಕ್ಕದ್ದು:

ಪರಂತು, ನೇಮಕಗೊಂಡಿರುವುದಾಗಿ ಹಾಗೆ ಭಾವಿಸಲಾದ ಮತ್ತು ಕೃಷಿ ಪುನರ್‌ವಿತ್ತೀಯ ಮತ್ತು ಅಭಿವೃದ್ಧಿ ನಿಗಮದಲ್ಲಿ ಉಪಯೋಗಕ್ಕಾಗಿ ನಿರ್ದಿಷ್ಟವಾಗಿ ನೇಮಕವಾಗಿಲ್ಲದ ರಿಸರ್ವ್ ಬ್ಯಾಂಕಿನ ಸಿಬ್ಬಂದಿಯ ಪ್ರತಿಯೊಬ್ಬ ಸದಸ್ಯನು ಗೊತ್ತುಪಡಿಸಿದ ದಿನಾಂಕದಿಂದ ಆರು ತಿಂಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ಅಥವಾ 16ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಿದ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯ ಒಳಗೆ - ಈ ಅವಧಿಗಳಲ್ಲಿ ಯಾವುದು ನಂತರ ಮುಕ್ತಾಯವಾಗುವುದೋ ಆ ಅವಧಿಗೆ ಮುಂಚೆ ತಾನು ರಿಸರ್ವ್ ಬ್ಯಾಂಕಿಗೆ ಮರಳಿ ಹೋಗುವ ಆಯ್ಕೆ ಮಾಡಿಕೊಳ್ಳಬಹುದು ಮತ್ತು ತಾನು ರಿಸರ್ವ್ ಬ್ಯಾಂಕಿಗೆ ಮರಳಿ ಹೋಗುವ ಬಗ್ಗೆ ಲಿಖಿತದಲ್ಲಿ ತನ್ನ ಆಯ್ಕೆಯ ಅವಕಾಶವನ್ನು ತಿಳಿಯಪಡಿಸುವ ಮೂಲಕ ಹಾಗೆ ಮರಳಿ ಹೋಗುವ ಆಯ್ಕೆ ಮಾಡಿಕೊಳ್ಳಬಹುದು ಮತ್ತು ಹಾಗೆ ಒಮ್ಮೆ ಮಾಡಿಕೊಂಡ ಆಯ್ಕೆಯು ಅಂತಿಮವಾಗಿರತಕ್ಕದ್ದು ಮತ್ತು ಅಂಥ ಆಯ್ಕೆಯನ್ನು ತಿಳಿಯಪಡಿಸಿದ ಮೇಲೆ, ಗೊತ್ತುಪಡಿಸಿದ ದಿನಾಂಕದಿಂದ ಹದಿನೆಂಟು ತಿಂಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಸಿಬ್ಬಂದಿ ವರ್ಗದ ಅಂಥ ಸದಸ್ಯನನ್ನು ರಿಸರ್ವ್ ಬ್ಯಾಂಕ್ ಹಿಂದಕ್ಕೆ ಕರೆಸಿಕೊಳ್ಳತಕ್ಕದ್ದು ಮತ್ತು ಅವನು ರಾಷ್ಟ್ರೀಯ ಬ್ಯಾಂಕಿನ ಸಿಬ್ಬಂದಿ ವರ್ಗದ ಒಬ್ಬ ಸದಸ್ಯನಾಗಿದ್ದ ಅವಧಿಯಲ್ಲಿ ರಾಷ್ಟ್ರೀಯ ಬ್ಯಾಂಕಿನಲ್ಲಿ ಪ್ರತಿನಿಯೋಜನೆಯಲ್ಲಿದ್ದುದಾಗಿ ಭಾವಿಸತಕ್ಕದ್ದು.

(7) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಯಾವುದೇ ಒಪ್ಪಂದದಲ್ಲಿ ಏನೇ ಒಳಗೊಂಡಿದ್ದರೂ, ಸಿಬ್ಬಂದಿ ವರ್ಗದ ಯಾರೇ ಸದಸ್ಯನು ಅವನ ವರ್ಗಾವಣೆ, ನೇಮಕಾತಿ ಅಥವಾ ಸಂದರ್ಭಾನುಸಾರ, (3) ರಿಂದ (6)ನೇ ಉಪಪ್ರಕರಣಗಳ ಮೇರೆಗೆ ವಾಪಸಾತಿ - ಇವುಗಳಿಗಾಗಿ ಅಥವಾ ಇವುಗಳ ಸಂಬಂಧದಲ್ಲಿ ಯಾವುದೇ ನಷ್ಟ ಪರಿಹಾರ ಕ್ಲೇಮು ಮಾಡುವುದಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ ಮತ್ತು ಆ ಸಂಬಂಧದಲ್ಲಿನ ಯಾವುದೇ ಕ್ಲೇಮನ್ನು ಯಾವುದೇ ನ್ಯಾಯಾಲಯವು, ನ್ಯಾಯ ಮಂಡಲಿಯು ಅಥವಾ ಇತರ ಪ್ರಾಧಿಕಾರವು ಪುರಸ್ಕರಿಸತಕ್ಕದ್ದಲ್ಲ.

(8) (10)ನೇ ಉಪಪ್ರಕರಣದ ಮತ್ತು (11)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಈ ಪ್ರಕರಣದ ಮೇರೆಗೆ ರಾಷ್ಟ್ರೀಯ ಬ್ಯಾಂಕಿನ ಸಿಬ್ಬಂದಿ ವರ್ಗದ ಸದಸ್ಯನಾಗಿ ನೇಮಕಗೊಂಡಿರುವುದಾಗಿ ಭಾವಿಸಲಾಗಿರುವ ಕೃಷಿ ಪುನರ್‌ವಿತ್ತೀಯ ಮತ್ತು ಅಭಿವೃದ್ಧಿ ನಿಗಮದ ಅಥವಾ ರಿಸರ್ವ್ ಬ್ಯಾಂಕಿನ ಸಿಬ್ಬಂದಿ ವರ್ಗದ ಪ್ರತಿಯೊಬ್ಬ ಸದಸ್ಯನು, ರಾಷ್ಟ್ರೀಯ ಬ್ಯಾಂಕಿನಲ್ಲಿ ಅವನ ನೇಮಕದ ನಿಕಟಪೂರ್ವದಲ್ಲಿ ಅವನು ಪಡೆಯಲು ಹಕ್ಕುಳ್ಳವನಾಗಿದ್ದಂಥ ಅದೇ ಸಂಬಳ, ಉಪಲಬ್ಧಿಗಳು ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ರಾಷ್ಟ್ರೀಯ ಬ್ಯಾಂಕ್ ಅವನನ್ನು ನೇಮಕ ಮಾಡಿಕೊಂಡಿರುವುದಾಗಿ ಭಾವಿಸತಕ್ಕದ್ದು.

(9) ವಯೋನಿವೃತ್ತಿ ಸೌಲಭ್ಯಗಳಿಗೆ ಸಂಬಂಧಪಟ್ಟ ಉಪಬಂಧಗಳು ಎಂದರೆ, ಭವಿಷ್ಯ ನಿಧಿಗೆ ಸಂಬಂಧಿಸಿದ ವಿನಿಯಮನಗಳು ಮತ್ತು ಉಪದಾನದ ಮತ್ತು ಅನುಕಂಪ ಉಪದಾನದ ಸಂದಾಯಕ್ಕೆ ಸಂಬಂಧಪಟ್ಟ ನಿಯಮಗಳು ಮತ್ತು ಗೊತ್ತುಪಡಿಸಿದ ದಿನದಂದು ರಿಸರ್ವ್ ಬ್ಯಾಂಕಿನ ಸಿಬ್ಬಂದಿ ವರ್ಗಕ್ಕೆ ಅನ್ವಯವಾಗುವಂಥ ವಯೋನಿವೃತ್ತಿಗೆ ಸಂಬಂಧಿಸಿದ ಯಾವುದೇ ಇತರ ಉಪಬಂಧ - ಇವು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ರಾಷ್ಟ್ರೀಯ ಬ್ಯಾಂಕ್ ಅದನ್ನು ಮಾರ್ಪಾಟುಗೊಳಿಸುವ ಅಥವಾ ತಿದ್ದುಪಡಿ ಮಾಡುವ ಹೊರತು ಮತ್ತು ಅಲ್ಲಿಯವರೆಗೆ ರಾಷ್ಟ್ರೀಯ ಬ್ಯಾಂಕಿನ ಸಿಬ್ಬಂದಿ ವರ್ಗಕ್ಕೆ ಅನ್ವಯವಾಗತಕ್ಕದ್ದು:

ಪರಂತು, ಗೊತ್ತುಪಡಿಸಿದ ದಿನದ ತರುವಾಯ, ರಾಷ್ಟ್ರೀಯ ಬ್ಯಾಂಕ್ ಭವಿಷ್ಯ ನಿಧಿ ವಿನಿಯಮನಗಳಿಗೆ ಸಂಬಂಧಿಸಿ 60ನೇ ಪ್ರಕರಣದ ಅನುಸಾರವಾಗಿ ಮತ್ತು ಇತರ ನಿಯಮಗಳಿಗೆ ಸಂಬಂಧಿಸಿ ಈ ಉಪಪ್ರಕರಣವು ಇಲ್ಲದಿರುತ್ತಿದ್ದರೆ ಯಾವ ರೀತಿಯಲ್ಲಿ ಮಾರ್ಪಾಟು ಅಥವಾ ತಿದ್ದುಪಡಿ ಮಾಡಲಾಗುತ್ತಿತ್ತೋ ಆ ರೀತಿಯಲ್ಲಿ ಅಂಥ ಮಾರ್ಪಾಟನ್ನು ಅಥವಾ ತಿದ್ದುಪಡಿಯನ್ನು ಮಾಡಬಹುದು:

ಮತ್ತೂ ಪರಂತು, ಗೊತ್ತುಪಡಿಸಿದ ದಿನದಿಂದ ಆರು ತಿಂಗಳ ಅವಧಿಯು ಮುಕ್ತಾಯಗೊಂಡ ತರುವಾಯ, ರಿಸರ್ವ್ ಬ್ಯಾಂಕಿನ ಸಿಬ್ಬಂದಿ ವರ್ಗದ ಯಾವ ಸದಸ್ಯನ ಸೇವೆಗಳನ್ನು ಈ ಪ್ರಕರಣದ ಮೇರೆಗೆ ರಾಷ್ಟ್ರೀಯ ಬ್ಯಾಂಕಿಗೆ ವರ್ಗಾಯಿಸಲಾಗಿದೆಯೋ ಮತ್ತು ಯಾರು ರಿಸರ್ವ್ ಬ್ಯಾಂಕಿಗೆ ಮರಳಿ ಹೋಗುವ ಆಯ್ಕೆಯನ್ನು ಮಾಡಿಕೊಳ್ಳುವುದಿಲ್ಲವೋ ಆ ಯಾರೇ ಸದಸ್ಯನ ಲೆಕ್ಕದಲ್ಲಿರುವ ಭಾರತ ರಿಸರ್ವ್ ಬ್ಯಾಂಕಿನ ನೌಕರರ ಭವಿಷ್ಯ ನಿಧಿಯಲ್ಲಿ ಇರುವ ಶಿಲ್ಕುಗಳನ್ನು, ಯಾವ ನಿಬಂಧನೆಗಳಿಗೆ ಒಳಪಟ್ಟು ಈ ಮುಂಚೆ ಭಾರತ ರಿಸರ್ವ್ ಬ್ಯಾಂಕಿನ ನೌಕರರ ಭವಿಷ್ಯ ನಿಧಿಯಲ್ಲಿ ಧಾರಣ ಮಾಡಲಾಗಿತ್ತೋ ಅವೇ ಅಥವಾ ಅಂಥವೇ ನಿಬಂಧನೆಗಳಿಗೆ ಒಳಪಟ್ಟು ರಾಷ್ಟ್ರೀಯ ಬ್ಯಾಂಕಿನ ಭವಿಷ್ಯ ನಿಧಿಗೆ ವರ್ಗಾಯಿಸತಕ್ಕದ್ದು ಮತ್ತು ಅದರಲ್ಲಿ ಹೊಂದಿರತಕ್ಕದ್ದು.

(10) ಯಾವುದೇ ಇತರ ಕಾನೂನಿನಲ್ಲಿ, ಇತ್ಯರ್ಥದಲ್ಲಿ ಅಥವಾ ಒಪ್ಪಂದದಲ್ಲಿ ಏನೇ ಒಳಗೊಂಡಿದ್ದರೂ, ರಾಷ್ಟ್ರೀಯ ಬ್ಯಾಂಕ್ ನಿಯೋಜಿಸಿಕೊಂಡಿರುವ ಅಥವಾ ಯಾರ ಸೇವೆಗಳನ್ನು ಈ ಅಧಿನಿಯಮದ ಮೇರೆಗೆ ರಾಷ್ಟ್ರೀಯ ಬ್ಯಾಂಕಿಗೆ ವರ್ಗಾಯಿಸಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು ಭಾರತದಲ್ಲಿ ಎಲ್ಲಿಯೇ ಆಗಲಿ ಸೇವೆ ಸಲ್ಲಿಸಲು ಬದ್ಧನಾಗಿರತಕ್ಕದ್ದು.

(11) ಕೈಗಾರಿಕಾ ವಿವಾದಗಳ ಅಧಿನಿಯಮ, 1947 ರಲ್ಲಿ (1947ರ 14) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಯಾವುದೇ ಕೈಗಾರಿಕಾ ನ್ಯಾಯ ಮಂಡಲಿ, ನ್ಯಾಯಾಲಯ ಅಥವಾ ಇತರ ಪ್ರಾಧಿಕಾರದ ಯಾವುದೇ ಐತೀರ್ಪು, ತೀರ್ಪು, ಡಿಕ್ರಿ, ತೀರ್ಮಾನ ಅಥವಾ ಆದೇಶದಲ್ಲಿ ಅಥವಾ ಈ ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯ ಸೇವೆಯನ್ನು ರಾಷ್ಟ್ರೀಯ ಬ್ಯಾಂಕಿಗೆ ವರ್ಗಾಯಿಸಿದ ದಿನಾಂಕಕ್ಕೆ ಮೊದಲು ಮಾಡಿಕೊಂಡ ಇತ್ಯರ್ಥದಲ್ಲಿ ಅಥವಾ ಒಪ್ಪಂದದಲ್ಲಿ ಏನೇ ಒಳಗೊಂಡಿದ್ದರೂ ರಾಷ್ಟ್ರೀಯ ಬ್ಯಾಂಕ್, ತಾನು ಅವಶ್ಯವೆಂದು ಪರಿಗಣಿಸಬಹುದಾದಂಥ ರೀತಿಯಲ್ಲಿ ಮತ್ತು ಅಷ್ಟರ ಮಟ್ಟಿಗೆ, ಯಾರ ಸೇವೆಗಳನ್ನು ರಾಷ್ಟ್ರೀಯ ಬ್ಯಾಂಕಿಗೆ ಹಾಗೆ ವರ್ಗಾಯಿಸಲಾಗಿದೆಯೋ ಮತ್ತು ಯಾರನ್ನು ಈ ಪ್ರಕರಣದ ಮೇರೆಗೆ ರಾಷ್ಟ್ರೀಯ ಬ್ಯಾಂಕಿನಲ್ಲಿ ನೇಮಕ ಮಾಡಲಾಗಿದೆಯೋ ಅಂಥ ವ್ಯಕ್ತಿಗಳಿಗೆ ಅನ್ವಯವಾಗುವಂಥ ಸೇವಾ ನಿಬಂಧನೆಗಳಲ್ಲಿ ಮತ್ತು ಷರತ್ತುಗಳಲ್ಲಿ ಯಾವುವನ್ನಾದರೂ ಮಾರ್ಪಾಟು ಮಾಡಲು, ತಿದ್ದುಪಡಿಮಾಡಲು ಅಥವಾ ನಿರಸನಗೊಳಿಸಲು ರಾಷ್ಟ್ರೀಯ ಬ್ಯಾಂಕಿಗೆ ಮುಕ್ತ ಅವಕಾಶವಿರತಕ್ಕದ್ದು:
ಪರಂತು, ರಾಷ್ಟ್ರೀಯ ಬ್ಯಾಂಕ್ ಅವರ ಸಂಬಳ ಮತ್ತು ಇತರ ಉಪಲಬ್ಧಿಗಳ ಸಂದಾಯ, ನಿವೃತ್ತಿ ಪ್ರಯೋಜನಗಳು, ರಜಾ ಹಕ್ಕು ಇವುಗಳಿಗೆ ಸಂಬಂಧಿಸಿದಂಥ ನಿಬಂಧನೆಗಳನ್ನು ಅವರಿಗೆ ಪ್ರತಿಕೂಲವಾಗುವಂತೆ ಮಾರ್ಪಾಟು ಮಾಡತಕ್ಕದ್ದಲ್ಲ.

**ವಿವರಣೆ:-** ಈ ಪ್ರಕರಣದ ಉದ್ದೇಶಗಳಿಗಾಗಿ "ಗೊತ್ತುಪಡಿಸಿದ ದಿನ" ಎಂದರೆ 3ನೇ ಪ್ರಕರಣದ ಮೇರೆಗೆ ರಾಷ್ಟ್ರೀಯ ಬ್ಯಾಂಕಿನ ಸ್ಥಾಪನೆಯ ದಿನಾಂಕ ಎಂದು ಅರ್ಥ.

## ಅಧ್ಯಾಯ – X

### ಸಂಕೀರ್ಣ

**51. ನಿಷ್ಠೆ ಮತ್ತು ಗೋಪ್ಯತೆಗಳ ಬಗೆಗೆ ಬಾಧ್ಯತೆ.-** (1) ಈ ಅಧಿನಿಯಮವು ಅಥವಾ ಯಾವುದೇ ಇತರ ಕಾನೂನು ಅನ್ಯಥಾ ಅಗತ್ಯಪಡಿಸಿದ ಹೊರತು, ರಾಷ್ಟ್ರೀಯ ಬ್ಯಾಂಕ್, ತನ್ನ ಘಟಕಗಳಿಗೆ ಸಂಬಂಧಿಸಿದ ಅಥವಾ ಅವುಗಳ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಕಾನೂನಿಗೆ ಅಥವಾ ಬ್ಯಾಂಕರುಗಳಲ್ಲಿ ರೂಢಿಗತವಾಗಿರುವ ಪದ್ಧತಿಗೆ ಮತ್ತು ಆಚರಣೆಗೆ ಅನುಸಾರವಾಗಿ, ಯಾವ ಸಂದರ್ಭದಲ್ಲಿ ಅಂಥ ಮಾಹಿತಿಯನ್ನು ಬಹಿರಂಗಪಡಿಸುವುದು ಅವಶ್ಯಕವೆಂದು ಅಥವಾ ಯುಕ್ತವೆಂದು ರಾಷ್ಟ್ರೀಯ ಬ್ಯಾಂಕಿಗೆ ತೋರುವುದೋ ಅಂಥ ಸಂದರ್ಭದಲ್ಲಿ ಹೊರತು ಬಹಿರಂಗಪಡಿಸತಕ್ಕದ್ದಲ್ಲ.

(2) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾರ ಸೇವೆಗಳನ್ನು ರಾಷ್ಟ್ರೀಯ ಬ್ಯಾಂಕ್ ಉಪಯೋಗಿಸಿಕೊಳ್ಳುವುದೋ, ರಾಷ್ಟ್ರೀಯ ಬ್ಯಾಂಕಿನ ಅಥವಾ ರಿಸರ್ವ್ ಬ್ಯಾಂಕಿನ ಅಂಥ ಪ್ರತಿಯೊಬ್ಬ ನಿರ್ದೇಶಕನು, ಸಮಿತಿಯ ಸದಸ್ಯನು, ಲೆಕ್ಕಪರಿಶೋಧಕನು, ಅಧಿಕಾರಿಯು ಅಥವಾ ಇತರ ನೌಕರರು ತಮ್ಮ

ಕರ್ತವ್ಯಗಳನ್ನು ವಹಿಸಿಕೊಳ್ಳುವ ಮುಂಚೆ, ಈ ಅಧಿನಿಯಮದ ಮೊದಲನೇ ಅನುಸೂಚಿಯಲ್ಲಿ ಕೊಟ್ಟಿರುವ ನಮೂನೆಯಲ್ಲಿ ನಿಷ್ಠೆ ಮತ್ತು ಗೋಪ್ಯತೆ ಘೋಷಣೆಯನ್ನು ಮಾಡತಕ್ಕದ್ದು.

(3) ಈ ಪ್ರಕರಣದಲ್ಲಿ ಒಳಗೊಂಡಿರುವ ಯಾವುದೂ, ಸಾಲ ಮಾಹಿತಿ ಕಂಪನಿಗಳ (ವಿನಿಯಮನ) ಅಧಿನಿಯಮ, 2005ರ ಮೇರೆಗೆ ಬಹಿರಂಗಪಡಿಸಿದ ಸಾಲ ಮಾಹಿತಿಗೆ ಅನ್ವಯವಾಗತಕ್ಕದ್ದಲ್ಲ.

**52. ನೇಮಕದಲ್ಲಿರುವ ದೋಷಗಳು ಕಾರ್ಯ ಇತ್ಯಾದಿಗಳನ್ನು ಅಸಿಂಧುಗೊಳಿಸದಿರುವುದು.**- (1) ಮಂಡಲಿಯ ಅಥವಾ ರಾಷ್ಟ್ರೀಯ ಬ್ಯಾಂಕಿನ ಯಾವುದೇ ಸಮಿತಿಯ ಯಾವುದೇ ಕಾರ್ಯವನ್ನು ಅಥವಾ ವ್ಯವಹರಣೆಯನ್ನು ಸಂದರ್ಭಾನುಸಾರ ಮಂಡಲಿಯಲ್ಲಿ ಅಥವಾ ಸಮಿತಿಯಲ್ಲಿ ಯಾವುದೇ ಸ್ಥಾನವು ಖಾಲಿ ಇರುವ ಅಥವಾ ಅದರ ರಚನೆಯಲ್ಲಿ ಯಾವುದೇ ದೋಷವಿರುವ ಕಾರಣಮಾತ್ರದಿಂದಲೇ ಪ್ರಶ್ನಿಸತಕ್ಕದ್ದಲ್ಲ.

(2) ಮಂಡಲಿಯ ನಿರ್ದೇಶಕನಾಗಿ ಅಥವಾ ರಾಷ್ಟ್ರೀಯ ಬ್ಯಾಂಕಿನ ಸಮಿತಿಯ ಸದಸ್ಯನಾಗಿ ಸದ್ಭಾವನೆಯಿಂದ ಕಾರ್ಯನಿರ್ವಹಿಸುವ ಯಾರೇ ವ್ಯಕ್ತಿಯು ಮಾಡಿದ ಯಾವುದೇ ಕಾರ್ಯವು, ನಿರ್ದೇಶಕನಾಗಿರಲು ಅವನನ್ನು ಅನರ್ಹಗೊಳಿಸಲಾಗಿದೆಯೆಂಬ ಅಥವಾ ಅವನ ನೇಮಕದಲ್ಲಿ ಇತರ ಯಾವುದೇ ದೋಷವಿತ್ತೆಂಬ ಕಾರಣಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

**52ಎ. ರಾಷ್ಟ್ರೀಯ ಬ್ಯಾಂಕಿನೊಂದಿಗಿನ ಒಪ್ಪಂದವು ನಿರ್ದೇಶಕರುಗಳು ನೇಮಕವಾದಾಗ ಚಾಲ್ತಿಯಲ್ಲಿರುವುದು.**- (1) ಸಾಲಗಳನ್ನು ಮತ್ತು ಮುಂಗಡಗಳನ್ನು ಮಂಜೂರುಮಾಡುವಾಗ ಕಂಪನಿಯೊಂದಿಗೆ ಅಥವಾ ನಿಗಮಿತ ನಿಕಾಯದೊಂದಿಗೆ, ರಾಷ್ಟ್ರೀಯ ಬ್ಯಾಂಕ್ ಮಾಡಿಕೊಂಡಿರುವ ಯಾವುದೇ ಒಪ್ಪಂದದಲ್ಲಿ, ಅಂಥ ಕಂಪನಿಯ ಅಥವಾ ನಿಗಮಿತ ನಿಕಾಯದ ಒಬ್ಬ ಅಥವಾ ಹೆಚ್ಚು ನಿರ್ದೇಶಕರನ್ನು ರಾಷ್ಟ್ರೀಯ ಬ್ಯಾಂಕ್ ನೇಮಕಮಾಡಲು ಅವಕಾಶ ಕಲ್ಪಿಸಿದ್ದರೆ, ಅಂಥ ಅವಕಾಶವು ಮತ್ತು ಅದಕ್ಕನುಸಾರವಾಗಿ ಮಾಡಿದ ನಿರ್ದೇಶಕರ ಯಾವುದೇ ನೇಮಕವು, ಕಂಪನಿಗಳ ಅಧಿನಿಯಮ, 1956 (1956ರ 1) ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ವಿವರಣ ಪತ್ರದಲ್ಲಿ, ಸಂಘದ ಅಂತರ್ ನಿಯಮಾವಳಿಗಳಲ್ಲಿ ಅಥವಾ ಕಂಪನಿಗೆ ಅಥವಾ ನಿಗಮಿತ ನಿಕಾಯಕ್ಕೆ ಸಂಬಂಧಪಟ್ಟ ಯಾವುದೇ ಇತರ ಲಿಖಿತದಲ್ಲಿ ತದ್ವಿರುದ್ಧವಾದುದು ಏನೇ ಒಳಗೊಂಡಿದ್ದರೂ ಸಿಂಧುವಾಗಿರತಕ್ಕದ್ದು ಮತ್ತು ಪರಿಣಾಮಕಾರಿಯಾಗಿರತಕ್ಕದ್ದು ಮತ್ತು ಷೇರು ಅರ್ಹತೆ, ವಯೋಮಿತಿ, ನಿರ್ದೇಶಕರ ಪದಗಳ ಸಂಖ್ಯೆ, ನಿರ್ದೇಶಕನನ್ನು ಪದದಿಂದ ತೆಗೆದುಹಾಕುವಿಕೆ – ಇವುಗಳಿಗೆ ಸಂಬಂಧಿಸಿದ ಯಾವುದೇ ಉಪಬಂಧವು ಮತ್ತು ಯಾವುದೇ ಅಂಥ ಕಾನೂನಿನಲ್ಲಿ ಅಥವಾ ಮೇಲೆ ಹೇಳಿದ ಲಿಖಿತದಲ್ಲಿ ಒಳಗೊಂಡಿರುವ ಅದೇ ರೀತಿಯ ಷರತ್ತುಗಳು ಮೇಲೆ ಹೇಳಿದ ಒಪ್ಪಂದಕ್ಕೆ ಅನುಸಾರವಾಗಿ ರಾಷ್ಟ್ರೀಯ ಬ್ಯಾಂಕ್ ನೇಮಕ ಮಾಡಿದ ಯಾರೇ ನಿರ್ದೇಶಕನಿಗೆ ಅನ್ವಯವಾಗತಕ್ಕದ್ದಲ್ಲ.

(2) ಮೇಲೆ ಹೇಳಿದಂತೆ ನೇಮಕವಾದ ಯಾರೇ ನಿರ್ದೇಶಕನು,–

(ಎ) ರಾಷ್ಟ್ರೀಯ ಬ್ಯಾಂಕಿನ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು ಮತ್ತು ರಾಷ್ಟ್ರೀಯ ಬ್ಯಾಂಕ್ ಲಿಖಿತ ಆದೇಶದ ಮೂಲಕ ಅವನನ್ನು ತೆಗೆದುಹಾಕಬಹುದು ಅಥವಾ ಯಾರೇ ವ್ಯಕ್ತಿಯನ್ನು ಬದಲಿಗೆ ನೇಮಿಸಬಹುದು.

(ಬಿ) ತಾನು ನಿರ್ದೇಶಕನಾಗಿರುವ ಕಾರಣಕ್ಕಾಗಿ ಮಾತ್ರವೇ ಅಥವಾ ನಿರ್ದೇಶಕನಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡದೇ ಬಿಟ್ಟ ಯಾವುದೇ ಕಾರ್ಯಕ್ಕಾಗಿ ಅಥವಾ ಅದಕ್ಕೆ ಸಂಬಂಧಪಟ್ಟ ಯಾವುದೇ ಕೃತ್ಯಕ್ಕಾಗಿ ಯಾವುದೇ ಬಾಧ್ಯತೆ ಅಥವಾ ಹೊಣೆಗಾರಿಕೆಯನ್ನು ವಹಿಸಿಕೊಳ್ಳತಕ್ಕದ್ದಲ್ಲ.

(ಸಿ) ಸರದಿಯಂತೆ ನಿವೃತ್ತನಾಗಲು ಗುರಿಯಾಗತಕ್ಕದ್ದಲ್ಲ ಮತ್ತು ಅಂಥ ನಿವೃತ್ತಿಗೆ ಗುರಿಯಾಗಬಹುದಾದ ನಿರ್ದೇಶಕರುಗಳ ಸಂಖ್ಯೆಯನ್ನು ಲೆಕ್ಕ ಹಾಕುವಾಗ ಅವನನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

**53. ಅಧಿನಿಯಮದ ಮೇರೆಗೆ ಕೈಗೊಂಡ ಕ್ರಮದ ರಕ್ಷಣೆ.**- ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಅಥವಾ ಕಾನೂನು ಬಲವನ್ನು ಹೊಂದಿರುವ ಉಪಬಂಧಗಳ ಅನುಸಾರವಾಗಿ

ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ನಷ್ಟ ಅಥವಾ ಹಾನಿಗಾಗಿ ರಾಷ್ಟ್ರೀಯ ಬ್ಯಾಂಕಿನ ವಿರುದ್ಧ ಅಥವಾ ರಾಷ್ಟ್ರೀಯ ಬ್ಯಾಂಕಿನ ಯಾರೇ ನಿರ್ದೇಶಕನ ಅಥವಾ ಯಾರೇ ಅಧಿಕಾರಿಯ ಅಥವಾ ಇತರ ನೌಕರನ ವಿರುದ್ಧ ಅಥವಾ ಈ ಅಧಿನಿಯಮದ ಮೇರೆಗೆ ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸಲು ರಾಷ್ಟ್ರೀಯ ಬ್ಯಾಂಕ್ ಅಧಿಕೃತಗೊಳಿಸಿದ ಯಾರೇ ಇತರ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**54. ನಿರ್ದೇಶಕರಿಗೆ ನಷ್ಟ ಭರ್ತಿ.-** (1) ಪ್ರತಿಯೊಬ್ಬ ನಿರ್ದೇಶಕನಿಗೆ ತನ್ನ ಕರ್ತವ್ಯಗಳ ನಿರ್ವಹಣೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ, ಅವನ ಉದ್ದೇಶಪೂರ್ವಕ ಕೃತ್ಯ ಅಥವಾ ಕರ್ತವ್ಯ ಲೋಪದಿಂದುಂಟಾದ ನಷ್ಟ ಅಥವಾ ವೆಚ್ಚಗಳನ್ನು ಹೊರತುಪಡಿಸಿ, ಇತರ ಎಲ್ಲಾ ನಷ್ಟಗಳು ಮತ್ತು ಅವನು ವಹಿಸಿದ ಎಲ್ಲಾ ವೆಚ್ಚಗಳ ಸಂಬಂಧದಲ್ಲಿ ರಾಷ್ಟ್ರೀಯ ಬ್ಯಾಂಕ್ ನಷ್ಟಭರ್ತಿ ಮಾಡಿಕೊಡತಕ್ಕದ್ದು.

(2) ರಾಷ್ಟ್ರೀಯ ಬ್ಯಾಂಕಿನ ಪರವಾಗಿ ಆರ್ಜಿಸಿದ ಅಥವಾ ತೆಗೆದುಕೊಂಡ ಯಾವುದೇ ಸ್ವತ್ತಿನ ಅಥವಾ ಭದ್ರತೆಯ ಅಥವಾ ಅದಕ್ಕೆ ಸಂಬಂಧಿಸಿದ ಮೌಲ್ಯವು ಅಥವಾ ಸ್ವಾಮ್ಯವು ಸಾಕಷ್ಟಿಲ್ಲದಿರುವುಕ್ಕಾಗಿ ಅಥವಾ ಕೊರತೆಯಿರುವುದಕ್ಕಾಗಿ ಅಥವಾ ರಾಷ್ಟ್ರೀಯ ಬ್ಯಾಂಕಿಗೆ ಬಾಧ್ಯನಾಗಿರುವ ಯಾರೇ ಋಣಿಯು ಅಥವಾ ಯಾರೇ ವ್ಯಕ್ತಿಯು ದಿವಾಳಿಯಾದುದರಿಂದಾಗಿ ಅಥವಾ ಅವನ ಅಕ್ರಮ ಕೃತ್ಯದಿಂದಾಗಿ ಅಥವಾ ತನ್ನ ಪದಕ್ಕೆ ಸಂಬಂಧಿಸಿದ ಕರ್ತವ್ಯಗಳ ನಿರ್ವಹಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಯಾವುದೇ ಕಾರ್ಯದಿಂದಾಗಿ ರಾಷ್ಟ್ರೀಯ ಬ್ಯಾಂಕಿಗೆ ಉಂಟಾಗುವ ಯಾವುದೇ ನಷ್ಟಕ್ಕೆ ಅಥವಾ ವೆಚ್ಚಗಳಿಗೆ ನಿರ್ದೇಶಕನು, ರಾಷ್ಟ್ರೀಯ ಬ್ಯಾಂಕಿನ ಯಾರೇ ಇತರ ನಿರ್ದೇಶಕನಿಗೆ ಅಥವಾ ಯಾರೇ ಅಧಿಕಾರಿಗೆ ಅಥವಾ ಇತರ ನೌಕರನಿಗೆ ಜವಾಬ್ದಾರನಾಗಿರತಕ್ಕದ್ದಲ್ಲ.

**55.** * * *

**56. ದಂಡನೆಗಳು.-** (1) ಯಾವುದೇ ವಿವರಣ ಪಟ್ಟಿಯಲ್ಲಿ, ಜಮಾ-ಖರ್ಚು ಪಟ್ಟಿಯಲ್ಲಿ ಅಥವಾ ಇತರ ದಸ್ತಾವೇಜಿನಲ್ಲಿ ಅಥವಾ ಈ ಅಧಿನಿಯಮದ ಯಾವುದೇ ಉಪಬಂಧದ ಮೂಲಕ ಅಥವಾ ಅದರ ಮೇರೆಗೆ ಅಥವಾ ಅದರ ಉದ್ದೇಶಗಳಿಗಾಗಿ ಅಗತ್ಯಪಡಿಸಿದ ಅಥವಾ ಒದಗಿಸಿದ ಯಾವುದೇ ಮಾಹಿತಿಯಲ್ಲಿ ಸುಳ್ಳೆಂದು ತಿಳಿದಿದ್ದೂ ಯಾವುದೇ ಮುಖ್ಯ ವಿವರದಲ್ಲಿ ಉದ್ದೇಶಪೂರ್ವಕವಾಗಿ ಸುಳ್ಳು ನಿರೂಪಣೆ ಮಾಡುವ ಅಥವಾ ಮುಖ್ಯ ಹೇಳಿಕೆಯನ್ನು ನೀಡಲು ಉದ್ದೇಶಪೂರ್ವಕವಾಗಿ ತಪ್ಪುವ ಯಾರೇ ಆಗಲಿ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವುದೇ ಪುಸ್ತಕವನ್ನು, ಲೆಕ್ಕಪತ್ರವನ್ನು ಅಥವಾ ಇತರ ದಸ್ತಾವೇಜನ್ನು ಹಾಜರುಪಡಿಸುವುದು ಅಥವಾ ಒದಗಿಸುವುದು ತನ್ನ ಕರ್ತವ್ಯವಾಗಿರುವಂಥ ಯಾರೇ ವ್ಯಕ್ತಿಯು ಹಾಗೆ ಹಾಜರುಪಡಿಸಲು ಅಥವಾ ಒದಗಿಸಲು ತಪ್ಪಿದರೆ, ಅವನು ಪ್ರತಿಯೊಂದು ಅಪರಾಧದ ಸಂಬಂಧದಲ್ಲಿ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಹಾಗೆ ಮುಂದುವರಿಸಿದ ತಪ್ಪಿತದ ಸಂದರ್ಭದಲ್ಲಿ, ಅಂಥ ಮೊದಲ ತಪ್ಪಿತಕ್ಕಾಗಿ ಅಪರಾಧ ನಿರ್ಣಯವಾದ ನಂತರ ಅಂಥ ಅಪರಾಧವು ಮುಂದುವರಿದ ಅವಧಿಯಲ್ಲಿ ಪ್ರತಿಯೊಂದು ದಿನಕ್ಕೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**57. ಕಂಪನಿಗಳಿಂದ ಅಪರಾಧಗಳು.-** (1) ಕಂಪನಿಯು ಅಪರಾಧವನ್ನು ಮಾಡಿರುವಲ್ಲಿ, ಆ ಅಪರಾಧವು ನಡೆದ ಕಾಲದಲ್ಲಿ, ಕಂಪನಿಯ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕಂಪನಿಯ ಪ್ರಭಾರದಲ್ಲಿದ್ದ, ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಆ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ಅಂಥ ಯಾರೇ ವ್ಯಕ್ತಿಯು ಆ ಅಪರಾಧವು ತನ್ನ ಅರಿವಿಗೆ ಬಾರದಂತೆ ನಡೆದಿದೆ ಎಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು

ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ, ಅವನನ್ನು ಈ ಅಧಿನಿಯಮದಲ್ಲಿ ಉಪಬಂಧಿಸಲಾದ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಯಾರೇ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆದಿದೆಯೆಂದು ರುಜುವಾತಾದಲ್ಲಿ ಅಥವಾ ಅವನ ಯಾವುದೇ ನಿರ್ಲಕ್ಷತೆಯಿಂದ ನಡೆದಿದೆಯೆಂದು ಆರೋಪಿಸಬಹುದಾಗಿರುವಲ್ಲಿ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

**ವಿವರಣೆ:**- ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) 'ಕಂಪನಿ' ಎಂದರೆ ಯಾವುದೇ ನಿಗಮಿತ ನಿಕಾಯ ಎಂದು ಅರ್ಥ ಮತ್ತು ಅದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ, ಮತ್ತು

(ಬಿ) ಫರ್ಮ್‌ಗೆ ಸಂಬಂಧಿಸಿದಂತೆ 'ನಿರ್ದೇಶಕ' ಎಂದರೆ ಆ ಫರ್ಮ್‌ನ ಪಾಲುದಾರ.

**58. 1891ರ ಬ್ಯಾಂಕರುಗಳ ಪುಸ್ತಕಗಳ ಸಾಕ್ಷ್ಯ ಅಧಿನಿಯಮವು ರಾಷ್ಟ್ರೀಯ ಬ್ಯಾಂಕಿಗೆ ಸಂಬಂಧಿಸಿದಂತೆ ಅನ್ವಯವಾಗುವುದು.**- ಬ್ಯಾಂಕರುಗಳ ಪುಸ್ತಕಗಳ ಸಾಕ್ಷ್ಯ ಅಧಿನಿಯಮ 1891 (1891ರ 18)ರ 2ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ ರಾಷ್ಟ್ರೀಯ ಬ್ಯಾಂಕ್ ಬ್ಯಾಂಕಾಗಿದ್ದರೆ ಹೇಗೋ ಹಾಗೆ ಆ ಅಧಿನಿಯಮವು ಅದಕ್ಕೆ ಸಂಬಂಧಿಸಿ ಅನ್ವಯವಾಗತಕ್ಕದ್ದು.

**59. ರಾಷ್ಟ್ರೀಯ ಬ್ಯಾಂಕಿನ ಸಮಾಪನ.**- ಕಂಪನಿಗಳ ಪರಿಸಮಾಪನಕ್ಕೆ ಸಂಬಂಧಿಸಿದ ಕಾನೂನಿನ ಯಾವುದೇ ಉಪಬಂಧವು ರಾಷ್ಟ್ರೀಯ ಬ್ಯಾಂಕಿಗೆ ಅನ್ವಯವಾಗತಕ್ಕದ್ದಲ್ಲ ಮತ್ತು ಕೇಂದ್ರ ಸರ್ಕಾರವು ಆದೇಶದ ಮೂಲಕ ಮತ್ತು ತಾನು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಹೊರತು ರಾಷ್ಟ್ರೀಯ ಬ್ಯಾಂಕನ್ನು ಸಮಾಪನಗೊಳಿಸತಕ್ಕದ್ದಲ್ಲ.

**60. ವಿನಿಯಮನಗಳನ್ನು ರಚಿಸಲು ಮಂಡಲಿಯ ಅಧಿಕಾರ.**- (1) ಮಂಡಲಿಯು, ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು ಮತ್ತು ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ, ಯಾವ ವಿಷಯಗಳಿಗೆ ಉಪಬಂಧವು ಅವಶ್ಯವಾಗಿರುವುದೋ ಅಥವಾ ವಿಹಿತವಾಗಿರುವುದೋ ಆ ಎಲ್ಲಾ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದಕ್ಕಾಗಿ ಈ ಅಧಿನಿಯಮಕ್ಕೆ ಅಸಂಗತವಾಗಿರದ ವಿನಿಯಮನಗಳನ್ನು ಅಧಿಸೂಚನೆಯ ಮೂಲಕ ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ವಿನಿಯಮನಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:-

(ಎ) ಸಲಹಾ ಪರಿಷತ್ತಿನ ನಿರ್ದೇಶಕರಿಗೆ ಅಥವಾ ಸದಸ್ಯರಿಗೆ ಸಂದಾಯ ಮಾಡಬಹುದಾದ ಫೀಜುಗಳು ಅಥವಾ ಭತ್ಯೆಗಳು;

(ಬಿ) ಮಂಡಲಿಯ ಅಥವಾ ಕಾರ್ಯಕಾರಿ ಸಮಿತಿಯ ಅಥವಾ ಸಲಹಾ ಪರಿಷತ್ತಿನ ಸಭೆಗಳ ಸಮಯ ಮತ್ತು ಸ್ಥಳ ಹಾಗೂ ಅಂಥ ಸಭೆಗಳಲ್ಲಿ ಕಾರ್ಯಕಲಾಪಗಳನ್ನು ನಡೆಸಲು ಅಗತ್ಯವಾದ ಕೋರಂ ಸೇರಿದಂತೆ ಅನುಸರಿಸಬೇಕಾದ ಕಾರ್ಯವಿಧಾನ;

(ಸಿ) ಕಾರ್ಯಕಾರಿ ಸಮಿತಿಯು ಒಳಗೊಂಡಿರಬೇಕಾದ ನಿರ್ದೇಶಕರ ಸಂಖ್ಯೆ ಮತ್ತು ಅಂಥ ಸಮಿತಿಯು ನಿರ್ವಹಿಸತಕ್ಕ ಪ್ರಕಾರ್ಯಗಳು;

(ಡಿ) ರಾಷ್ಟ್ರೀಯ ಬ್ಯಾಂಕ್ ಬಾಂಡುಗಳನ್ನು ಮತ್ತು ಡಿಬೆಂಚರುಗಳನ್ನು ಹೊರಡಿಸತಕ್ಕ ಮತ್ತು ವಿಮೋಚಿಸತಕ್ಕ ರೀತಿ ಮತ್ತು ಅವುಗಳ ನಿಬಂಧನೆಗಳು;

(ಇ) 6ನೇ ಪ್ರಕರಣದ (1)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗೆ ನಿರ್ದೇಶಕರುಗಳನ್ನು ಚುನಾಯಿಸುವ ರೀತಿ.

(ಎಫ್) * * *;

(ಜಿ) ರಾಷ್ಟ್ರೀಯ ಬ್ಯಾಂಕಿನ ಜಮಾ-ಖರ್ಚು ಪಟ್ಟಿಯನ್ನು ಮತ್ತು ಲೆಕ್ಕಪತ್ರಗಳನ್ನು ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ಸಿದ್ಧಪಡಿಸತಕ್ಕದ್ದೋ ಅಥವಾ ನಿರ್ವಹಿಸತಕ್ಕದ್ದೋ ಆ ನಮೂನೆ ಮತ್ತು ರೀತಿ;

(ಎಚ್) * * *

(ಐ) ಅಧಿಕಾರಿಗಳ ಮತ್ತು ಇತರ ನೌಕರರ ಕರ್ತವ್ಯಗಳು ಮತ್ತು ಅವರ ನಡತೆ, ಸಂಬಳಗಳು, ಭತ್ಯೆಗಳು ಮತ್ತು ಸೇವಾ ಷರತ್ತುಗಳು;

(ಜೆ) ರಾಷ್ಟ್ರೀಯ ಬ್ಯಾಂಕಿನ ನೌಕರರಿಗಾಗಿ ಭವಿಷ್ಯ ನಿಧಿ ಅಥವಾ ಇತರ ಪ್ರಯೋಜನ ನಿಧಿಗಳ ಸ್ಥಾಪನೆ ಮತ್ತು ನಿರ್ವಹಣೆ; ಮತ್ತು

(ಕೆ) ಮಂಡಲಿಯು ಯಾವ ಇತರ ವಿಷಯಗಳಿಗಾಗಿ ವಿನಿಯಮನಗಳ ಮೂಲಕ ಉಪಬಂಧ ಕಲ್ಪಿಸುವುದು ವಿಹಿತವೆಂದು ಅಥವಾ ಅವಶ್ಯವೆಂದು ಪರಿಗಣಿಸಬಹುದೋ ಆ ಇತರ ವಿಷಯಗಳು.

(3) ಈ ಅಧಿನಿಯಮದ ಮೇರೆಗೆ ಮಂಡಲಿಯು ರಚಿಸಬಹುದಾದ ಯಾವುದೇ ವಿನಿಯಮನಗಳನ್ನು, ರಾಷ್ಟ್ರೀಯ ಬ್ಯಾಂಕಿನ ಸ್ಥಾಪನೆಯ ದಿನಾಂಕದಿಂದ ಮೂರು ತಿಂಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ ರಿಸರ್ವ್ ಬ್ಯಾಂಕ್ ರಚಿಸಬಹುದು ಮತ್ತು ಹಾಗೆ ರಚಿಸಲಾದ ಯಾವುದೇ ವಿನಿಯಮನವನ್ನು ಈ ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳನ್ನು ಚಲಾಯಿಸಿ ಮಂಡಲಿಯು ಮಾರ್ಪಾಟು ಮಾಡಬಹುದು ಅಥವಾ ರದ್ದುಗೊಳಿಸಬಹುದು.

(4) ಈ ಪ್ರಕರಣದ ಮೂಲಕ ಪ್ರದತ್ತವಾದ ವಿನಿಯಮನಗಳನ್ನು ರಚಿಸುವ ಅಧಿಕಾರವು, ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕಿಂತ ಮುಂಚಿತವಲ್ಲದ ದಿನಾಂಕದಿಂದ ವಿನಿಯಮನಗಳನ್ನು ಅಥವಾ ಅವುಗಳಲ್ಲಿ ಯಾವುದನ್ನಾದರೂ ಪೂರ್ವಾನ್ವಯವಾಗಿ ಜಾರಿಗೆ ತರುವ ಅಧಿಕಾರವನ್ನು ಒಳಗೊಳ್ಳತಕ್ಕದ್ದು. ಆದರೆ, ಅಂಥ ವಿನಿಯಮನಗಳು ಅನ್ವಯವಾಗಬಹುದಾದಂಥ ಯಾರೇ ವ್ಯಕ್ತಿಯ ಹಿತಾಸಕ್ತಿಗೆ ಪ್ರತಿಕೂಲವಾಗಿ ಬಾಧಿತವಾಗುವ ಹಾಗೆ ಯಾವುದೇ ವಿನಿಯಮನವನ್ನು ಪೂರ್ವಾನ್ವಯವಾಗಿ ಜಾರಿಗೆ ತರತಕ್ಕದ್ದಲ್ಲ.

(5) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ವಿನಿಯಮನವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸುವಂತೆ ಮಾಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ವಿನಿಯಮನದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ವಿನಿಯಮನವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ವಿನಿಯಮನವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ವಿನಿಯಮನದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**61.** * * *

**62. ತೊಂದರೆಯನ್ನು ನಿವಾರಿಸುವ ಅಧಿಕಾರ.**- ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ, ಆದೇಶದ ಮೂಲಕ ತೊಂದರೆಯನ್ನು ನಿವಾರಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

## ಮೊದಲನೇ ಅನುಸೂಚಿ

**(51 (2)ನೇ ಪ್ರಕರಣವನ್ನು ನೋಡಿ)**

**ನಿಷ್ಠೆ ಮತ್ತು ಗೋಪ್ಯತೆಯ ಘೋಷಣೆ**

ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ (ಸಂದರ್ಭಾನುಸಾರ) ನಿರ್ದೇಶಕನಾಗಿ, ಲೆಕ್ಕಪರಿಶೋಧಕನಾಗಿ, ಅಧಿಕಾರಿಯಾಗಿ ಅಥವಾ ಇತರ ನೌಕರನಾಗಿ ಮತ್ತು ಸದರಿ ರಾಷ್ಟ್ರೀಯ ಬ್ಯಾಂಕಿನಲ್ಲಿ ನಾನು ಧಾರಣ ಮಾಡಿರುವ ಪದಕ್ಕೆ ಅಥವಾ ಸ್ಥಾನಕ್ಕೆ ಸೂಕ್ತವಾಗಿ ಸಂಬಂಧಿಸಿದಂತೆ, ನಾನು ಮಾಡಬೇಕೆಂದು ಅಗತ್ಯಪಡಿಸಿದ ಕರ್ತವ್ಯಗಳನ್ನು ನಾನು ವಿಶ್ವಾಸಪೂರ್ವಕವಾಗಿ, ನಿಜವಾಗಿ ಮತ್ತು ನನ್ನ ಕೌಶಲ್ಯ ಮತ್ತು ಸಾಮರ್ಥ್ಯದಷ್ಟರ ಮಟ್ಟಿಗೆ ನಿರ್ವಹಿಸುತ್ತೇನೆಂದು ಮತ್ತು ನೆರವೇರಿಸುತ್ತೇನೆಂದು ಈ ಮೂಲಕ ಘೋಷಿಸುತ್ತೇನೆ.

ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ವ್ಯವಹಾರಗಳಿಗೆ ಅಥವಾ ಸದರಿ ರಾಷ್ಟ್ರೀಯ ಬ್ಯಾಂಕಿನೊಂದಿಗೆ ಯಾವುದೇ ವ್ಯವಹಾರ ಹೊಂದಿರುವ ಯಾರೇ ವ್ಯಕ್ತಿಯ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಅದಕ್ಕೆ ಕಾನೂನುಸಮ್ಮತವಾಗಿ ಹಕ್ಕು ಹೊಂದಿಲ್ಲದ ಯಾರೇ ವ್ಯಕ್ತಿಗೆ ತಿಳಿಸುವುದಿಲ್ಲವೆಂದೂ ಅಥವಾ ತಿಳಿಸಲು ಅವಕಾಶ ಕೊಡುವುದಿಲ್ಲವೆಂದೂ ಅಥವಾ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿಗೆ ಸೇರಿದ ಅಥವಾ ಅದರ ಸ್ವಾಧೀನದಲ್ಲಿರುವ ಮತ್ತು ಸದರಿ ರಾಷ್ಟ್ರೀಯ ಬ್ಯಾಂಕಿನ ವ್ಯವಹಾರಗಳಿಗೆ ಸಂಬಂಧಿಸಿದ ಅಥವಾ ಸದರಿ ರಾಷ್ಟ್ರೀಯ ಬ್ಯಾಂಕಿನೊಂದಿಗೆ ಯಾವುದೇ ವ್ಯವಹಾರ ಹೊಂದಿರುವ ಯಾರೇ ವ್ಯಕ್ತಿಯ ವ್ಯವಹಾರಕ್ಕೆ ಸಂಬಂಧಿಸಿದ ಯಾವುವೇ ಪುಸ್ತಕಗಳನ್ನು ಅಥವಾ ದಸ್ತಾವೇಜುಗಳನ್ನು ಪರಿಶೀಲಿಸಲು ಅಥವಾ ಪರಿಶೀಲಿಸುವ ಅವಕಾಶವನ್ನು ಹೊಂದಲು ನಾನು ಅಂಥ ಯಾರೇ ವ್ಯಕ್ತಿಗೆ ಅವಕಾಶ ಕೊಡುವುದಿಲ್ಲವೆಂದೂ ಸಹ ನಾನು ಈ ಮೂಲಕ ಘೋಷಿಸುತ್ತೇನೆ.

ನನ್ನ ಸಮಕ್ಷಮ ಸಹಿ ಮಾಡಲಾಗಿದೆ. (ಸಹಿ)

## ಎರಡನೇ ಅನುಸೂಚಿ

[ಬಿಟ್ಟುಬಿಡಲಾಗಿದೆ.]

* * *